

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 23 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 275 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ರಾಜ್ಯ ವಿಧಾನಮಂಡಲದ ವಿಶೇಷ ಅಧಿವೇಶನದಲ್ಲಿ ನಡೆಯಬಾರದ್ದು ನಡೆದೋಯ್ತು...!?

ಮೂರು ವಾಕ್ಯದ ತಮ್ಮದೇ ಭಾಷಣ ಓದಿ ಸದನದಿಂದ ಹೊರ ನಡೆದ ರಾಜ್ಯಪಾಲರು...

ಬೆಂಗಳೂರು, ಜ.22(ಕೆಎಂಶಿ)– ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಬದಿಗಿರಿಸಿ, ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮೂರು ವಾಕ್ಯಗಳಲ್ಲಿ ಸರ್ಕಾರದ ಸಾಧನೆಯನ್ನು ಓದಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸದನದಿಂದ ನಿರ್ಗಮಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಸೇರ್ಪಡೆ ಮಾಡಿದ್ದ 11 ಅಂಶಗಳನ್ನು ಕೈಬಿಟ್ಟಲ್ಲಿ ಮಾತ್ರ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುತ್ತೇನೆ. ಇಲ್ಲದಿದ್ದರೆ, ತಾವು ಬರುವುದೇ ಇಲ್ಲ ಎಂದು ನಿನ್ನೆ ಸರ್ಕಾರದ ಮುಖ್ಯಕಾರ್ಯದರ್ಶಿಗಳಿಗೆ ಸಂದೇಶ ರವಾನಿಸಿದ್ದರು. ಆದರೆ, ಇಂದು ತಮ್ಮ ನಿರ್ಧಾರದಿಂದ ಹಿಂದೆ ಸರಿದು, ನಿಗದಿತ ಸಮಯಕ್ಕೆ ವಿಧಾನಸಭೆಗೆ ಆಗಮಿಸಿ, ತಾವು ಸಿದ್ಧಪಡಿಸಿ ತಂದಿದ್ದ ಮೂರು ವಾಕ್ಯಗಳನ್ನು ಒಂದು ನಿಮಿಷದಲ್ಲಿ ಓದಿ ಸದನದಿಂದ ನಿರ್ಗಮಿಸಿದರು.

ನನ್ನ ಸರ್ಕಾರ ರಾಜ್ಯದ ಆರ್ಥಿಕ, ಸಾಮಾಜಿಕ, ಭೌದ್ಧಿಕ ಅಭಿವೃದ್ಧಿಗೆ ಬದ್ಧವಾಗಿದೆ. ರಾಜ್ಯದ ಆರ್ಥಿಕ, ಸಾಮಾಜಿಕ, ಭೌದ್ಧಿಕ ವಿಕಾಸವನ್ನು ನನ್ನ ಸರ್ಕಾರ ದುಪ್ಪಟ್ಟುಗೊಳಿಸಲು ಕಟಿಬದ್ಧವಾಗಿದೆ. ಜೈಹಿಂದ್, ಜೈ ಕರ್ನಾಟಕ. ಈ ವಾಕ್ಯಗಳನ್ನು ಓದಿ ಹೊರ ನಡೆಯುತ್ತಿದ್ದಂತೆ ರಾಜ್ಯಪಾಲರ ನಡೆಯನ್ನು ವಿರೋಧಿಸಿ ಆಡಳಿತ ಸದಸ್ಯರು ಧಿಕ್ಕಾರದ ಘೋಷಣೆಗಳನ್ನು ಕೂಗಿ,

■ 6ನೇ ಪುಟಕ್ಕೆ

ರಾಜ್ಯಪಾಲರ ಮೇಲೆ ಮುಗಿಬಿದ್ದ ಆಡಳಿತ ಪಕ್ಷದ ಶಾಸಕರು; ರಾಜ್ಯಪಾಲರನ್ನು ಬಿಗಿ ಭದ್ರತೆಯಲ್ಲಿ ಕರೆದೊಯ್ದ ಮಾರ್ಷಲ್‌ಗಳು, ಲೋಕಭವನದ ಅಂಗರಕ್ಷಕರು






ವಿಧಾನಮಂಡಲ ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಲು ಆಗಮಿಸಿದ ರಾಜ್ಯಪಾಲರು, ಸರ್ಕಾರದ ಭಾಷಣ ಪ್ರತಿ ಬದಿಗಿರಿಸಿ ತಾವೇ ಸಿದ್ಧಪಡಿಸಿಕೊಂಡು ತಂದಿದ್ದ ಸಂಕ್ಷಿಪ್ತ ಭಾಷಣವನ್ನು ಮಾಡಿದ ಬಳಿಕ ಭಾರೀ ಗದ್ದಲದ ನಡುವೆ ಸದನದಿಂದ ನಿರ್ಗಮಿಸಿದ ದೃಶ್ಯಾವಳಿಗಳು....

ಜನಪ್ರತಿನಿಧಿಗಳ ಸಭೆಗೆ ಅವಮಾನ ಮಾಡಿದ್ದಾರೆ

- ಕೇಂದ್ರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ
- ರಾಜ್ಯಪಾಲರ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಗಲು ಚಿಂತನೆ



ಬೆಂಗಳೂರು, ಜ.22(ಕೆಎಂಶಿ)– ವರ್ಷದ ಮೊದಲ ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಓದದೇ, ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುವ ಮೂಲಕ ಜನಪ್ರತಿನಿಧಿಗಳ ಸಭೆಗೆ ಅವಮಾನ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವುದು ಸಂವಿಧಾನದ ರೀತ್ಯಾ ರಾಜ್ಯಪಾಲರ ಕರ್ತವ್ಯವಾಗಿದೆ. ಸಂವಿಧಾನ ಕಲಂ 176 ಮತ್ತು 163 ರನ್ವಯ ಸಚಿವ ಸಂಪುಟ ಸಿದ್ಧಪಡಿಸಿರುವ ಭಾಷಣ ಓದಲೇಬೇಕೆಂಬ ನಿಯಮವಿದೆ. ರಾಜ್ಯಪಾಲರು ಸಿದ್ಧಪಡಿಸಿದ ಭಾಷಣ

■ 6ನೇ ಪುಟಕ್ಕೆ

ಸಿವಿಲ್ ಸೇವಾ ಹುದ್ದೆಗಳ ನೇಮಕಾತಿಗೆ 5 ವರ್ಷ ವಯೋಮಿತಿ ಸಡಿಲಿಕೆ

- ರಾಜ್ಯ ಸಂಪುಟ ಸಭೆ ಸಮ್ಮತಿ
- ಮಠಗಳಿಗೆ ಜಾಗ ಮಂಜೂರು

ಬೆಂಗಳೂರು, ಜ.22– ಕರ್ನಾಟಕ ಸಿವಿಲ್ ಸೇವಾ ಹುದ್ದೆಗಳ ನೇಮಕಾತಿಗೆ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಮಿತಿ ಸಡಿಲಿಕೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

2027ರ ಡಿಸೆಂಬರ್ 31ರವರೆಗೆ ಹೊರಡಿಸಲಾಗಿರುವ ಎಲ್ಲಾ ಅಧಿಸೂಚನೆಗಳಿಗೆ ಅನ್ವಯ ಆಗುವಂತೆ ತೀರ್ಮಾನ ಕೈಗೊಳ್ಳಲಾಗಿದೆ. ಸಾಮಾನ್ಯ ವರ್ಗಕ್ಕೆ ಈಗ ಇರುವ 35 ವರ್ಷದ ವಯೋಮಿತಿ ಇದು 40 ವರ್ಷಕ್ಕೆ ಅನ್ವಯ ಆಗುವಂತೆ ವಿಸ್ತರಣೆಯಾಗಿದೆ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ಈಗ ಇರುವ 38 ವರ್ಷ ವಯೋಮಿತಿ 43 ವರ್ಷಗಳಿಗೆ ಅನ್ವಯವಾಗುವಂತೆ ವಿಸ್ತರಣೆ ಆಗಿದೆ.

ಇಂದು ನಡೆದ ಜಂಟಿ ಅಧಿವೇಶನದಲ್ಲಿ ಸರ್ಕಾರ ಭಾಷಣ ಓದದೇ ತೆರಳಿದ ರಾಜ್ಯಪಾಲರ ನಡೆಗೆ ಸಚಿವ ಸಂಪುಟ ಸಭೆಯಲ್ಲಿ ಅಸಮಾಧಾನ ಹೊರಹಾಕಲಾಗಿದೆ. ಗೋ ಬ್ಯಾಕ್ ಗವರ್ನರ್ ನಿರ್ಣಯ ಮಾಡಲು ಚರ್ಚೆ ನಡೆಸಲಾಗಿದೆ. ರಾಜ್ಯಪಾಲರನ್ನ ವಾಪಸ್ ಕರೆಸಿಕೊಳ್ಳುವಂತೆ ನಿರ್ಣಯ ತೆಗೆದುಕೊಳ್ಳುವ ಬಗ್ಗೆ ಗಂಭೀರ ಚರ್ಚೆ ನಡೆದಿದೆ. ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳುವಂತೆ ರಾಷ್ಟ್ರಪತಿಗಳಿಗೆ ಪತ್ರ ಬರೆಯುವ ಸಂಬಂಧ ಚರ್ಚೆ ನಡೆಸಲಾಗಿದೆ. ಗವರ್ನರ್ ಗೋ ಬ್ಯಾಕ್ ಅಭಿಯಾನ ನಡೆಸುವ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಲಾಗಿದೆ.

■ 6ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ
@ ತೊಳಸಿ
ತೊಳಸಿ ಜ್ಯೂಯಲ್ಸ್
THOLASI JEWELS
₹ 14,145/-
ಹಿಂದಿನ ದಿನದ ಬೆಲೆ
ಅಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221-200926

YESH MEGA CITY
Last 5 Plots
@1299/-Sqft
75% Loan
Ready to Build
9742727000

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ
ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582



ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹ ಕಲ್ಪಿಸಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಸೂಚನೆ



ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಗುರುವಾರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಪೌರಕಾರ್ಮಿಕರ ಪರಿಸ್ಥಿತಿ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

“ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಸ್ವಚ್ಛತಾ ಕಾರ್ಯದ ಟೆಂಡರ್ ಪಡೆದಿರುವ ಏಜೆನ್ಸಿಯವರು ಕಡಿಮೆ ಸಂಖ್ಯೆಯ ಪೌರಕಾರ್ಮಿಕರನ್ನು ನಿಯೋಜಿಸಿ, ಅವರಿಂದ ಹೆಚ್ಚಿನ ಕೆಲಸ ಮಾಡಿಸುತ್ತಿದ್ದಾರೆ. ಅಲ್ಲದೆ ಅವರಿಗೆ ಸರಿಯಾಗಿ ವೇತನವನ್ನೂ ಪಾವತಿಸುತ್ತಿಲ್ಲ ಎಂಬ ದೂರು ಬಂದಿದೆ. ಈ ಬಗ್ಗೆ ಪರಿಶೀಲನೆ ನಡೆಸಿ, ಅಲ್ಲಿನ ಸ್ವಚ್ಛತಾ ಸಿಬ್ಬಂದಿಗೆ ಸೂಕ್ತ ಸೌಲಭ್ಯ ಒದಗಿಸಬೇಕು.
–ಪಿ.ರಘು, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ

ಮೈಸೂರು,ಜ.22(ಎಂಟಿವೈ)– ಪೌರಕಾರ್ಮಿಕರಿಗೆ ವಿಶ್ರಾಂತಿಗೃಹ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಸೂಚಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯ್ತಿಯ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿದಿನ ಸ್ವಚ್ಛತಾ ಕಾರ್ಯದಲ್ಲಿ ತೊಡಗುವ ಪೌರಕಾರ್ಮಿಕರು ಕೆಲಸ ಮುಗಿದ ಬಳಿಕ ಆಹಾರ ಸೇವನೆ ಹಾಗೂ ವಿಶ್ರಾಂತಿ ಪಡೆಯಲು ವಿಶ್ರಾಂತಿಗೃಹಗಳ ಅಗತ್ಯವಿದೆ ಎಂದರು.

ಸಮಾಜದ ಸ್ವಚ್ಛತೆ ಹಾಗೂ ಆರೋಗ್ಯ ಕಾಪಾಡುವ ಕಾಯಕದಲ್ಲಿ ಪೌರಕಾರ್ಮಿಕರ ಪಾತ್ರ ಬಹುಮುಖ್ಯವಾಗಿದೆ. ಪ್ರತಿದಿನ ರಸ್ತೆಬದಿ ಬಿದ್ದಿರುವ ತ್ಯಾಜ್ಯ ಸಂಗ್ರಹಿಸಿ ಸ್ವಚ್ಛಗೊಳಿಸುವ ಪೌರಕಾರ್ಮಿಕರಿಗೆ ಮೂಲ ಸೌಲಭ್ಯ ಕಲ್ಪಿಸಬೇಕು. ನಗರಪಾಲಿಕೆ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ವಿಶ್ರಾಂತಿಗೃಹ ನಿರ್ಮಿಸಿಕೊಡುವ ನಿಟ್ಟಿನಲ್ಲಿ ಎದುರಾಗಿರುವ ತೊಡಕು ನಿವಾರಿಸುವ ಸಂಬಂಧ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಸತಿ–ಜೀವವಿಮೆ ಕಲ್ಪಿಸಿ: ಪೌರಕಾರ್ಮಿಕರಿಗೆ ವಿಮಾ ಸೌಲಭ್ಯವಿದ್ದರೆ ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲರಿಗೂ ಕಡ್ಡಾಯವಾಗಿ ಜೀವ ವಿಮೆ ಮಾಡಿಸಿ, ವರದಿ ನೀಡಬೇಕು. ನಿವೇಶನ ಹಾಗೂ ವಸತಿ ರಹಿತ ಪೌರಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಲು ಆದ್ಯತೆ ನೀಡಬೇಕು. ಪೌರಕಾರ್ಮಿಕರಿಗೆ ಸರ್ಕಾರ ನೀಡುವ ಸವಲತ್ತುಗಳ ಬಗ್ಗೆ ತಿಳಿಸಿಕೊಡಬೇಕು. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಮುಖ್ಯ ವಾಹಿನಿಗೆ ತರಲು ಸರ್ಕಾರ ಹಲವು ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಬಗ್ಗೆ ಮಾಹಿತಿ ಇಲ್ಲದವರನ್ನು ಪತ್ತೆ ಮಾಡಿ, ಕಾನೂನು ಅರಿವು ಮೂಡಿಸುವುದರ ಜೊತೆಗೆ ಸೂಕ್ತ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಏಜೆನ್ಸಿಗಳ ವಂಚನೆ ತಡೆಯಲು ಕ್ರಮ: ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಕಳೆದ ಸಾಲಿನಲ್ಲಿ ಎಪಿಎಂಸಿಯಲ್ಲಿ ಕಾರ್ಯನಿರ್ವಹಿಸಿರುವ ಪೌರಕಾರ್ಮಿಕರಿಗೆ ಪಿಎಫ್ ಹಾಗೂ ಇಎಸ್‌ಐಗೆ ಏಜೆನ್ಸಿಯಿಂದ ಹಣ ಪಾವತಿಸಿಲ್ಲ ಎಂದು ದೂರು ಬಂದಿದೆ. ಈ ಬಗ್ಗೆ ಪರಿಶೀಲಿಸಿ, ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಾರ್ಮಿಕ ಇಲಾಖೆಯಲ್ಲಿ ದೂರು ದಾಖಲಾದ ಬಳಿಕ ಕಪ್ಪು ಪಟ್ಟಿಗೆ ಸೇರಿರುವ ಬಾಹ್ಯ ಗುತ್ತಿಗೆ ಸೇವೆ ಏಜೆನ್ಸಿಗಳ ಬಗ್ಗೆ ಮಾಹಿತಿ ನೀಡಿದರೆ, ಅಂತಹ ಸಂಸ್ಥೆಗಳಿಗೆ ಕಾರ್ಯಾದೇಶ ನೀಡದಂತೆ ತಡೆಯಬಹುದು. ಪೌರಕಾರ್ಮಿಕರಿಗೆ ಏಜೆನ್ಸಿಗಳು ನೀಡುವ ವೇತನ ಸರಿಯಾಗಿದೆಯೇ ಪರಿಶೀಲಿಸುವುದರ ಜೊತೆಗೆ ಪೌರಕಾರ್ಮಿಕರ ಬ್ಯಾಂಕ್ ಪಾಸ್‌ಬುಕ್ ಗಮನಿಸಿದರೆ ಏಜೆನ್ಸಿಯಿಂದ ಆಗುವ ವಂಚನೆ ತಡೆಗಟ್ಟಬಹುದು ಎಂದು ತಿಳಿಸಿದರು.

ವರದಿ ನೀಡಿ: ಆಯೋಗದ ಕಾರ್ಯದರ್ಶಿ ಸುಮಾಯ್ ರೂಹಿ ಮಾತನಾಡಿ, ಪೌರಕಾರ್ಮಿಕರಿಗೆ ಗುರುತಿನ ಚೀಟಿ, ಪೇ ಸ್ಲಿಪ್, ಪಿಎಫ್, ಇಎಸ್‌ಐ ಪಾವತಿ, ಜೀವ ವಿಮೆ ಸೌಲಭ್ಯ ಕಲ್ಪಿಸಿರುವ ಬಗ್ಗೆ ಪೂರ್ಣ ವರದಿಯನ್ನು ಆಯೋಗಕ್ಕೆ ಕಳುಹಿಸಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಸಿಇಓ ಯುಕೇಶ್ ಕುಮಾರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರ ಅಧಿಕಾರಿಗಳು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದ ಪರಿಸರ, ಪಾರಂಪರಿಕತೆಗೆ ಧಕ್ಕೆಯಾಗದಂತೆ ‘ಪ್ರಸಾದ್’ ಯೋಜನೆಯಡಿ ಅಭಿವೃದ್ಧಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಭರವಸೆ



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪ್ರಸಾದ್ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಶಾಸಕ ಜಿ.ಟಿ.ದೇವೇಗೌಡ ಮತ್ತಿತರರು ಉಪಸ್ಥಿತರಿದ್ದರು.

45.70 ಕೋಟಿ ರೂ. ಅನುದಾನ ಮಂಜೂರು

“ಪ್ರಸಾದ ಯೋಜನೆಯಡಿ 45.70 ಕೋಟಿ ರೂ. ಅನುದಾನ ಮಂಜೂರಾಗಿದೆ. ಭಕ್ತಾದಿಗಳ ಸುಗಮ ದರ್ಶನಕ್ಕೆ ವ್ಯವಸ್ಥೆ ಮಾಡಲು, ಸರತಿ ಸಾಲಿಗೆ ಕಲ್ಲಿನ ಕ್ಯೂ ಮಂಟಪ ಮಾಡಲಾಗುತ್ತಿದೆ. ಮಹಾಬಲೇಶ್ವರ ದೇವಸ್ಥಾನದ ಪಕ್ಕದಲ್ಲಿ ಕ್ಯೂ ಸಾಗಲಿದ್ದು, ದೇವಸ್ಥಾನದ ಮುಂಭಾಗದಲ್ಲಿ ಬಂದು ಸೇರುತ್ತದೆ.
–ಜಿ.ಲಕ್ಷ್ಮೀಕಾಂತ ರೆಡ್ಡಿ, ಡಿಸಿ.

ಮೈಸೂರು, ಜ.22(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ಪರಿಸರ ಹಾಗೂ ಪಾರಂಪರಿಕತೆಗೆ ಧಕ್ಕೆಯಾಗದಂತೆ ‘ಪ್ರಸಾದ್’ ಯೋಜನೆಯಡಿ ಅಭಿವೃದ್ಧಿ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದ್ದಾರೆ.

ಮೈಸೂರು ಜಿಪಂ ಸಭಾಂಗಣದಲ್ಲಿ ಪ್ರಸಾದ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಲು ಅಭಿವೃದ್ಧಿ ಮಾಡಲಾಗುತ್ತಿದೆ ಎಂದರು.


ಹಾಗೆಯೇ ಚಾಮುಂಡಿಬೆಟ್ಟದಲ್ಲಿ ವಾಸಿಸುವವರಿಗೂ ಅಭಿವೃದ್ಧಿ ಕಾರ್ಯಗಳಿಂದ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಲಾಗುವುದು. ಈ ನಿಟ್ಟಿನಲ್ಲಿ ಬೆಟ್ಟದ ನಿವಾಸಿಗಳಿಂದ ಅಹವಾಲು–ಅನಿಸಿಕೆಗಳನ್ನು ಸ್ವೀಕರಿಸಲಾಗುತ್ತಿದೆ. ಅವರ ಸಲಹೆ ಪಡೆದು ಅದರಂತೆ ಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತ್ಯೇಕ ವ್ಯವಸ್ಥೆಯಾಗಬೇಕು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ವಿವಿಐಪಿ ದರ್ಶನದ ವೇಳೆ ಅವರೊಂದಿಗೆ ಸುಮಾರು 50 ಜನರು ಏಕಾಏಕಿ ನುಗ್ಗುವುದರಿಂದ ಸಮಸ್ಯೆಯಾಗುತ್ತಿದ್ದು, ಇದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು. ಹಾಗೆಯೇ ಭಕ್ತಾದಿಗಳು ದೇವಸ್ಥಾನದೊಳಗೆ ಪ್ರವೇಶ ಪಡೆದು, ದರ್ಶನ ಪಡೆದ ನಂತರ ಹೊರಗಡೆ ಬರಲು ಪ್ರತ್ಯೇಕ ವ್ಯವಸ್ಥೆಯಾಗಬೇಕು. ಬೆಟ್ಟದಲ್ಲಿ ಅಂಗಡಿ–ಮಳಿಗೆ ನಡೆಸಲು ಅರ್ಹರಿಗೆ ಮಾತ್ರವೇ ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು.

ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಮತ್ತಿತರರು ಹಾಜರಿದ್ದರು.

ಮೈಸೂರು ಯೋಗ ಒಕ್ಕೂಟಕ್ಕೆ 25ರ ಸಂಭ್ರಮ

ಜ.25ಕ್ಕೆ ಸೂರ್ಯ ನಮಸ್ಕಾರ, ಸೂರ್ಯಯಜ್ಞ



ಮೈಸೂರು, ಜ.22(ಜಿಎ)–ಮೈಸೂರು ಯೋಗ ಒಕ್ಕೂಟದ 25ನೇ ವಾರ್ಷಿಕೋತ್ಸವ ಹಾಗೂ ರಥ ಸಪ್ತಮಿ ಅಂಗವಾಗಿ ಜ.25 ರಂದು ಬೆಳಿಗ್ಗೆ 6ಕ್ಕೆ ಸಾಮೂಹಿಕ 108 ಸೂರ್ಯ ನಮಸ್ಕಾರ ಮತ್ತು ಸೂರ್ಯ ಯಜ್ಞ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮೈಸೂರು ಯೋಗ ಒಕ್ಕೂಟ 25 ವರ್ಷ ಪೂರೈಸಿದ್ದು, ವಾರ್ಷಿಕೋತ್ಸವ ಕಾರ್ಯಕ್ರಮವನ್ನು ನಗರ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ನಡೆಯಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಎಸ್‌ಎಸ್ ಯೋಗ ಫೌಂಡೇಶನ್ ಅಧ್ಯಕ್ಷ ಶ್ರೀಹರಿ ದ್ವಾರಕನಾಥ್, ಎಪಿಎನ್ ಪ್ರಾಪರ್ಟೀಸ್ ಮೈಸೂರು ಮ್ಯಾನೇಜಿಂಗ್ ಪಾರ್ಟ್ನರ್ ಎ.ಪಿ.ನಾಗೇಶ್, ಸಮಾಜ ಸೇವಕ ರಘುರಾಂ ವಾಜಪೇಯಿ ಆಗಮಿಸಲಿದ್ದಾರೆ. ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್ ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಒಕ್ಕೂಟದ ಎಲ್ಲಾ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಎಂ.ಕೆ.ಆಗ್ರೋಟೆಕ್ ಲಿಮಿಟೆಡ್ ನ ಮ್ಯಾನೇಜಿಂಗ್ ಡೈರೆಕ್ಟರ್ ಸುಭಾನ್ ಖಾನ್ ಅವರನ್ನು ಸನ್ಮಾನಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಹಲವಾರು ಯೋಗ ಪಟುಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘಸಂಸ್ಥೆಗಳು ಹಾಗೂ ಯೋಗಾಸಕ್ತರು, ಸಾರ್ವಜನಿಕರು ಭಾಗವಹಿಸಲು ಅವಕಾಶವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಆಸಕ್ತರು ಭಾಗಿಗಳಾಗಿ ಯೋಗದ ಸದುಪಯೋಗ ಪಡೆದುಕೊಳ್ಳೋಣ. ಹೆಚ್ಚಿನ ಮಾಹಿತಿಗಾಗಿ 9481170530, 9886083118 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷರಾದ ಡಾ.ಎ.ಎಸ್.ಚಂದ್ರಶೇಖರ್, ಟಿ.ಜಲೇಂದ್ರ ಕುಮಾರ್, ಕಾರ್ಯಾಧ್ಯಕ್ಷರಾದ ಡಾ.ಬಿ.ಪಿ. ಮೂರ್ತಿ, ಎಂ.ಎಸ್.ಶಿವಪ್ರಕಾಶ್, ಖಜಾಂಚಿ ನರಸಿಂಹ, ಪ್ರಸಾದ್ ಉಪಸ್ಥಿತರಿದ್ದರು.

ಕೇನ್ಸ್ ಟೆಕ್ನಾಲಜಿ ಇಂಡಿಯಾಕ್ಕೆ ರೋಟರಿ ಮೈಸೂರು ಮಿಡ್ ಟೌನ್ ಜೇಯಸ್ ಸಿಎಸ್‌ಆರ್ ಪ್ರಶಸ್ತಿ



ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಕೇನ್ಸ್ ಮುಖ್ಯ ಹಣಕಾಸು ಅಧಿಕಾರಿ ಜಯರಾಮ್ ಪಿ.ಸಂಪತ್ ಅವರಿಗೆ ‘ರೋಟರಿ ಮೈಸೂರು ಮಿಡ್‌ಟೌನ್ ಜೇಯಸ್ ಸಿಎಸ್‌ಆರ್ ಪ್ರಶಸ್ತಿ 2026’ರ ಪ್ರಶಸ್ತಿ ನೀಡಲಾಯಿತು.

ಮೈಸೂರು, ಜ.22(ವಿವಿಹೆಚ್)– ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ನೀಡಲಾಗುವ ‘ರೋಟರಿ ಮೈಸೂರು ಮಿಡ್‌ಟೌನ್ ಜೇಯಸ್ ಸಿಎಸ್‌ಆರ್ ಪ್ರಶಸ್ತಿ 2026’ ಅನ್ನು ‘ಕೇನ್ಸ್ ಟೆಕ್ನಾಲಜಿ ಇಂಡಿಯಾ’ ಸಂಸ್ಥೆಗೆ ಪ್ರದಾನ ಮಾಡಲಾಯಿತು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕೇನ್ಸ್ ಮುಖ್ಯ ಹಣಕಾಸು ಅಧಿಕಾರಿ ಜಯರಾಮ್ ಪಿ.ಸಂಪತ್ ಪ್ರಶಸ್ತಿ ಸ್ವೀಕರಿಸಿದರು. ಬಳಿಕ ಮಾತನಾಡಿದ ಅವರು, ಸಣ್ಣ ಸಣ್ಣ ಆಲೋಚನೆಗಳು ಎಂಬ ಬೀಜಗಳನ್ನು ಬಿತ್ತುವುದರಿಂದ ಹೆಮ್ಮರಗಳನ್ನು ಕಾಣಬಹುದು. ಬೀಜಗಳನ್ನು ಬಿತ್ತುವ ಜೊತೆಗೆ ಅದರ ಪೋಷಣೆ, ಕಾಳಜಿ ವಹಿಸಬೇಕು. ಅಂತಿಮವಾಗಿ ಆ ಮರದಿಂದ ಪಡೆಯುವ ಫಲವನ್ನು ಸಮಾಜದೊಂದಿಗೆ ಸಮವಾಗಿ ಹಂಚಿಕೊಳ್ಳುವುದು ಬಹಳ ಮುಖ್ಯ ಎಂದು ತಿಳಿಸಿದರು.

ಕೇನ್ಸ್ ಟೆಕ್ನಾಲಜಿಯ ಸಿಎಸ್‌ಆರ್ ನಿಧಿಯು ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಆರೋಗ್ಯ ಮತ್ತು ಪರಿಸರ ಸುಸ್ಥಿರತೆಯ ಯೋಜನೆಗಳನ್ನು ಬೆಂಬಲಿಸುತ್ತದೆ, ಸ್ಥಳೀಯ ಸಮುದಾಯಗಳನ್ನು, ವಿಶೇಷವಾಗಿ ಮೈಸೂರಿನಂತಹ ಪ್ರದೇಶಗಳಲ್ಲಿ ಸುಧಾರಿಸುವತ್ತ ಗಮನಹರಿಸುತ್ತದೆ ಎಂದರು.

ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿಯಡಿ ಜೀವನ ಮಟ್ಟವನ್ನು ಸುಧಾರಿಸಲು ಗ್ರಾಮ ದತ್ತು ಕಾರ್ಯಕ್ರಮಗಳು, ಆರೋಗ್ಯ ಮತ್ತು ಸ್ವಾಸ್ಥ್ಯ, ಪರಿಸರ ಸುಸ್ಥಿರತೆ ಮೇಲೆ ಹೆಚ್ಚಿನ ಗಮನ ನೀಡಲಾಗಿದೆ ಎಂದು ಹೇಳಿದರು.

ಪಿಡಿಜಿ ಆರ್‌ಟಿಎನ್ ಆರ್.ಗುರು ಮಾತನಾಡಿ, ಕೇನ್ಸ್ 2024–25 ಸಾಲಿನಲ್ಲಿ ಸಿಎಸ್‌ಆರ್ ನಿಧಿಗೆ ಬರೋಬ್ಬರಿ 16 ಸಾವಿರ ಕೋಟಿ ರೂ. ವ್ಯಯಿಸುವ ಮೂಲಕ ಸಮಾಜಮುಖಿ ಕೆಲಸಗಳಲ್ಲಿ ತನ್ನ ಬದ್ಧತೆಯನ್ನು ಎತ್ತಿ ಹಿಡಿದಿದೆ. ಆದರೆ ಇದರಲ್ಲೂ ಒಂದು ಸಮಸ್ಯೆಯಿದ್ದು, ಅತೀ ಅವಶ್ಯಕತೆ ಇರುವವರಿಗೆ ಈ ಸಹಾಯ ತಲುಪಿದೆಯೇ ಎಂಬುದು ಬಹಳ ಮುಖ್ಯವಾಗಿದೆ ಎಂದರು. ಅಧ್ಯಕ್ಷ ಆರ್‌ಟಿಎನ್ ರಾಕೇಶ್‌ಬಾಬು, ಜಂಟಿ ಕಾರ್ಯದರ್ಶಿ ಅಭಿಲಾಷ್, ಜೇಯಸ್ ಅಭಿಲಾಷ್, ಜೇಯಸ್ ನಿರ್ದೇಶಕಿ ಇಂದಿರಾ ನಾಯರ್, ಮಾಜಿ ಅಧ್ಯಕ್ಷ ಅಯ್ಯಣ್ಣ ಇದ್ದರು.

ಬಿಎಂಸಿಸಿಗೆ ವರುಣ ಸೇರ್ಪಡೆ ವಿಚಾರವಾಗಿ ನಾಳೆ ಮುಖಂಡರ ಸಭೆ

ಮೈಸೂರು: ‘ಬೃಹತ್ ಮೈಸೂರು ಮಹಾನಗರ ಪಾಲಿಕೆ(ಬಿಎಂಸಿಸಿ)’ ವ್ಯಾಪ್ತಿಗೆ ವರುಣ ಹೋಬಳಿಯ ಪ್ರಮುಖ ಪ್ರದೇಶಗಳನ್ನು ಸೇರ್ಪಡೆ ಮಾಡುವಂತೆ ಆಗ್ರಹಿಸುತ್ತಿರುವ ಮುಖಂಡರು, ಈ ಸಂಬಂಧ ಚರ್ಚಿಸಲು ಸಭೆ ಕರೆದಿದ್ದಾರೆ. ಮೈಸೂರು–ನರಸೀಪುರ ರಸ್ತೆ ಚಿಕ್ಕಹಳ್ಳಿಯ ದೊಡ್ಡ ಆಲದ ಮರದ ಬಳಿ ಇರುವ ಮೈಸೆಮ್ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಜ.24ರಂದು ಮಧ್ಯಾಹ್ನ 3.30ಕ್ಕೆ ವರುಣ ಹೋಬಳಿ ಮುಖಂಡರ ಸಭೆ ಆಯೋಜಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವರುಣ ಹೋಬಳಿ ಹಳ್ಳಿಗಳನ್ನು ಬಿಎಂಸಿಸಿಗೆ ಸೇರಿಸುವ ನಿಟ್ಟಿನಲ್ಲಿ ಮುಂದುವರೆಯುವ ಬಗ್ಗೆ ಸೂಕ್ತ ಸಲಹೆ ನೀಡುವಂತೆ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ ಮನವಿ ಮಾಡಿದ್ದಾರೆ.

ನೇಮಕ



ಮೈಸೂರು: ಜಿಗಣಿಯಲ್ಲಿರುವ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಕುಲಾಧಿಪತಿಯಾಗಿ ಡಾ.ಹೆಚ್.ಆರ್. ದಯಾನಂದಸ್ವಾಮಿ ನೇಮಕಗೊಂಡಿದ್ದಾರೆ.

ಮಕ್ಕಳು, ಮಹಿಳೆಯರಿಗಾಗಿಯೇ ಅಕ್ಕರೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಂದು ಉದ್ಘಾಟನೆ

ಮೈಸೂರು, ಜ.22(ಜಿಎ)–ಮಕ್ಕಳು ಮತ್ತು ಮಹಿಳೆಯರಿಗಾಗಿಯೇ ವಿಶೇಷವಾಗಿ ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಅಕ್ಕರೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಶುಕ್ರವಾರ(ಜ.23) ಉದ್ಘಾಟನೆಯಾಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಮಕ್ಕಳ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಅವಿನಾಶ್ ಈ ವಿಷಯ ತಿಳಿಸಿ, ಜ.23ರಂದು ಮಧ್ಯಾಹ್ನ 12.05ಕ್ಕೆ ಅಕ್ಕರೆ ಆಸ್ಪತ್ರೆ ಉದ್ಘಾಟನೆಗೊಳ್ಳಲಿದೆ. ಮಹಿಳೆಯರಿಗಾಗಿಯೇ ಮೀಸಲಾದ ವೈದ್ಯಕೀಯ ಸೇವೆ ಹೊಂದಿದೆ. ನವಜಾತ ಶಿಶುಗಳು, ಇನ್ನಿತರ ಶಿಶುಗಳು, ಮಕ್ಕಳು, ಹದಿಯರೆಯವರು ಮತ್ತು ಮಕ್ಕಳಿಗಾಗಿ ಒಂದೇ ಸಂಯೋಜಿತ ಸೌಲಭ್ಯದಡಿ ಸುಧಾರಿತ ಆರೋಗ್ಯ ಸೇವೆ ಒದಗಿಸುವ ಗುರಿ ನುರಿತ ವೈದ್ಯರ ತಂಡದಿಂದ ಆಸ್ಪತ್ರೆ ಆರಂಭವಾಗುತ್ತಿದೆ ಎಂದು ತಿಳಿಸಿದರು.

ಮಕ್ಕಳ ತಜ್ಞ ಡಾ.ಹೆಚ್.ಎನ್. ಯಶವಂತರಾಜು ಮಾತನಾಡಿ, ಆಸ್ಪತ್ರೆಯಲ್ಲಿ ಪ್ರಮುಖವಾಗಿ ನಿಖರತೆ, ಸುರಕ್ಷತೆ, ಮಕ್ಕಳ ಆರೈಕೆಗಳಿಗೆ ಗಮನ ನೀಡಲಾಗಿದೆ. ಹೀಗಾಗಿ ನಗರ ಹಾಗೂ ಸುತ್ತಮುತ್ತಲಿನ ಜನತೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಡಾ.ದೀಪಕ್, ಡಾ.ರಕ್ಷಾ ಮಂಜುನಾಥ್ ಉಪಸ್ಥಿತರಿದ್ದರು.

ಜಮ್ಮು–ಕಾಶ್ಮೀರ: 200 ಅಡಿ ಆಳದ ಕಮರಿಗೆ ಉರುಳಿಬಿದ್ದ ಸೇನಾ ವಾಹನ; 10 ಸಿಬ್ಬಂದಿ ಸಾವು



ಶ್ರೀನಗರ, ಜ.22– ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಗುರುವಾರ ಶಸ್ತ್ರಸಜ್ಜಿತ ಸೇನಾ ವಾಹನವು ಸ್ಕಿಡ್ ಆಗಿ 200 ಅಡಿ ಆಳದ ಕಮರಿಗೆ ಉರುಳಿದ ಪರಿಣಾಮ ಹತ್ತು ಮಂದಿ ಸಿಬ್ಬಂದಿ ಸಾವಿಗೀಡಾಗಿದ್ದಾರೆ ಮತ್ತು 7 ಮಂದಿ ಗಾಯಗೊಂಡಿದ್ದಾರೆ.

ಒಟ್ಟು 17 ಜನರಿದ್ದ ಸೇನಾ ವಾಹನವು ಎತ್ತರದ ಪೋಸ್ಟ್‌ಗೆ ಹೋಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಭದೇರ್ವಾ–ಚಂಬಾ ರಸ್ತೆಯ ಖನ್ನಿ ಟಾಪ್‌ನಲ್ಲಿರುವ 200 ಅಡಿ ಆಳದ ಕಮರಿಗೆ ಉರುಳಿ ಬಿದ್ದಿದೆ.

ಅಪಘಾತ ಸಂಭವಿಸಿದ ತಕ್ಷಣ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದ ಸೇನೆ, ಪೊಲೀಸರು ಮತ್ತು ಸ್ಥಳೀಯ ನಿವಾಸಿಗಳು ಗಾಯಗೊಂಡ ಸೈನಿಕರನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.

ಆರಂಭದಲ್ಲಿ ನಾಲ್ವರು ಯೋಧರ ಶವಗಳನ್ನು ಸ್ಥಳದಿಂದ ಹೊರತೆಗೆಯಲಾಗಿದ್ದು, 13 ಮಂದಿಯನ್ನು ಸಮೀಪದ ಸೇನಾ ಆಸ್ಪತ್ರೆಗೆ ರವಾನಿಸಲಾಗಿತ್ತು. ತೀವ್ರವಾಗಿ ಗಾಯಗೊಂಡ ಕೆಲವು ಸೈನಿಕರನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಧಮ್‌ಪುರ ಮಿಲಿಟರಿ ಆಸ್ಪತ್ರೆಗೆ ವಿಮಾನದಲ್ಲಿ ರವಾನಿಸಲಾಗಿದೆ. ಬಳಿಕ ಇನ್ನೂ ಏಳು ಸಿಬ್ಬಂದಿ ಸಾವಿಗೀಡಾಗಿದ್ದು, ಮೃತರ ಸಂಖ್ಯೆ 10ಕ್ಕೆ ಏರಿಕೆಯಾಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ಸೇನಾ ಅಧಿಕಾರಿಗಳು ಅಪಘಾತ ಸಂಭವಿಸಿದ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ.

ಮಾರ್ಷಲ್ ಮೇಲೆ ಹರಿಹಾಯ್ದ ಹರಿಪ್ರಸಾದ್, ಬಾಲಕೃಷ್ಣ

ಮೈಸೂರು, ಜ.22(ವಿವಿಹೆಚ್)– ರಾಜ್ಯಪಾಲರು ಸರ್ಕಾರದ ಭಾಷಣವನ್ನು ಓದದೇ ಜಂಟಿ ಅಧಿವೇಶನದಿಂದ ಹೊರನಡೆದ ಸಂದರ್ಭದಲ್ಲಿ ಅವರನ್ನು ತಡೆಯಲು ಯತ್ನಿಸಿದ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಒಂದೆಡೆ ಸರಿಸಿ ರಾಜ್ಯಪಾಲರು ಹೋಗಲು ದಾರಿ ಮಾಡಿಕೊಟ್ಟ ಮಾರ್ಷಲ್ ಆಡಳಿತ ಪಕ್ಷಗಳ ಸದಸ್ಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ರಾಜ್ಯಪಾಲರ ನಿರ್ಗಮನದ ನಂತರ ಬಿ.ಕೆ.ಹರಿಪ್ರಸಾದ್ ತನ್ನನ್ನು ಪಕ್ಕಕ್ಕೆ ಸರಿಸಿದ ಮಾರ್ಷಲ್ ಕೈಹಿಡಿದು ಛೇಡಿಸಿ, ಅವರ ಮೇಲೆ ಆರ್ಭಟಿಸುವ, ಇದೇ ವೇಳೆ ಅವರ ಪಕ್ಕದಲ್ಲಿಯೇ ಇದ್ದ ಮಾಗಡಿ ಬಾಲಕೃಷ್ಣ ಸಹಾ ಮಾರ್ಷಲ್ ಮೇಲೆ ಹರಿಹಾಯುವ ವೀಡಿಯೋ ಒಂದನ್ನು ವಿಪಕ್ಷ ಬಿಜೆಪಿ ಸದಸ್ಯರು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.



ಕರ್ತವ್ಯನಿರತ ಮಾರ್ಷಲ್ ಮೇಲೆ ಕಾಂಗ್ರೆಸ್ ಸದಸ್ಯರ ಆರ್ಭಟವನ್ನು ಕಟುವಾಗಿ ಟೀಕಿಸಿದ್ದಾರೆ. ಇದಕ್ಕೆ ನೆಟ್ಟಿಗರಿಂದಲೂ ಕೂಡಾ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.1.2026 ಶುಕ್ರವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಭಾದ್ರ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಆಹಾರ ವಿಜ್ಞಾನ ಮತ್ತು ಪೌಷ್ಠಿಕಾಂಶ ಅಧ್ಯಯನ ವಿಭಾಗ, ಯುವರಾಜ ಕಾಲೇಜು :** ಇನ್ನೋವೇಷನ್ಸ್ ಅಂಡ್ ಸಸ್ಟೈನಬಿಲಿಟಿ ಇನ್ ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಮಹದೇವಮೂರ್ತಿ, ಮುಖ್ಯ ಅತಿಥಿಗಳು: ಪ್ರೊ.ಜಮುನಾ ಪ್ರಕಾಶ್, ಡಾ.ಹೆಚ್.ಎಸ್.ಜಯಂತ್, ಡಾ.ಎಸ್.ನವೀನ್, ಡಾ.ಸಿ.ಅನಿತಾ, ಸಿ.ನಾಗೇಶ್‌ಬಾಬು, ಪ್ರೊ.ಪಿ.ಕೆ. ಮಹೇಶ್ವರ್, ಪ್ರೊ.ಆರ್.ಶೇಖರ ನಾಯಕ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಹಾಲ್, ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಫಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ :** ಪರಾಕ್ರಮ್ ದಿವಸ್ ಆಚರಣೆ, ಸ್ವಾತಂತ್ರ್ಯ ಸಮರದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರ ವಿಷಯ ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಕಾಲೇಜು, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ಅಮೇಚೂರ್ ಖೋ ಖೋ ಅಸೋಸಿಯೇಷನ್, ಹರಿ ವಿದ್ಯಾಲಯ :** ಮಾಜಿ ಮೇಯರ್ ಎನ್. ಪ್ರಕಾಶ್ ಸ್ಮರಣಾರ್ಥ ಮಹಿಳೆಯರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋ ಖೋ ಚಾಂಪಿಯನ್‌ಶಿಪ್ ಸ್ಪರ್ಧೆ, ಉದ್ಘಾಟನೆ : ಸಮಾಜ ಸೇವಕಿ ಸುಧಾ ಮೃತ್ಯುಂಜಯಪ್ಪ, ಅಧ್ಯಕ್ಷತೆ : ಜಿಲ್ಲಾ ಖೋ ಖೋ ಸಂಸ್ಥೆ ಅಧ್ಯಕ್ಷ ನಾಗರಾಜ್ ವಿ. ಭೈರಿ, ಮುಖ್ಯ ಅತಿಥಿಗಳು : ಕೆಎಕೆಕೆಎ ಕಾರ್ಯದರ್ಶಿ ಚಿನ್ನಸ್ವಾಮಿ, ಹರಿ ವಿದ್ಯಾಲಯ ಕಾರ್ಯದರ್ಶಿ ಎಚ್.ಆರ್. ಭಗವಾನ್, ಕರ್ನಾಟಕ ರಾಜ್ಯ ಪ್ರದೇಶ ಕುರುಬ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ, ಎನ್. ಅಶೋಕ್, ಸ್ಥಳ: ಹರಿ ವಿದ್ಯಾಲಯ ಆವರಣ, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಜೆಎಸ್‌ಎಸ್ ಮಹಿಳಾ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸಂಸ್ಕೃತಿ ಚಿಂತಕ ಶಂಕರ ದೇವನೂರು ಅವರಿಂದ ಶರಣರ ಜೀವನ ದರ್ಶನ ಕುರಿತು ಉಪನ್ಯಾಸ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಸೈನಿಕ ಅಕಾಡೆಮಿ, ಜೀವಧಾರ ರಕ್ತನಿಧಿ ಕೇಂದ್ರ :** ನೇತಾಜಿ ಸುಭಾಷ್ ಚಂದ್ರಬೋಸ್ ಜನ್ಮ ದಿನದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಸೈನಿಕ ಅಕಾಡೆಮಿ ಸಂಸ್ಥಾಪಕ ಸಿ.ಎಂ. ಶ್ರೀಧರ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ, ಬೆಳಗ್ಗೆ 11.30 ರಿಂದ.
- **ಅರುಣೋದಯ ವಿದ್ಯಾಸಂಸ್ಥೆ, ಶ್ರೀ ನಂಜುಂಡೇಶ್ವರ ಎಜುಕೇಷನ್ ಟ್ರಸ್ಟ್, ಅರುಣೋದಯ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ :** ಅರುಣೋತ್ಸವ, ಸಾನ್ನಿಧ್ಯ : ಸಾಲೂರು ಬೃಹನ್ಮಠ ಮಹದೇಶ್ವರ ಬೆಟ್ಟದ ಡಾ. ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಜಡೇ ಸ್ವಾಮೀಜಿ, ಉದ್ಘಾಟನೆ : ನಗರ ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್, ಮುಖ್ಯ ಅತಿಥಿಗಳು : ಡಾ. ಲೋಹಿತ್, ಹಿರಿಯ ಆರೋಗ್ಯ ಸಮಾಲೋಚಕ ಡಾ. ವಿಶ್ವರಾಜ್, ಸುಬ್ರಹ್ಮಣ್ಯ, ಎಂ. ಸಿದ್ದರಾಜು, ಸ್ಥಳ: ಮಾತೃಶ್ರೀ ರಂಗಮಂದಿರ, ಶಾಲೆ ಆವರಣ, ದೇವಲಾಪುರ, ಮಧ್ಯಾಹ್ನ 3.30ಕ್ಕೆ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಉತ್ತರಾಯಣ, ಉದ್ಘಾಟನೆ : ಭಾರತೀಯ ರಂಗಭೂಮಿ ನಿರ್ದೇಶಕ ಪ್ರಸನ್ನ, ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪುರುಷೋತ್ತಮ್ ಬಿಳಿಮಲೆ, ರವಿ ಜೋಷಿ, ವಿದ್ವಾನ್ ಅನೂರ್ ಆರ್. ಅನಂತಕೃಷ್ಣ ಶರ್ಮ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಶಾಂತಲ ವಟ್ಟಂ, ವ್ಯಾಖ್ಯಾನ– ಪ್ರೊ.ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ ಫೈಲ್ಸ್, ಫಿಶರ್ಸ್ ಮತ್ತು ಪಿಸ್ತೂಲಾ ಲಕ್ಷಣಗಳು ಮತ್ತು ಚಿಕಿತ್ಸೆ ಈ ಕುರಿತು Proctologist ಮತ್ತು Cholorectal Surgeon ಡಾ. ರಾಜಶೇಖರ್ ಮೈಸೂರು ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಡಾ. ಕುಲದೀಪ್ .ಎನ್., 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ಎನ್. ಕಾರ್ತಿಕ್ –ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ –ಸಾಮಾಜಿಕ ಜಾಲತಾಣದ ಅತಿಯಾದ ಬಳಕೆ ಕೌಟುಂಬಿಕ ನೆಮ್ಮದಿಯನ್ನು ಕಲಕುತ್ತಿದೆಯೆ ಈ ಕುರಿತು ಮಾತುಕತೆ, 4.30 ವೃತ್ತಿ ಮಾರ್ಗದರ್ಶನ–ಸಂಶೋಧನೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು ಅಂದರೆ ರಿಸರ್ಚ್ ಅಂಡ್ ಇಂಟಲೆಕ್ಚುಅಲ್ ಪ್ರಾಪರ್ಟಿ ರೈಟ್ಸ್ ಕುರಿತು ಮೈಸೂರಿನ ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸಂಸ್ಥೆಯ ಐ.ಪಿ.ಆರ್. ಸೆಲ್‌ನ ಡೆಪ್ಯುಟಿ ಡೀನ್ ಡಾ. ಬಾಲಮುರಳೀಧರ .ವಿ ಮತ್ತು ಸಂಶೋಧನಾ ವಿಭಾಗದ ಡೆಪ್ಯುಟಿ ಡೀನ್ ಡಾ. ಚಂದನ್ ಎಸ್. ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 6.50 ಕೃಷಿರಂಗ ಹವಾಮಾನ ಮಿತ್ರ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಆಕಾಶ ವೀಕ್ಷಣೆ –ಗ್ರಹತಾರೆಗಳ ಮಾಹಿತಿ ನೇರ ಪ್ರಸಾರ ಕಾರ್ಯಕ್ರಮ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ

ರಾಜ್ಯಪಾಲರಿಂದ ಕೇಂದ್ರಕ್ಕೆ ಛೀಮಾರಿ ಹಾಕಿಸಲು ತಂತ್ರ ರೂಪಿಸಿದ್ದ ಸರ್ಕಾರಕ್ಕೆ ರಾಜ್ಯಪಾಲರ ತಿರುಮಂತ್ರ!

ಬೆಂಗಳೂರು, ಜ.22(ಕೆಎಂಶಿ)– ಕರ್ನಾಟಕ ವಿಧಾನಮಂಡಲದ ಇತಿಹಾಸದಲ್ಲೇ ರಾಜ್ಯಪಾಲರೊಬ್ಬರು ತಾವೇ ಸಿದ್ಧಪಡಿಸಿದ ಮೂರು ವಾಕ್ಯಗಳ ಭಾಷಣವನ್ನು ಜಂಟಿ ಅಧಿವೇಶನದಲ್ಲಿ ಓದಿ ನಿರ್ಗಮಿಸಿದ ಅಪರೂಪದ ಪ್ರಸಂಗ ಇಂದು ಜರುಗಿತು.

ವಿಬಿ–ಜಿ–ರಾಮ್–ಜಿ ಕಾಯಿದೆ ಹಾಗೂ ಕೇಂದ್ರ ನೀತಿಗಳನ್ನು ವಿರೋಧಿಸಿ ರಾಜ್ಯ ಸರ್ಕಾರ 46 ಪುಟಗಳ ಭಾಷಣವನ್ನು ಸಿದ್ಧಪಡಿಸಿತ್ತು.

ಈ ಭಾಷಣವನ್ನು ಜಂಟಿ ಅಧಿವೇಶನದಲ್ಲಿ ಓದಲು ನಿರಾಕರಿಸಿದ್ದ ರಾಜ್ಯ ಪಾಲರು ತಾವು ಕಲಾಪಕ್ಕೇ ಬರುವುದಿಲ್ಲ ಎಂದು ಸರ್ಕಾರಕ್ಕೆ ಸಂದೇಶ ರವಾನಿಸಿದ್ದರು.

ರಾಜ್ಯಪಾಲರ ನಡೆಯನ್ನು ವಿರೋಧಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಲು ತೀರ್ಮಾನಿಸಿತ್ತು.

ಇದರ ನಡುವೆ ಕಾನೂನು ತಜ್ಞರ ಸಲಹೆ ಪಡೆದ ರಾಜ್ಯಪಾಲರು, ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವ ನಿರ್ಧಾರವನ್ನು ಗುರುವಾರ ಬೆಳಗ್ಗೆ ಕೈಗೊಂಡರು.

ಅದರಂತೆ ಅಧಿವೇಶನಕ್ಕೆ ಆಗಮಿಸಿ, ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ತಾವು ಸಿದ್ಧಪಡಿಸಿದ ಭಾಷಣ ಓದಿ, ಸರ್ಕಾರ ಸಿದ್ಧಪಡಿಸಿದ್ದ 46 ಪುಟಗಳ ಭಾಷಣ ಪ್ರತಿಯನ್ನು ಓದಲಿಲ್ಲ.

ರಾಜ್ಯಪಾಲರು ಎಷ್ಟೇ ವಿರೋಧ ಮಾಡಿದರೂ ರಾಜ್ಯ ಸರ್ಕಾರ ಕೇಂದ್ರದ ನೀತಿಗಳನ್ನು ವಿರೋಧಿಸುವ ವಿಷಯಗಳನ್ನು ಮೊದಲ ಆರು ಪುಟಗಳಲ್ಲೇ ಮುದ್ರಿಸಿ, ಕನಿಷ್ಠ ಪದಗಳನ್ನಾದರೂ ಅವರಿಂದ ಓದಿಸಲು ಮುಂದಾಗಿತ್ತು.

ಆದರೆ, ರಾಜ್ಯಪಾಲರು ಆ ಗೋಜಿಗೇ ಹೋಗದೆ, ತಮ್ಮ ಸಂವಿಧಾನಾತ್ಮಕ ಕಾರ್ಯ ಮುಗಿಸಿ ಸದನದಿಂದ ನಿರ್ಗಮಿಸಿದರು.

ಸರ್ಕಾರ ಸಿದ್ಧಪಡಿಸಿದ ಭಾಷಣದ ಆರಂಭದಲ್ಲೇ, ಒಕ್ಕೂಟ ವ್ಯವಸ್ಥೆಯಲ್ಲಿ ಆರ್ಥಿಕ ಮತ್ತು ನೀತಿಕಾರಕ ವಿಚಾರಗಳಲ್ಲಿ ದಮನಕಾರಿ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಉಲ್ಲೇಖಿಸಲಾಗಿತ್ತು.

ತೆರಿಗೆ ಪಾಲು, ಕೇಂದ್ರ ಪುರಸ್ಕೃತ ಯೋಜನೆಗಳು, ಕೇಂದ್ರದ ವಿಶೇಷ ಯೋಜನೆಗಳು ಮುಂತಾದವುಗಳಲ್ಲಿ ಅನ್ಯಾಯಗಳಿಗೆ ರಾಜ್ಯ ತುತ್ತಾಗಿದೆ. ದೇಶದ ಆರ್ಥಿಕತೆಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕವನ್ನು ಆರ್ಥಿಕವಾಗಿ ದಮನಿಸಿದರೆ ಅದರ ಪರಿಣಾಮ ಇಡೀ ದೇಶದ ಮೇಲೆ ಉಂಟಾಗುತ್ತದೆ ಎಂಬುದನ್ನು ಒಕ್ಕೂಟ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ.

15ನೇ ಹಣಕಾಸು ಆಯೋಗದ ಅವಧಿಯಲ್ಲಿ ಸುಮಾರು 1.25 ಲಕ್ಷ ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸಂಪನ್ಮೂಲಗಳು ರಾಜ್ಯಕ್ಕೆ ಸಿಗದೆ ವಂಚನೆಯಾಗಿದೆ ಎಂಬುದನ್ನು 16ನೇ ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗಿದ್ದು, ಮುಂದಿನ ದಿನಗಳಲ್ಲಿ ಈ ಅನ್ಯಾಯ ಸರಿಯಾಗಬಹುದೆಂಬುದು ಸರ್ಕಾರದ ಖಚಿತ ನಂಬುಗೆಯಾಗಿದೆ.

ಇದಲ್ಲದೆ, 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಕಾಯ್ದೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿ, ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರು, ಸಣ್ಣ ರೈತರ, ಮಹಿಳೆಯರ



ಉದ್ಯೋಗ ಮತ್ತು ನಿರುದ್ಯೋಗ ಭತ್ಯೆ ಹಕ್ಕನ್ನು ಕಸಿದುಕೊಂಡಿದೆ. ಗ್ರಾಮೀಣ ಭಾರತದ ಅಭಿವೃದ್ಧಿ ಪರ್ವದ ಬೃಹತ್ ಅಧ್ಯಾಯವಾಗಿದ್ದ "ಮನರೇಗಾ" ಕಾಯ್ದೆ ರದ್ದತಿಯಿಂದ ಭಾರತೀಯ ಗ್ರಾಮೀಣ ಬದುಕನ್ನು ದುರ್ಬಲಗೊಳಿಸಲಾಗಿದೆ.

ಮಹಾತ್ಮ ಗಾಂಧೀ, ಗ್ರಾಮಗಳು ಸ್ವತಂತ್ರವಾದ, ಸ್ವಾಯತ್ತವಾದ ಘಟಕಗಳಾಗಬೇಕು ಎಂಬುದಾಗಿ ಆಶಿಸಿದ್ದರು, ಗ್ರಾಮಗಳು ನಾಶವಾದಲ್ಲಿ ಭಾರತವೂ ನಾಶವಾಗುತ್ತದೆ. ಈ ದೇಶ ಯಾವ ಸಂದೇಶವನ್ನು ಜಗತ್ತಿಗೆ ನೀಡಬೇಕೋ ಅದು ಇಲ್ಲವಾಗುತ್ತದೆ. ಗ್ರಾಮಗಳನ್ನು ಶೋಷಣೆ ಮಾಡುವುದು ಪೂರ್ಣವಾಗಿ ನಿಂತರೆ ಮಾತ್ರವೇ ಗ್ರಾಮ ಪುನರುಜ್ಜೀವನ ಸಾಧ್ಯವಾದೀತು. ಗ್ರಾಮಗಳು ಸ್ವಾವಲಂಬಿಗಳಾಗುವ ಕಡೆಗೆ ನಮ್ಮ ಗಮನವನ್ನೆಲ್ಲ ಕೇಂದ್ರೀಕರಿಸಬೇಕು ಎಂದಿದ್ದರು.

ಗ್ರಾಮಗಳು ಕೊಳಕು ಕೂಪಗಳಾಗಬಾರದು. ಅನ್ನ, ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗಬಾರದೆಂಬುದೂ ಗಾಂಧಿ ಅಭಿಪ್ರಾಯವಾಗಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 2005ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿತ್ತು. ಯೋಜನೆಯಡಿ ರಾಜ್ಯ ಕಳೆದ 20 ವರ್ಷಗಳಲ್ಲಿ 76.89 ಲಕ್ಷ ಕಾಮಗಾರಿಗಳನ್ನು 61.03 ಸಾವಿರ ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿದೆ. 182.5 ಕೋಟಿ ಮಾನವ ದಿನಗಳ ಉದ್ಯೋಗ ಸೃಜಿಸಿದೆ.

ಮನರೇಗಾ ಖಾತ್ರಿ ಮಾಡಿದ್ದ ಉದ್ಯೋಗ ಖಾತ್ರಿಯನ್ನು ಹೊಸ ವಿಬಿ–ಜಿ–ರಾಮ್–ಜಿ ಕಾಯ್ದೆ ಕಿತ್ತುಕೊಂಡಿದೆ. ಮನರೇಗಾ ಕಾಯ್ದೆ ಸೆಕ್ಷನ್ 3ರ ಪ್ರಕಾರ ಯಾವುದೇ ಪಂಚಾಯತ್‌ನಲ್ಲಿ ಉದ್ಯೋಗಕ್ಕೆ ಅರ್ಜಿ ಹಾಕಿದ ಪ್ರತಿಯೊಬ್ಬರಿಗೂ ಉದ್ಯೋಗ ನೀಡಬೇಕೆಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಬೇಡಿಕೆ ಆಧರಿಸಿ ಉದ್ಯೋಗ ನೀಡಬೇಕೆಂಬ ತತ್ವ ಧ್ವಂಸ ಮಾಡಿ ಪೂರೈಕೆ ಆಧಾರಿತ ಯೋಜನೆ ಮಾಡಲಾಗಿದೆ. ಕಾರ್ಪೊರೇಟ್ ಬಂಡವಾಳಿಗರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ, ಹೊಸ ಯೋಜನೆ ರೂಪಿಸಲಾಗಿದೆ.

ಗ್ರಾಮೀಣ ಜನರ ಹಿತಾಸಕ್ತಿ ಗಾಳಿಗೆ ತೂರಲಾಗಿದೆ. ಇದರಿಂದ ಗ್ರಾಮೀಣ ಆಸ್ತಿ ಸೃಜನೆ ಮೇಲೆ ಮತ್ತು ಕೂಲಿಕಾರರು ಇರುವ ಸ್ಥಳಗಳಲ್ಲಿಯೇ ಉದ್ಯೋಗ ಒದಗಿಸಬೇಕೆಂಬ ಘನವಾದ ಉದಾತ್ತ ಉದ್ದೇಶಗಳನ್ನು ತರಗೆಲೆಗಳಂತೆ ಉದುರಿಸಲಾಗಿದೆ.

ಇಂತಹ ಪ್ರಗತಿ ವಿರೋಧಿ ಕ್ರಮವನ್ನು ನನ್ನ ಸರ್ಕಾರ ಬಲವಾಗಿ ಖಂಡಿಸುತ್ತದೆ. ಹೆಸರಾಂತ ಮನರೇಗಾ ರಾಷ್ಟ್ರದಾದ್ಯಂತ ಪ್ರಸಿದ್ಧಿ ಪಡೆದಿತ್ತು. ಪ್ರಗತಿಯ ಪ್ರತೀಕವಾಗಿತ್ತು. ಇದನ್ನು ನೀರಿನಲ್ಲಿ ಹೋಮ ಮಾಡಿದಂತೆ ಕೇಂದ್ರ ಸರ್ಕಾರ ಹಳೇ ಯೋಜನೆಗೆ ತಿಲಾಂಜಲಿ ಇಟ್ಟಿದೆ.

ಮನರೇಗಾ ಯೋಜನೆಯಲ್ಲಿ ಗಾಂಧಿ ಅವರ ಪ್ರಧಾನ ಆಶಯವಾದ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಹೊಸ ಕಾಯ್ದೆ ದುರ್ಬಲಗೊಳಿಸಿದೆ. ರಾಷ್ಟ್ರದ ಪ್ರಜಾಸತ್ತೆಗೆ ಮೂಲಭೂತ ಅಡಿಪಾಯ ಒದಗಿಸುವ ಪಂಚಾಯತ್ ರಾಜ್ ಸಂಸ್ಥೆಗಳು ಅಧಿಕಾರ ವಿಕೇಂದ್ರಿಕರಣದ ಸಂಕೇತಗಳಾಗಿವೆ.

ವಿಕೇಂದ್ರಿಕೃತ ವ್ಯವಸ್ಥೆಯ ಅಡಿಪಾಯವನ್ನೇ ಬುಡಮೇಲು ಮಾಡಿ ಕೇಂದ್ರಿಕೃತ ವ್ಯವಸ್ಥೆಗೆ ಕೇಂದ್ರ ಸರ್ಕಾರ ಬುನಾದಿ ಹಾಕಿದೆ. ಮನರೇಗಾ ಕಾಯ್ದೆಯಲ್ಲಿ ಕಾಮಗಾರಿಗಳನ್ನು ಗ್ರಾಮ ಸಭೆಗಳಲ್ಲಿಟ್ಟು ತೀರ್ಮಾನ ಮಾಡಿ ಅನುಷ್ಠಾನ ಮಾಡಲಾಗುತ್ತಿತ್ತು. ಹೊಸ ಕಾಯ್ದೆಯಲ್ಲಿ ಗ್ರಾಮ ಸಭೆಗಳಿಗಿದ್ದ ಅಧಿಕಾರವನ್ನು ಕೇಂದ್ರ ಸರ್ಕಾರದ ಮಾನದಂಡಗಳ ಮೂಲಕ ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಕೇಂದ್ರದ ಕ್ರಮಗಳು ಕೇವಲ ಪ್ರಜಾಸತ್ತಾತ್ಮಕತೆಗೆ ವಿರೋಧಿ ಮಾತ್ರ ಅಲ್ಲ. ರಾಷ್ಟ್ರದ ಬಹುಪಾಲು ನಾಗರಿಕರ ಬೇಡಿಕೆ ನಿರ್ಲಕ್ಷಿಸುವ ಮತ್ತು ರಾಷ್ಟ್ರದ ಹಿತಾಸಕ್ತಿಯನ್ನು ವಿನಾಶದ ಅಂಚಿಗೆ ದೂಡುವ ಪ್ರಗತಿ ವಿರೋಧಿ ಕ್ರಮವಾಗಿದೆ.

ನರೇಗಾ ಯೋಜನೆಯಿಂದಾಗಿ ಗುಳೆ ಹೋಗುವ ಸಮಸ್ಯೆ ಕಡಿಮೆಯಾಗಿತ್ತು. ಹೊಸ ಕಾಯ್ದೆಯಲ್ಲಿ ನಿರ್ಧಾರಗಳನ್ನು ಕೇಂದ್ರದಿಂದ ಹೇರಲಾಗುತ್ತದೆ. ದೆಹಲಿಯಲ್ಲಿ ಅಧಿಕಾರಿಗಳ ಪರಿಷತ್ ರಚಿಸಲಾಗುತ್ತದೆ.

ಈ ಪರಿಷತ್ ಯಾವ ಪಂಚಾಯತ್‌ನಲ್ಲಿ ಯೋಜನೆಗಳನ್ನು ಜಾರಿಗೆ ತರಬೇಕೆಂಬುದನ್ನು ನಿರ್ಣಯಿಸುತ್ತದೆ. ಉದ್ಯೋಗ ಅರಸಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಗುಳೆ ಹೋಗುವ ಅಥವಾ ವಲಸೆ ಹೋಗುವ ವ್ಯವಸ್ಥೆಯನ್ನು ಪುನರ್ ಸ್ಥಾಪಿಸುವ ನೂತನ ಯೋಜನೆಯನ್ನು ನನ್ನ ಸರ್ಕಾರ ಅತ್ಯಂತ ಪ್ರಬಲವಾಗಿ ವಿರೋಧಿಸುತ್ತದೆ. ಮನರೇಗಾ ಕಾಯ್ದೆಯಲ್ಲಿದ್ದ ದಲಿತರು, ಆದಿವಾಸಿಗಳು, ಮಹಿಳೆಯರು, ಹಿಂದುಳಿದವರು, ರೈತಾಪಿ ಸಮುದಾಯಗಳ ಉದ್ಯೋಗದ ಹಕ್ಕನ್ನು ಮೊಟಕುಗೊಳಿಸಲಾಗಿದೆ.

ಉದ್ಯೋಗ ಖಾತ್ರಿಗೆ ಸಂಬಂಧಿಸಿದ ಕಾಯ್ದೆ ರದ್ದುಗೊಳಿಸಿ ಹೊಸ ಕಾಯ್ದೆ ಜಾರಿಗೊಳಿಸುವಾಗ ರಾಜ್ಯಗಳ ಅಭಿಪ್ರಾಯ ಪಡೆಯಬೇಕಾಗಿತ್ತು. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಜ್ಯಗಳ ಪಾಲೂ ಇರುತ್ತದೆ. ರಾಜ್ಯಗಳನ್ನು ಸಂಪರ್ಕಿಸದೆ ಜಾರಿಗೊಳಿಸಿರುವುದು ಸಂವಿಧಾನ ಬಾಹಿರ ನಡೆಯಾಗಿದೆ.

ಮನರೇಗಾದಲ್ಲಿದ್ದ ಕಾರ್ಮಿಕ ಕೇಂದ್ರಿತ ಹಕ್ಕುಗಳನ್ನು ಮೊಟಕುಗೊಳಿಸಿ ಗುತ್ತಿಗೆದಾರರ ಅಧೀನಕ್ಕೆ ನೀಡಲಾಗುತ್ತಿದೆ. ಬೆಲೆಯೇರಿಕೆ, ಹಣದುಬ್ಬರ ಆಧರಿಸಿ ಕೂಲಿ ಪರಿಷ್ಕರಿಸುತ್ತಿದ್ದ ಅವಕಾಶಗಳೂ ಹೊಸ ಕಾಯ್ದೆಯಲ್ಲಿ ಕ್ಷೀಣಿಸಿವೆ. ಇದರಿಂದ ಬಡ ಕೂಲಿ ಕಾರ್ಮಿಕರ ಸಾಮಾಜಿಕ ಭದ್ರತೆ ಇಲ್ಲವಾಗುತ್ತಿದೆ.

ಹೊಸ ಕಾಯ್ದೆ ಪ್ರಕಾರ ರಾಜ್ಯ ಸರ್ಕಾರಗಳು ಶೇ.40ರಷ್ಟು ಅನುದಾನ ನೀಡಬೇಕಾಗುತ್ತದೆ ಅನುದಾನ ನೀಡದಿದ್ದರೆ ಕೇಂದ್ರ ನೂತನ ಯೋಜನೆಗೆ ಅನುದಾನ ನೀಡುವುದಿಲ್ಲ. ಇದರಿಂದ ಯೋಜನೆ ನಿಧಾನವಾಗಿ ಅವಸಾನದ ಹಾದಿಗೆ ತೆರಳುತ್ತದೆ.

ಈ ಎಲ್ಲ ಕಾರಣಗಳಿಂದ ಕೇಂದ್ರ ಸರ್ಕಾರ ತಂದಿರುವ ಗುತ್ತಿಗೆದಾರ ಕೇಂದ್ರಿತ, ಬೃಹತ್ ಭ್ರಷ್ಟಾಚಾರಕ್ಕೆ ಅವಕಾಶ ಕಲ್ಪಿಸುವ 'ವಿಬಿ–ಜಿ ರಾಮ್ ಜಿ' ಕಾನೂನನ್ನು ತಕ್ಷಣ ರದ್ದುಪಡಿಸಿ, ಬಡವರ, ಕೃಷಿ ಕಾರ್ಮಿಕರ, ಗ್ರಾಮೀಣ ಆಸ್ತಿ ಸೃಜನೆಗೆ ಅವಕಾಶ ಕಲ್ಪಿಸುವ, ನಿರುದ್ಯೋಗಿ ಭತ್ಯೆ ಒದಗಿಸುವ, ಕಾರ್ಮಿಕರಿರುವ ಸ್ಥಳದಲ್ಲೇ ಕೆಲಸ ಒದಗಿಸುವ 'ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ' ಮರು ಸ್ಥಾಪಿಸಬೇಕೆಂದು ನನ್ನ ಸರ್ಕಾರ ಕೇಂದ್ರವನ್ನು ಒತ್ತಾಯಿಸುತ್ತದೆ ಎನ್ನುವ ಮೂಲಕ ರಾಜ್ಯಪಾಲರ ಬಾಯಿಂದ ಕೇಂದ್ರವನ್ನು ತರಾಟೆಗೆ ತೆಗೆದುಕೊಳ್ಳುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿತ್ತು.

ಈ ಹಿನ್ನೆಲೆಯಲ್ಲಿ ರಾಜ್ಯಪಾಲರು ಸರ್ಕಾರದ ಯಥಾವತ್ ಭಾಷಣ ಓದಲು ನಿರಾಕರಿಸಿ, ಎರಡು ಸಾಲಿನ ತಮ್ಮ ಭಾಷಣವನ್ನು ಓದಿ ಮುಗಿಸಿದರು.

ಗಾಯತ್ರಿಗೆ ಪಿಹೆಚ್‌ಡಿ. ಪದವಿ

ಮೈಸೂರು, ಜ.22–ಕರ್ನಾಟಕ ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರ ಸಹ ಪ್ರಾಧ್ಯಾಪಕ ಡಾ.ಶಿವಕುಮಾರ ಸ್ವಾಮಿ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಗಾಯತ್ರಿ ಡಿ.ಟಿ.ಎ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಎ ಸ್ಟಡಿ ಆನ್ ಇಂಪ್ಯಾಕ್ಟ್ ಆಫ್ ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯ್ ಮೆಂಟ್ ಗ್ಯಾರಂಟಿ ಸ್ಕೀಮ್ ಆನ್ ರೂರಲ್ ಹೌಸ್ ಹೋಲ್ಡರ್ಸ್ ಇನ್ ಕರ್ನಾಟಕ ವಿತ್ ಸ್ಪೆಷಲ್ ರೆಫರೆನ್ಸ್ ಟು ಚಿಕ್ಕಮಗಳೂರು ಜಿಲ್ಲೆ' ಎಂಬ ಮಹಾಪ್ರಬಂಧವನ್ನು ಮೈಸೂರು ಮುಕ್ತ ವಿವಿ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ.



ಮುಡಾ ಮಾಜಿ ಅಧ್ಯಕ್ಷ ಮರೀಗೌಡರಿಗೆ ಸೇರಿದ 20.85 ಕೋಟಿ ಮೌಲ್ಯದ ಸ್ಥಿರಾಸ್ತಿ ಇಡಿಯಿಂದ ಮುಟ್ಟುಗೋಲು

ದಿನೇಶ್‌ಕುಮಾರ್ ವಿಚಾರಣೆ ವೇಳೆ ಬಯಲಾಯ್ತು ಮರೀಗೌಡರ ಅಕ್ರಮ ಆಸ್ತಿ

ಮೈಸೂರು, ಜ.22– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ, ಇಂದಿನ ಎಂಡಿಎ)ದ ಅಕ್ರಮ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅತ್ಯಾಪ್ತ, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡರಿಗೆ ಸೇರಿದ ಕೋಟ್ಯಾಂತರ ರೂ. ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ(ಇಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.



ಮರೀಗೌಡ

ಮುಡಾ ಅಕ್ರಮದಲ್ಲಿ ಮರೀಗೌಡ ಅವರು ನೇರವಾಗಿ ಭಾಗಿಯಾಗಿದ್ದು, ಅಕ್ರಮವಾಗಿ ನಿವೇಶನ ಪಡೆದಿರುವುದು ತನಿಖೆಯ ವೇಳೆ ದೃಢಪಟ್ಟಿರುವ ಹಿನ್ನೆಲೆಯಲ್ಲಿ ಅವರಿಗೆ ಸೇರಿದ 6 ಅಕ್ರಮ ಮುಡಾ ನಿವೇಶನಗಳು ಸೇರಿದಂತೆ ಬರೋಬ್ಬರಿ 20.85 ಕೋಟಿ ಮೌಲ್ಯದ ಒಟ್ಟು 10 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರಲ್ಲಿ ಬೃಹತ್ ವಾಣಿಜ್ಯ ಕಟ್ಟಡವೂ ಸೇರಿದೆ.

ಮುಡಾದ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಸಹಾಯದಿಂದ ಮರೀಗೌಡ ಅವರು ಅಕ್ರಮವಾಗಿ ಈ ನಿವೇಶನಗಳನ್ನು ಪಡೆದಿದ್ದಾರೆ ಎನ್ನಲಾಗಿದೆ. ನಿವೇಶನ ಹಂಚಿಕೆಯಲ್ಲಿ ಕಾನೂನು ಮತ್ತು ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಲಾಗಿದೆ. ದಿನೇಶ್ ಕುಮಾರ್, ಮರೀಗೌಡರಿಗೆ ಅಕ್ರಮ ಎಸಗಲು ಪರೋಕ್ಷವಾಗಿ ಸಹಕಾರ ನೀಡಿರುವ ಅಂಶ ವಿಚಾರಣೆಯಲ್ಲಿ ಬಯಲಾಗಿದೆ. ಇದಕ್ಕೂ ಮುನ್ನ ಹಲವು ಬಾರಿ ಇಡಿ ವಿಚಾರಣೆಗೆ ಹಾಜರಾಗಿದ್ದ ಮರಿಗೌಡರು, ಅಧಿಕಾರಿಗಳ ಪ್ರಶ್ನೆಗಳಿಗೆ ವಿವರಣೆ ನೀಡಿದ್ದರು.

ಈವರೆಗೆ 460 ಕೋಟಿ ಆಸ್ತಿ ಮುಟ್ಟುಗೋಲು: ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿಗೆ ಅಕ್ರಮವಾಗಿ ಮುಡಾ ನಿವೇಶನಗಳನ್ನು ಮಂಜೂರು ಪ್ರಕರಣದ ತನಿಖೆ ಮುಂದುವರೆಸಿರುವ ಇಡಿ ಅಧಿಕಾರಿಗಳು, ಹಲವು ಹಂತಗಳಲ್ಲಿ ಈವರೆಗೆ 460 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎನ್ನಲಾಗಿದೆ. ಈ ಹಿಂದೆ 283 ಮುಡಾ ಸೈಟ್‌ಗಳು ಮತ್ತು 3 ವೈಯುಕ್ತಿಕ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಇಡಿ ಅಕ್ರಮದ ಬೆನ್ನು ಬಿದ್ದಿದ್ದು, ಇದರಿಂದಾಗಿ ವಾಮಮಾರ್ಗದಲ್ಲಿ ನಿವೇಶನ ಪಡೆದವರಲ್ಲಿ ನಡುಕ ಹುಟ್ಟಿಸಿದೆ.

ಅಧಿಕಾರ ಹಂಚಿಕೆ ವಿಚಾರ: ನಮ್ಮ ವರಿಷ್ಠರ ಮೇಲೆ ವಿಶ್ವಾಸವಿದೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ

ಬೆಂಗಳೂರು, ಜ.22(ಕೆಎಂಶಿ)–ಅಧಿಕಾರ ಹಂಚಿಕೆ ವಿಚಾರದಲ್ಲಿ ತಮ್ಮ ನಾಯಕರು ತಮಗೆ ನಿರಾಸೆ ಮಾಡಲಾರರು ಎಂಬ ವಿಶ್ವಾಸವಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ಸ್ವಿಜ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವರ್ಲ್ಡ್ ಎಕನಾಮಿಕ್ ಫೋರಂನಲ್ಲಿ ಭಾಗಿಯಾಗಿರುವ ಅವರು ಖಾಸಗಿ ಸುದ್ದಿವಾಹಿನಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿ, ಎಲ್ಲ ವಿಚಾರಗಳ ಬಗ್ಗೆ ಪಕ್ಷದ ವರಿಷ್ಠರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು.

ಅಧಿಕಾರ ಹಂಚಿಕೆ ಮಾಧ್ಯಮಗಳಲ್ಲಿ ಚರ್ಚಿಸಬೇಕಾದ ವಿಷಯ ಅಲ್ಲ. ಇದು ನಮ್ಮಲ್ಲಿಯೇ ಆಗಬೇಕಾದ ಚರ್ಚೆ, ನಾನು ಸದಾ ಧನಾತ್ಮಕವಾಗಿದ್ದು, ನಿರೀಕ್ಷೆ ಮೇಲೆಯೇ ಬದುಕುತ್ತೇನೆ. ಶ್ರಮಕ್ಕೆ ಯಾವಾಗಲೂ ಫಲ ಸಿಗುತ್ತದೆ ಎಂಬ ನಂಬಿಕೆ ನನಗಿದೆ. ನನ್ನ ನಾಯಕರು ಖಂಡಿತವಾಗಿಯೂ ನನ್ನನ್ನು ನಿರಾಶೆಗೊಳಿಸುವುದಿಲ್ಲ ಎಂಬ ಪೂರ್ಣ ವಿಶ್ವಾಸವಿದೆ.

ತಮಗೆ ಶಾಸಕರ ಬೆಂಬಲ ಇಲ್ಲ ಎಂಬುದಾಗಿ ಯಾರು ಹೇಳಿದ್ದು ಕೆಪಿಸಿಸಿ ಅಧ್ಯಕ್ಷನಾದ ತನಗೆ ಪಕ್ಷದ 140 ಶಾಸಕರ ಬೆಂಬಲವೂ ಇದೆ. ಸಂಖ್ಯೆಗಳ ಬಗ್ಗೆ ತೀರ್ಮಾನ ಬೇಕಿಲ್ಲ. ನಾವು ತಂಡವಾಗಿ ಕೆಲಸ ಮಾಡುತ್ತಿದ್ದು ಸಿದ್ದರಾಮಯ್ಯ ಮತ್ತು ತನಗೆ ಇಬ್ಬರಿಗೂ ಎಲ್ಲ ಶಾಸಕರ ಬೆಂಬಲ ಇದೆ.

ನಾವು ಇಬ್ಬರೂ ಕೂತು ಚರ್ಚಿಸಿದ್ದು, ಎಲ್ಲವನ್ನೂ ಪಕ್ಷದ ನಾಯಕರ ತೀರ್ಮಾನಕ್ಕೆ ಬಿಟ್ಟಿದ್ದೇವೆ. ಸಿದ್ದರಾಮಯ್ಯ ಮತ್ತು ತಾನು ಇಬ್ಬರೂ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನ ಒಪ್ಪಿಕೊಳ್ಳುವುದಾಗಿ ಈಗಾಗಲೇ ಹೇಳಿದ್ದೇವೆ ಎಂದರು.

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
PUC Pass / Fail,
ಬೈಕ್ ಮತ್ತು ಸ್ಮಾರ್ಟ್ ಫೋನ್ ಹೊಂದಿರುವ ಯುವಕರು CESC ನ ಮೀಟರ್ ಕಾಂಫಿಗರ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
99452 77087



ನಕ್ಕರೆ ಅದೇ ಸ್ವರ್ಗ

ಗುಂಡ : ಡಾಕ್ಟ್ರೇ... ಈ ಮಾತ್ರೆಗಳನ್ನು ನುಂಗಿದರೆ ನಾನು ಸಣ್ಣಗಾಗ್ತೀನಾ.

ಡಾಕ್ಟರ್ : ಖಂಡಿತವಾಗಿ... ಖಂಡಿತವಾಗಿ ಬೇರೇನನ್ನೂ ತಿನ್ನದೆ ಬರಿ ಮಾತ್ರೆಗಳನ್ನು ತಿಂದರೆ ಮಾತ್ರ ಸಣ್ಣಗಾಗ್ತೀರಾ

ಮೈಸೂರು ಮಿತ್ರ

ಶುಕ್ರವಾರ, ಜನವರಿ 23, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಎಲ್ಲರಿಂದ ಕೇಳು, ಎಲ್ಲರಿಂದ ಕಲಿ, ಎಲ್ಲರಿಂದ ತಿಳಿ, ಯಾಕೆಂದರೆ ಎಲ್ಲರಿಗೂ ಎಲ್ಲವೂ ತಿಳಿದಿಲ್ಲ. ಆದರೆ ಎಲ್ಲರಿಗೂ ಏನಾದರೊಂದು ತಿಳಿದಿದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಲಿಯ ಬಣ್ಣವನ್ನು ಮೆಚ್ಚಿ, ನರಿ ತನ್ನ ಕೂದಲನ್ನು ಭಸ್ಮ ಮಾಡಿಕೊಂಡಂತೆ.

ನಿಮ್ಮ ಪತ್ರಗಳು

ಪೊಲೀಸರ ಟೋಪಿ ಬದಲಾಗಲಿ!



ಮಾನ್ಯರೆ,

ಕರ್ನಾಟಕ ಪೊಲೀಸರ ಟೋಪಿಯ ಶೈಲಿ ಬದಲಾಗಿದೆ. ನೀಲಿ ವರ್ಣದ ಈ ಟೋಪಿಯನ್ನು ಧರಿಸಲು ಪೊಲೀಸರಿಗೆ ಮುಜುಗರ ಆಗುತ್ತಿದೆ. ನೀಲಿ ಬಣ್ಣದ ಟೋಪಿಯನ್ನು ಧರಿಸಿದರೆ ಬ್ಯಾಂಡ್ ಬಾರಿಸುವ ಕಲಾವಿದರಂತೆ ಕಾಣುತ್ತದೆ ಎಂದು ಅವರ ಅಂಬೋಣ. ನೀಲಿ ಬಣ್ಣದ ಬದಲಾಗಿ ಇದೇ ಶೈಲಿಯ ಖಾಕಿ ಬಣ್ಣದ ಟೋಪಿಗೆ ಕಪ್ಪು ಅಥವಾ ಕಂದು ಬಣ್ಣದ ಪಟ್ಟಿ ಇರಲಿ. ಪೊಲೀಸ್ ಮತ್ತು ಹೆಡ್ ಕಾನ್ಸ್‌ಟೇಬಲ್ ಧರಿಸುವ ಟೋಪಿಗೆ ಅವರ ಬೆಲ್ಟ್ ಮತ್ತು ಬೂಟುಗಳಿಗೆ ಹೊಂದುವಂತೆ ಕಪ್ಪು ಮತ್ತು ಖಾಕಿ ಬಣ್ಣ ಇರಲಿ. ಎಎಸ್‌ಐ, ಎಸ್‌ಐ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಧರಿಸುವ ಟೋಪಿಗೆ ಅವರ ಬೆಲ್ಟ್ ಮತ್ತು ಬೂಟುಗಳಿಗೆ ಹೊಂದುವಂತಹ ಕಂದು ಬಣ್ಣ ಮತ್ತು ಖಾಕಿ ಬಣ್ಣ ಇರಲಿ. ಈ ವಿಚಾರವಾಗಿ ಪೊಲೀಸ್ ಇಲಾಖೆ ಮತ್ತು ಸರಕಾರ ಕ್ರಮ ಕೈಗೊಳ್ಳಲಿ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಅನುದಾನ ಕಡಿತ:ಟೀಕೆ ಮಾಡಿದರೆ ಸಾಲದು, ಒತ್ತಡ ಹಾಕಿ

ಮಾನ್ಯರೆ,

ಪ್ರತಿ ವರ್ಷ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಸುಮಾರು ಐದು ಲಕ್ಷ ಕೋಟಿಯಷ್ಟು ತೆರಿಗೆ ಹೋಗುತ್ತಿದ್ದರೂ, ಕೇಂದ್ರ ಸರ್ಕಾರ ರಾಜ್ಯಕ್ಕೆ ರೂಪಾಯಿಗೆ ಕೇವಲ 13 ಪೈಸೆಯಷ್ಟು ಮಾತ್ರ ನೆರವು ನೀಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದಾರೆ. ಇದು ನಿಜಕ್ಕೂ ಕಳವಳಕಾರಿ ಸಂಗತಿ. ಹಾವು ಹೊಡೆದು ಹದ್ದಿಗೆ ಹಾಕಿದರು ಎನ್ನುವ ಗಾದೆಯಂತಿದೆ.

ಕಳೆದ ಎರಡೂವರೆ ವರ್ಷದಿಂದಲೂ ಸಭೆಗಳಲ್ಲಿ, ಸದನದಲ್ಲಿ ಸಿದ್ದರಾಮಯ್ಯನವರು ಈ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ ನಮ್ಮ ಪಾಲಿನ ತೆರಿಗೆ ಪಡೆಯಲು ಇವರಾಗಲೀ, ಪಕ್ಷದ ಸಂಸದರಾಗಲೀ, ಸರ್ಕಾರದ ಅಧಿಕಾರಿಗಳಾಗಲೀ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ಹೇರಿದ ನಿದರ್ಶನವಿಲ್ಲ. ಕೇವಲ ಟೀಕೆ ಮಾಡಲು ಹೀಗೆ ಹೇಳಿ, ಅದನ್ನು ಪಡೆಯಲು ಕ್ರಮ ವಹಿಸದಿದ್ದರೆ ಹೇಗೆ? ಸರ್ಕಾರದ ದೆಹಲಿ ಪ್ರತಿನಿಧಿ ಏನು ಮಾಡುತ್ತಿದ್ದಾರೆ? ದೆಹಲಿ ಭವನದಲ್ಲಿರುವ ಕರ್ನಾಟಕದ ಅಧಿಕಾರಿಗಳು ಮಲಗಿದ್ದಾರೇನು? ಉಪ ಮುಖ್ಯಮಂತ್ರಿಗಳು ಮೂರು ಮೂರು ದಿನಕ್ಕೂ ಕೇಂದ್ರ ಸಚಿವರನ್ನು ಭೇಟಿ ಮಾಡಲು ದೆಹಲಿಗೆ ಹೋಗುತ್ತಿರುವುದಾಗಿ ಹೇಳುತ್ತಾರೆ. ಹಾಗಾದರೆ ಇವರು ಮಾಡಿದ್ದೇನು? ರಾಜ್ಯ ಸರ್ಕಾರ ಕಣ್ಣು ತೆರೆಯಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು

ವಿಕ್ರಂ ಮುತ್ತಣ್ಣ ಅವರ ಅಂಕಣ ಪ್ರಜ್ಞಾವಂತ ನಾಗರಿಕರನ್ನು ಬಡಿದೆಬ್ಬಿಸಿದೆ

ಮಾನ್ಯರೆ,

ಗುರುವಾರ (ಜ.22) 'ಮೈಸೂರು ಮಿತ್ರ'ದಲ್ಲಿ ವಿಕ್ರಂ ಮುತ್ತಣ್ಣ ಅವರು 'ಬಿಚ್ಚು ನುಡಿ' ಅಂಕಣದಲ್ಲಿ ಬರೆದಿರುವ ಲೇಖನ 'ಪ್ರಸಾದವೋ ಇಲ್ಲ ಪಾಷಾಣವೋ' ಪ್ರಜ್ಞಾವಂತ ಮೈಸೂರಿನ ನಾಗರಿಕರನ್ನು ಬಡಿದೆಬ್ಬಿಸಿದೆ. ಚಾಮುಂಡಿಬೆಟ್ಟದಲ್ಲಿ ಪ್ರಸಾದದ ಹೆಸರಿನಲ್ಲಿ ಕಾಮಗಾರಿ ಪ್ರಾರಂಭ ಮಾಡಿರುವುದು ಯಾವುದೋ ನಾಲ್ಕು ಜನ ಗುತ್ತಿಗೆದಾರರ ಜೇಬು ತುಂಬಿಸುವ ಹಗಲು ದರೋಡೆಯಂತಾಗಿದೆ. ಈಗಾಗಲೇ ಕಳೆದ ನಾಲ್ಕೈದು ವರ್ಷಗಳಿಂದಲೂ ಮಳೆಗಾಲದಲ್ಲಿ ಚಾಮುಂಡಿಬೆಟ್ಟ ತನ್ನ ಭಾರವನ್ನು ತಡೆಯಲಾರದೆ ಸ್ವಲ್ಪ ಸ್ವಲ್ಪ ಕುಸಿಯುತ್ತಲೇ ಬರುತ್ತಿದೆ. ಈಗ ಪ್ರಸಾದದ ಹೆಸರಿನಲ್ಲಿ ಇಡೀ ಬೆಟ್ಟವೇ ಕಾಂಕ್ರೀಟ್ ಚಾವಣಿಯಂತಾಗುತ್ತದೆ. ಅನೇಕ ತಜ್ಞರು ಹೇಳುವಂತೆ ಮುಂದೊಂದು ದಿನ ಇಡೀ ಬೆಟ್ಟವೇ ಕುಸಿಯಬಹುದು ಎಂದು ತಮ್ಮ ಆತಂಕ ವ್ಯಕ್ತಪಡಿಸುತ್ತಾರೆ. ಮೈಸೂರಿನಲ್ಲಿ ಈಗಾಗಲೇ ಅನೇಕ ಸಂಘ ಸಂಸ್ಥೆಗಳು, ಹಿರಿಯ ಪ್ರಜ್ಞಾವಂತ ನಾಗರಿಕರು ಪ್ರಸಾದ ಯೋಜನೆಯನ್ನು ವಿರೋಧಿಸುತ್ತಿದ್ದರೂ ಕಾಮಗಾರಿಯನ್ನು ಪ್ರಾರಂಭಿಸಿರುವುದು ಮೈಸೂರಿಗರನ್ನು ಒಂದು ರೀತಿಯಲ್ಲಿ ಅವಮಾನಿಸಿದಂತೆ. ಮೈಸೂರನ್ನು ಚಾಮುಂಡಿ ತಾಯಿಯೇ ಕಾಪಾಡುತ್ತಾಳೆ ಎಂಬ ನಂಬಿಕೆ ಈಗಲೂ ಸಾರ್ವಜನಿಕರಲ್ಲಿದೆ. ಸರ್ಕಾರ ಈ ಕೂಡಲೇ ಕಾಮಗಾರಿಯನ್ನು ನಿಲ್ಲಿಸಿ, ಚಾಮುಂಡಿಬೆಟ್ಟವನ್ನು ಉಳಿಸಬೇಕಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಡಿಜಿಪಿ ರಾಸಲೀಲೆ ಪ್ರಕರಣ: ಪೊಲೀಸ್ ಇಲಾಖೆ ತಲೆತಗ್ಗಿಸಬೇಕು

ಮಾನ್ಯರೆ,


ಕರ್ನಾಟಕ ಪೊಲೀಸ್ ಇಲಾಖೆಗೆ ರಾಷ್ಟ್ರದಲ್ಲೇ ವಿಶಿಷ್ಟ ಸ್ಥಾನವಿದೆ. ಶಿಸ್ತು, ದಕ್ಷತೆಗೆ ಮತ್ತೊಂದು ಹೆಸರೇ ಕರ್ನಾಟಕ ಪೊಲೀಸ್. ಹೆಚ್.ಟಿ. ಸಾಂಗ್ಲಿಯಾನ, ಕೆಂಪಯ್ಯರಂತಹ ದಕ್ಷ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದ ಖ್ಯಾತಿಯನ್ನು ಇಲಾಖೆ ಹೊಂದಿದೆ. ಆದರೆ ಇತ್ತೀಚೆಗೆ ಈ ಇಲಾಖೆಯಲ್ಲಿ ನಡೆಯುತ್ತಿರುವ ವಿದ್ಯಾಮಾನಗಳು ಕಳವಳಕಾರಿ ಬೆಳವಣಿಗೆಯಾಗಿದೆ.

ಮೊನ್ನೆ ನಡೆದ ಹಿರಿಯ ಅಧಿಕಾರಿ ಡಿಜಿಪಿ ರಾಮಚಂದ್ರರಾವ್ ಅವರ ರಾಸಲೀಲೆ ಪ್ರಕರಣ ಇಡೀ ಪೊಲೀಸ್ ಇಲಾಖೆಯನ್ನೇ ತಲೆ ತಗ್ಗಿಸುವಂತೆ ಮಾಡಿದೆ. ಸಮವಸ್ತ್ರದಲ್ಲೇ ಕಚೇರಿ ಒಳಗೆ ಮಹಿಳಾ ಮಣಿಗಳ ಜೊತೆ ರಾಸಲೀಲೆಯಲ್ಲಿ ತೊಡಗಿರುವ ದೃಶ್ಯಗಳು ಬಹಿರಂಗಗೊಂಡಿದ್ದು ಇದರಿಂದ ಇಲಾಖೆಯ ಮಾನ ಹರಾಜು ಆದಂತಾಗಿದೆ. ಉನ್ನತ ಹುದ್ದೆಯಲ್ಲಿ ಇರುವ ಈ ಅಧಿಕಾರಿಯ ಪ್ರಹಸನ ನಾಗರಿಕ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿದೆ. ಮಗಳು ಚಿನ್ನ ಕಳ್ಳಸಾಗಣೆಯಲ್ಲಿ ನಿಷ್ಣಾತೆ, ತಂದೆ ರಾಸಲೀಲೆಯಲ್ಲಿ ರಸಿಕ. ಮಗಳ ಕುಕೃತ್ಯಗಳಿಗೆ ತಂದೆಯ ಪರೋಕ್ಷ ಸಹಕಾರ. ಇದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬಂತಾಗಿದೆ.

ಇತ್ತೀಚೆಗೆ ರಾಜ್ಯ ಪೊಲೀಸ್ ಇಲಾಖೆ ರಾಜಕೀಯ ಮರ್ಜಿಯಲ್ಲಿ ಕೆಲಸ ಮಾಡುತ್ತಿದೆಯೋ ಎಂಬ ಗುಮಾನಿ ಸಾರ್ವತ್ರಿಕವಾಗಿ ಕೇಳಿ ಬರುತ್ತಿದೆ. ಇದಕ್ಕೆ ಒಂದು ನಿದರ್ಶನವೆಂಬಂತೆ ಶಿಡ್ಲಘಟ್ಟದಲ್ಲಿ ಮಹಿಳಾ ಅಧಿಕಾರಿಗೆ ಧಮ್ಕಿ ಹಾಕಿದ ಒಬ್ಬ ರಾಜಕೀಯ ಪುಡಾರಿಯ ಘಟನೆ ನಡೆದು ವಾರವಾದರೂ ಈ ತನಕ ಬಂಧಿಸದಿರುವುದು ಇಲಾಖೆಯ ಕಾರ್ಯದಕ್ಷತೆಯನ್ನು ಪ್ರಶ್ನಿಸುವಂತಾಗಿದೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ಹಾಡುಹಗಲೇ ಎಟಿಎಂ ಹಣ ದರೋಡೆ ಮಾಡಿದ ತಂಡವನ್ನು ಘಟನೆ ನಡೆದ ಒಂದೇ ದಿನದಲ್ಲಿ ಹೆಡೆಮುರಿ ಕಟ್ಟಿ ಬಂಧಿಸಲಾಗುತ್ತದೆ. ಕಳೆದ ವಾರ ಹುಣಸೂರು ನಗರದಲ್ಲಿ ಹಾಡುಹಗಲೇ ಚಿನ್ನದ ಅಂಗಡಿ ದರೋಡೆ ನಡೆಸಿದ ಆರೋಪಿಗಳನ್ನು ದೂರದ ಬಿಹಾರದಿಂದ ಹಿಡಿದು ತರುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆದರೆ ಶಿಡ್ಲಘಟ್ಟದ ಓರ್ವ ಸ್ಥಳೀಯ ಪುಡಾರಿಯನ್ನು ಬಂಧಿಸಲು ವಿಳಂಬ ಮಾಡುತ್ತಿರುವ ಪೊಲೀಸರ ಕ್ಷಮತೆಯನ್ನು ಇಲ್ಲಿ ಪ್ರಶ್ನಿಸುವಂತಾಗಿದೆ. ಈ ವ್ಯಕ್ತಿಯನ್ನು ಬಂಧಿಸಲು ರಾಜಕೀಯ ಒತ್ತಡ ಕಾರಣವೇ ಅಥವಾ ಉದ್ದೇಶಿತ ವಿಳಂಬವೇ ಎಂಬುದು ನಿಗೂಢ ಪ್ರಶ್ನೆಯಾಗಿದೆ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಯೋಗ–ಸಮತೋಲನ



ಆರೋಗ್ಯ ಮತ್ತು ಅಧ್ಯಾತ್ಮದ ಬೆಳವಣಿಗೆಯಲ್ಲಿ ಯೋಗದ ಅಸಾಧಾರಣವಾದ ಪಾತ್ರದ ಬಗ್ಗೆ ಬಹಳಷ್ಟು ಕೇಳಿಯೇ ಇರುತ್ತೀರಿ. ಆದರೆ ಯೋಗ ವಿಜ್ಞಾನದ ಮುಖ್ಯವಾದ ಕೊಡುಗೆಯೆಂದರೆ, ದೈಹಿಕ ಮತ್ತು ಮಾನಸಿಕ ಸ್ತರದಲ್ಲಿ ಸಮತೋಲನ. ಸಾಮಾಜಿಕ ಪರಿವರ್ತನೆ, ಬೆರಗಾಗಿಸುವಂತಹ ತಾಂತ್ರಿಕ ಬೆಳವಣಿಗೆಗೆ ಸಾಕ್ಷಿಯಾಗಿರುವ ಇಂದಿನ ಜಗತ್ತಿನಲ್ಲಿ ಸಮತೋಲನ ಅತ್ಯವಶ್ಯಕ. ಉದ್ರೇಕ ಮತ್ತು ಯಾವುದೇ ರೀತಿಯ ಬಾಹ್ಯ ಪ್ರಚೋದನೆಗಳಿಗೆ ಜಗ್ಗದೆ, ಸ್ಥಿರವಾದ ಸಮತೋಲನವನ್ನು ಕಾಯ್ದುಕೊಳ್ಳುವುದು ಅತ್ಯವಶ್ಯಕ.

ಸಮತೋಲನವಿಲ್ಲದೇ ಸೈಕಲ್ ಅನ್ನು ಓಡಿಸುವುದು ಅಪಾಯಕಾರಿ. ಜೀವನದ ತರ್ಕವೂ ಕೂಡ ಅದೇ. ಅಗಾಧವಾದ ಸಾಮರ್ಥ್ಯವಿದ್ದರೂ ಕೂಡ, ಮಾನಸಿಕ ಸಮತೋಲನ ಇಲ್ಲದಿದ್ದರೆ, ಜೀವನವು ಆಘಾತಕಾರಿಯಾಗಿ ಬಿಡುತ್ತದೆ. ಸಂಕಷ್ಟಗಳಿಗೆ ಹೆದರಿ ಹೆಚ್ಚಿನ ಭಾಗದ ಮಾನವ ಜನಾಂಗ ಜೀವನವನ್ನು ಸಂಪೂರ್ಣವಾಗಿ ಅನ್ವೇಷಿಸುವುದೇ ಇಲ್ಲ. ಆದರೆ, ಸಮತೋಲನ ಇರುವವರು ಜೀವನದ ಏಳು ಬೀಳುಗಳನ್ನು ನಿರಾಯಾಸವಾಗಿ ಎದುರಿಸುತ್ತಾರೆ.

ಭಾರತದಲ್ಲಿ 2015ರಲ್ಲಿ ಸುಮಾರು 10,000 ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಇವರಲ್ಲಿ ಸುಮಾರು 1500 ಮಕ್ಕಳು 14 ವರ್ಷದ ಕೆಳಗಿನವರು. ಇದು ಖಂಡಿತ ನಮ್ಮ ಸಮಾಜ ಮೂಲದಲ್ಲಿಯೇ ತಪ್ಪು ಹೆಜ್ಜೆ ಇಡುತ್ತಿದೆ ಎಂದು ಸೂಚಿಸುತ್ತದೆ. ನಾವು ಬಡತನದಿಂದ ಶ್ರೀಮಂತಿಕೆಯತ್ತ ಸಾಗುತ್ತಿದ್ದಂತೆ, ಮಕ್ಕಳ ಮೇಲಿನ ಶೈಕ್ಷಣಿಕ ಒತ್ತಡ ಅಧಿಕವಾಗುತ್ತದೆ. ಈ ಮಿತಿಮೀರಿದ ಆತ್ಮಹತ್ಯೆಗಳಿಗೆ ಮೂಲ ಕಾರಣಗಳೆಂದರೆ, ಪರೀಕ್ಷೆಗಳಲ್ಲಿನ ವೈಫಲ್ಯ ಮತ್ತು ಹದಿಹರೆಯದ ಪ್ರೀತಿಯ ವೈಫಲ್ಯಗಳು. ಬದುಕಿನಲ್ಲಿ ಉತ್ಸಾಹದ ಚಿಲುಮೆಗಳಾಗಿರಬೇಕಾದ ಮಕ್ಕಳು ತಮ್ಮ ಜೀವನವನ್ನು ಅಂತ್ಯಗೊಳಿಸುವುದು ಬಹಳ ದುಃಖಕರ ಸಂಗತಿ.

> ಒಮ್ಮೆ ಜನರು ಸ್ಥಿಮಿತತೆ ಹೊಂದಿ, ಜೀವನೋತ್ಸಾಹವನ್ನು ಸಮತೋಲನದೊಂದಿಗೆ ಅನುಭವಿಸುವಂತಾದರೆ ಖಂಡಿತ ಜೀವನ ನಿರಾಯಾಸವಾಗಿ ಅದ್ಭುತ ಸಾಧ್ಯತೆಯಾಗುತ್ತದೆ. ಕೊನೆಯೇ ಇಲ್ಲದ ಆನಂದ ಮತ್ತು ಸ್ಪಷ್ಟತೆ ಪ್ರಜ್ವಲಿಸುತ್ತದೆ.

ಶೈಕ್ಷಣಿಕ ಸುಧಾರಣೆ ಅತಿ ಮುಖ್ಯವಾಗಿದೆ. ಅಂದರೆ, ನಮ್ಮ ಶಿಕ್ಷಣದ ಮೂಲ ಪದ್ಧತಿಯಲ್ಲೇ ಮಾರ್ಪಾಡು ಮಾಡಬೇಕಾಗುತ್ತದೆ. ಶಿಕ್ಷಣ ಕೇವಲ ಉದ್ಯೋಗದ ಅನ್ವೇಷಣೆಯತ್ತ ಸಾಗದೆ, ವೃತ್ತಿಪರವಾಗಬೇಕು. ಇದಕ್ಕಾಗಿ, ನಾವು ರಾತ್ರೋರಾತ್ರಿ ಇಂತಹ ಅಪೂರ್ವ ಪಾಂಡಿತ್ಯ ಇರುವ ಶಿಕ್ಷಕರನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ಹಾಗಾಗಿ, ಈಗ ಅತ್ಯವಶ್ಯಕವಾಗಿರುವುದೆಂದರೆ, ನಮ್ಮ ಈ ಶಿಕ್ಷಣ ಪದ್ಧತಿಯ ಹುಚ್ಚುತನವನ್ನು ತಾಳಿಕೊಂಡು ಸಮತೋಲನದಿಂದ ಸಜ್ಜಾಗಿರುವ ಪೀಳಿಗೆಯನ್ನು ತಯಾರು ಮಾಡುವುದೇ ಆಗಿದೆ.

ನಿಜ ಹೇಳಬೇಕೆಂದರೆ, ಭಾರತದಲ್ಲಿನ "ಆತ್ಮಹತ್ಯಾ ಪ್ರಯತ್ನಗಳ" ಲೆಕ್ಕ ಸಂಪೂರ್ಣವಾಗಿ ತಿಳಿದಿಲ್ಲ. ಏಕೆಂದರೆ, ಜೈಲು ಶಿಕ್ಷೆಗೆ ಕಾರಣವಾಗುವ ಕೆಲಸದ ಬಗ್ಗೆ ಯಾರೂ ಹೇಳಿಕೊಳ್ಳುವುದಿಲ್ಲ. ಅಂದರೆ, ಅವರ ಅಸಮರ್ಥತೆಗೆ ಶಿಕ್ಷೆಯನ್ನು ಅನುಭಭವಿಸುತ್ತಾರೆ ಎಂದು ಅರ್ಥ. (ನೀವು ಯಶಸ್ವಿಯಾಗಿದ್ದರೆ, ನಿಮ್ಮನ್ನು ಶಿಕ್ಷಿಸುವುದು ಅಸಾಧ್ಯ) ಇಲ್ಲಿ ವಿಡಂಬನಾತ್ಮಕ ವ್ಯಂಗ್ಯವೆಂದರೆ, ನಮ್ಮ ಸಹಾನುಭೂತಿ, ಆರೈಕೆ ಮತ್ತು ಪೋಷಣೆ ಪಡೆಯಬೇಕಾದವರು ದಂಡನೆಗೆ ಗುರಿಯಾಗುತ್ತಿದ್ದಾರೆ.

ಸೀಮಿತವಾದ ಸಂದರ್ಭಗಳನ್ನು ದಿನನಿತ್ಯ ಎದುರಿಸುವ ನಮ್ಮ ಸೈನಿಕರು ಮಾನಸಿಕ ಸ್ಥಿರತೆ ಮತ್ತು ಸಮತೋಲನ ಕಾಯ್ದುಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ದೇಶವನ್ನು ಕಾಯುವಾಗ ಹೇಳಲಾಗದಂತಹ ಕಾಠಿಣ್ಯಗಳನ್ನು ಎದುರಿಸಬೇಕಾಗುತ್ತದೆ. ಮುಂಚೂಣಿಯಲ್ಲಿದ್ದು, ಕೆಲಸ ಮಾಡುವುದೆಂದರೆ, ಅದು ಸೂಕ್ಷ್ಮಾತಿ ಸೂಕ್ಷ್ಮ ಮತ್ತು ದುರ್ಬಲ ಸಂದರ್ಭಗಳನ್ನು ಎದುರಿಸುವಂತಹ ಪರಿಸ್ಥಿತಿ. ಪ್ರತಿದಿನ ಕರ್ತವ್ಯಪಾಲನೆ ಮಾಡುವಾಗ ನಿರಂತರವಾಗಿ ಬರುವ ಅಪಾಯಗಳನ್ನು ಎದುರಿಸಲು ಶಿಸ್ತು ಮತ್ತು ಪಕ್ವತೆ ಅಗಾಧವಾಗಿರಬೇಕು.

ಇಂತಹ ದಿನನಿತ್ಯದ ಅಪಾಯಗಳನ್ನು ಎದುರಿಸಲು ಇರುವ ಅಮೂಲ್ಯವಾದ ಸಾಧನ ಉಪ–ಯೋಗ. ಸುಲಭವಾಗಿ ಹೇಳಿಕೊಡಲು ಮತ್ತು ಅಳವಡಿಸಿಕೊಳ್ಳಲು ಇರುವ ಒಂದು ಸರಳ ಯೋಗಾಭ್ಯಾಸ. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯವಾಗುವಂತೆ ಜಾಗರೂಕತೆಯಿಂದ ರೂಪಿಸಿರುವ ಸಾಧನ ಉಪ–ಯೋಗ. ತೀವ್ರ ಮತ್ತು ಒತ್ತಡದ ಸನ್ನಿವೇಶಗಳಲ್ಲಿ ಸೈನಿಕರಿಗೂ ಈ ಅಭ್ಯಾಸ ಅಮೂಲ್ಯವಾಗುತ್ತದೆ. ಅವರ ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ. ಒಮ್ಮೆ ಜನರು ಸ್ಥಿಮಿತತೆ ಹೊಂದಿ, ಜೀವನೋತ್ಸಾಹವನ್ನು ಸಮತೋಲನದೊಂದಿಗೆ ಅನುಭವಿಸುವಂತಾದರೆ ಖಂಡಿತ ಜೀವನ ನಿರಾಯಾಸವಾಗಿ ಅದ್ಭುತ ಸಾಧ್ಯತೆಯಾಗುತ್ತದೆ. ಕೊನೆಯೇ ಇಲ್ಲದ ಆನಂದ ಮತ್ತು ಸ್ಪಷ್ಟತೆ ಪ್ರಜ್ವಲಿಸುತ್ತದೆ.

ಉಪ–ಯೋಗದ ವಿಶೇಷತೆಯೇ ಅದರ ಸರಳತೆ. ಶಾಸ್ತ್ರೀಯ ಯೋಗ ವಿಜ್ಞಾನವನ್ನು ಕಟ್ಟುನಿಟ್ಟಾಗಿ ಸೂಚನೆಗಳ ಪ್ರಕಾರ ಮಾಡದಿದ್ದರೆ ದುಷ್ಪರಿಣಾಮಗಳಾಗುವಂತೆ, ಉಪ–ಯೋಗ ಮಾಡುವಾಗ ಅಲ್ಪ–ಸ್ವಲ್ಪ ವ್ಯತ್ಯಾಸವಿದ್ದರೆ ಯಾವುದೇ ಹಾನಿ ಆಗುವುದಿಲ್ಲ. ಈ ಅದ್ಭುತ ಮತ್ತು ಸರಳ ಸಾಧನದಿಂದ ಬದಲಾವಣೆ ಹೊಂದಲು ಯೋಗವು ನಮ್ಮ ದೇಶಕ್ಕಷ್ಟೇ ಅಲ್ಲದೆ ಇಡೀ ವಿಶ್ವಕ್ಕೆ ಒಂದು ಸಾಧ್ಯತೆಯಾಗಿದೆ.

ಸ್ಪಷ್ಟ ಮಾಹಿತಿಯೊಂದಿಗೆ ನಡೆಸುವ ಸಂಶೋಧನೆ ಅಧ್ಯಯನಕ್ಕೆ ಅನುಕೂಲ

ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ಸಲಹೆ



'ಸಂಶೋಧನಾ ವಿಧಾನದ ಪಾಂಡಿತ್ಯ' ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಮೈಸೂರು ವಿವಿ ಕುಲಸಚಿವ (ಪರಿಕ್ಷಾಂಗ) ಪ್ರೊ.ಎನ್. ನಾಗರಾಜು ಉದ್ಘಾಟಿಸಿದರು.

ಮೈಸೂರು,ಜ.22(ಎಂಕೆ)– ಪಿಹೆಚ್‌ಡಿ ಸಂಶೋಧನೆಯೆಂದರೆ ವಿಶ್ವಾಸ, ನಿಖರತೆ ಮತ್ತು ಸ್ಪಷ್ಟತೆಯೊಂದಿಗೆ ಸಮರ್ಪಣೆ ಮಾಡುವುದಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾಳವಿಯ ಮಿಷನ್ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಹೆಚ್.ಪಿ.ಜ್ಯೋತಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಗ್ರಂಥಾಲಯ ಸಹಯೋಗದೊಂದಿಗೆ ಮಾನಸ ಮೀಡಿಯಾ ಸಭಾಂಗಣದಲ್ಲಿ ಸಂಶೋಧಕರಿಗಾಗಿ ಆಯೋಜಿಸಿದ್ದ 'ಸಂಶೋಧನಾ ವಿಧಾನದ ಪಾಂಡಿತ್ಯ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಅಧ್ಯಯನ ಮತ್ತು ಸ್ಪಷ್ಟ ಮಾಹಿತಿಯೊಂದಿಗೆ ನಡೆಸುವ ಸಂಶೋಧನೆಯಿಂದ ಮುಂದಿನ ಅಧ್ಯಯನಕ್ಕೂ ಅನುಕೂಲವಾಗಲಿದೆ ಎಂದು ಸಲಹೆ ನೀಡಿದರು.

ಪ್ರಶ್ನೆಗಳ ಆಯ್ಕೆ, ಅಧ್ಯಯನ ಸಾಮಗ್ರಿಗಳ ಆಯ್ಕೆ, ಕ್ಷೇತ್ರ ಅಧ್ಯಯನ, ದತ್ತಾಂಶ ಸಂಗ್ರಹದ ನಂತರ ವಿಶ್ಲೇಷಿಸಿ ವ್ಯಾಖ್ಯಾನಿಸುವುದು ಸಂಶೋಧನೆಯ ಮುಖ್ಯ ಹಂತಗಳಾಗಿವೆ. ಈ ವೇಳೆ ಮಾರ್ಗದರ್ಶಕರಿಂದ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳಬೇಕು. ಪುಟಗಳ ಸಂಖ್ಯೆಗಿಂತ ಮೌಲ್ಯಯುತ ಸಂಶೋಧನಾ ಪ್ರಬಂಧ ರೂಪಿಸುವುದು ಅವಶ್ಯವಾಗಿರಲಿದೆ ಎಂದು ತಿಳಿಸಿದರು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರು ವಿವಿ ಕುಲಸಚಿವ(ಪರಿಕ್ಷಾಂಗ) ಪ್ರೊ.ಎನ್.ನಾಗರಾಜು ಮಾತನಾಡಿ, ಸಂಶೋಧನೆಯು ಮೂಲ ಪ್ರಾಥಮಿಕ ದತ್ತಾಂಶ ಸಂಗಹ್ರಣೆಯಿಂದ ವ್ಯಾಖ್ಯಾನದವರೆಗೆ ನಡೆಯುವ ಕಲಿಕಾ ಪ್ರಕ್ರಿಯೆಯಾಗಿದೆ. ಸಂಶೋಧನಾ ಕಲಿಕೆಯ ಪ್ರಾಥಮಿಕ ಹಂತಗಳನ್ನು ತಿಳಿಯಲು ಕನಿಷ್ಠ ಮೂರು ವರ್ಷಗಳು ಮತ್ತು ಸಂಶೋಧನಾ ವರದಿ ತಯಾರಿಸಲು ಇನ್ನೂ ಎರಡು ವರ್ಷಗಳು ಬೇಕಾಗುತ್ತದೆ ಎಂದು ಹೇಳಿದರು. ಮೈಸೂರು ವಿವಿ ನಿವೃತ್ತ ಗ್ರಂಥಪಾಲಕ ರಾಮಶೇಷ್, ಗ್ರಂಥಪಾಲಕರಾದ ಡಾ.ಪಿ.ಸರಸ್ವತಿ, ಸಹಾಯಕ ಗ್ರಂಥಪಾಲಕ ಎ.ಎನ್.ರಮೇಶ್ ಮತ್ತಿತರರಿದ್ದರು.

ದಂಟಳ್ಳಿ ಏತ ನೀರಾವರಿ ಯೋಜನೆ ವಿಳಂಬ ಖಂಡಿಸಿ

ಜ.31ರಂದು ಮಲೆ ಮಹದೇಶ್ವರ ಬೆಟ್ಟದ ರಸ್ತೆ ತಡೆದು ಪ್ರತಿಭಟನೆ

ಮೈಸೂರು, ಜ.22(ಜಿಎ)–ಚಾಮರಾಜನಗರ ರಾಮಾಪುರ ಹೋಬಳಿ ವ್ಯಾಪ್ತಿಯ ದಂಟಳ್ಳಿ ಏತ ನೀರಾವರಿ ಯೋಜನೆಗೆ ಡಿಪಿಆರ್ ಮಾಡಿಸುವಲ್ಲಿ ಸರ್ಕಾರ, ಜಿಲ್ಲಾಡಳಿತ, ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ಜ.31ರಿಂದ ಮಲೆ ಮಹದೇಶ್ವರ ಬೆಟ್ಟ ರಸ್ತೆಯ ವಡಕೆಹಳ್ಳದಲ್ಲಿ ಅನಿರ್ದಿಷ್ಟಾವಧಿ ರಸ್ತೆ ತಡೆ ನಡೆಸಲಾಗುವುದು ಎಂದು ಏತ ನೀರಾವರಿ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕ ಶೈಲೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏತ ನೀರಾವರಿ ಯೋಜನೆಗೆ ಡಿಪಿಆರ್ ಮಾಡಿಸುವುದಾಗಿ ಮಾತು ಕೊಟ್ಟಿದ್ದ ಶಾಸಕ ಎಂ.ಆರ್.ಮಂಜುನಾಥ್ ವಚನ ಭ್ರಷ್ಟರಾಗಿದ್ದಾರೆ. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಸಂಸದ ಸುನಿಲ್ ಬೋಸ್ ಸಹಾ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಹೀಗಾಗಿ ಈಗ ಅನಿವಾರ್ಯವಾಗಿ ರಸ್ತೆ ತಡೆ ನಡೆಸಬೇಕಾಗಿದೆ. ಪ್ರತಿಭಟನೆ ವೇಳೆ ಯಾವುದಾದರೂ ಅನಾಹುತ ಸಂಭವಿಸಿದರೆ ಅದಕ್ಕೆ ಜಿಲ್ಲಾಡಳಿತ, ಸರ್ಕಾರ ಹಾಗೂ ಜನಪ್ರತಿನಿಧಿಗಳೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹನೂರು ಹೋಬಳಿಯ ಮಾರ್ಟಳ್ಳಿ, ಶೆಟ್ಟಹಳ್ಳಿ, ಕುರಟ್ಟಿ ಹೊಸೂರು, ರಾಮಾಪುರ, ಕೌದಳ್ಳಿ, ಮಹದೇಶ್ವರ ಬೆಟ್ಟ ಪಂಚಾಯಿತಿ, ವಡಕೆಹಳ್ಳದಲ್ಲಿ ಕಳೆದ 20 ವರ್ಷಗಳಿಂದ ಸರಿಯಾಗಿ ಮಳೆ ಬಾರದೇ ಅಂತರ್ಜಲ ಕುಸಿದಿದೆ. ಸುಮಾರು 1300 ಅಡಿ ಕೊರೆಯಿಸಿದರೂ ನೀರು ಬರುತ್ತಿಲ್ಲ. ಈಗ ಇರುವ ಕೊಳವೆ ಬಾವಿಗಳ ನೀರು ಗಡುಸಾಗಿದ್ದು, ಸೇವನೆಗೆ ಯೋಗ್ಯವಲ್ಲ. ಇವೆಲ್ಲವೂ ಕಾವೇರಿ ನದಿಯಿಂದ ಸುಮಾರು 30 ಕಿಮೀ ವ್ಯಾಪ್ತಿಯಲ್ಲಿ ಬರುತ್ತವೆ ಎಂದರು.

ಕಾವೇರಿ ನದಿಯಿಂದ ದಂಟಳ್ಳಿ ಮಾರ್ಗವಾಗಿ ಏತ ನೀರಾವರಿ ಸೌಲಭ್ಯ ಕಲ್ಪಿಸಿದರೆ, ಸಮಸ್ಯೆ ಬಗೆಹರಿಯಲಿದೆ. ಕಳೆದ ಅ.27ರಿಂದ ವಡಕೆಹಳ್ಳದಲ್ಲಿ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಸ್ಥಳಕ್ಕಾಗಮಿಸಿದ ಅಂದಿನ ಡಿಸಿ ಶಿಲ್ಪಾನಾಗ್, ಶಾಸಕ ಮಂಜುನಾಥ್ ಸಂಕ್ರಾಂತಿ ಕಳೆದ ಬಳಿಕ ಡಿಪಿಆರ್ ಸಿದ್ಧಪಡಿಸುವುದಾಗಿ ತಿಳಿಸಿದ್ದರು. ಆದರೂ ನಿರ್ಲಕ್ಷ್ಯ ವಹಿಸಿದ್ದಾರೆ. ಹೀಗಾಗಿ ಜ.31ರಿಂದ ರಸ್ತೆತಡೆ ಚಳವಳಿ ಹಮ್ಮಿಕೊಳ್ಳಲಾಗುತ್ತಿದೆ. ಹೀಗಾಗಿ ಮಹದೇಶ್ವರ ಬೆಟ್ಟಕ್ಕೆ ಬೆಂಗಳೂರು, ರಾಮನಗರ, ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ ಜಿಲ್ಲೆ ವ್ಯಾಪ್ತಿಯ ಪಾದಯಾತ್ರಿಗಳು, ಬೆಟ್ಟಕ್ಕೆ ಬರುವ ಇತರೆ ಭಕ್ತರು, ಪ್ರವಾಸಿಗರು ತಮ್ಮ ಯೋಜನೆ ಮುಂದೂಡಬೇಕು. ಇದಕ್ಕಾಗಿ ಕ್ಷಮೆ ಯಾಚಿಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಾನ್‌ಪಾಲ್, ಅರ್ಬುದರಾಜ್, ಪೌಲ್ ಧರ್ಮರಾಜ್ ಮಾರ್ಟಳ್ಳಿ, ಅರುಳ್ ದಾಸ್ ಉಪಸ್ಥಿತರಿದ್ದರು.

ಪ್ರಸ್ತುತ ಹಿಂದೂ ಧರ್ಮದ ರಕ್ಷಣೆಗೆ ಯಾರೂ ಮುಂದಾಗುತ್ತಿಲ್ಲ

ಆಯುಷ್ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಹೆಗಡೆ ವಿಷಾದ



ವಿಶ್ವಶಾಂತಿ ದಿನಾಚರಣೆ ಕಾರ್ಯಕ್ರಮವನ್ನು ಆಯುಷ್ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಹೆಗಡೆ ಉದ್ಘಾಟಿಸಿದರು.

ಮೈಸೂರು,ಜ.22(ಎಸ್‌ಪಿಎನ್)– ಹಿಂದೂ ಧರ್ಮಕ್ಕೆ ಸಾವಿರಾರು ವರ್ಷಗಳ ಹಿನ್ನೆಲೆಯಿದೆ. ಆದರೆ, ಪ್ರಸ್ತುತ ಹಿಂದೂ ಧರ್ಮಕ್ಕೆ ಚ್ಯುತಿಯಾಗುತ್ತಿದ್ದರೂ ಇದರ ರಕ್ಷಣೆಗೆ ಒಬ್ಬರೂ ಮುಂದಾಗುತ್ತಿಲ್ಲ ಎಂದು ಬೆಂಗಳೂರು ಆಯುಷ್ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಹೆಗಡೆ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಜ್ಞಾನಪ್ರಕಾಶ ಭವನದಲ್ಲಿ ಪ್ರಜಾಪಿತ ಬ್ರಹ್ಮಾರವರ 57ನೇ ಅವ್ಯಕ್ತ ಪುಣ್ಯಸ್ಮರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ವಿಶ್ವಶಾಂತಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಮಾಯಣದಲ್ಲಿ ಬರುವ ಶ್ರೀರಾಮ ಮತ್ತು ರಾವಣ ಇಬ್ಬರು ದೈವಭಕ್ತರಾದರೂ ಶ್ರೀರಾಮ ನೀತಿ–ಮೌಲ್ಯಗಳನ್ನು ಅಳವಡಿಸಿಕೊಂಡು ರಾಜ್ಯಭಾರ ಮಾಡುತ್ತಿದ್ದ. ಅದಕ್ಕಾಗಿ ರಾಮ ಇಂದಿಗೂ ಜನಮಾನಸದಲ್ಲಿದ್ದಾನೆ. ಆದರೆ, ರಾವಣ ದೈವಭಕ್ತರಾದರೂ ತನ್ನ ರಾಜ್ಯದಲ್ಲಿ ನೀತಿ–ನಿಯಮಗಳನ್ನು ಪಾಲಿಸುತ್ತಿರಲಿಲ್ಲ ಹಾಗಾಗಿ ಆತನಿಗೆ ಇಂದಿಗೂ ಜನಮಾನಸದಲ್ಲಿ ಕೆಟ್ಟ ಅಭಿಪ್ರಾಯ ಮೂಡಿದೆ ಎಂದು ಅಭಿಪ್ರಾಯಪಟ್ಟರು.

ಸನಾತನ ಧರ್ಮದಲ್ಲಿ ಸಹೋದರತ್ವ, ಭ್ರಾತೃತ್ವ ಎಲ್ಲವೂ ಇದೆ. ಆದರೂ ಹಿಂದೂ ಧರ್ಮದ ಅವಹೇಳನ ಸಮಾಜದಲ್ಲಿ ವ್ಯಾಪಕವಾಗಿದೆ. ಧರ್ಮ ಎಲ್ಲಾ ರಂಗದಲ್ಲೂ ಇರಬೇಕು. ಆದರೆ, ಸಮಾಜದಲ್ಲಿ ಅಧರ್ಮ ಇರಬಾರದು. ಇಂದು ಮತ–ಪಂಥಗಳ ಕುರಿತು ಹೆಚ್ಚು ಚರ್ಚೆ ಮಾಡುತ್ತಿದ್ದೇವೆ. ಆದರೆ, ಸಾವಿರಾರು ವರ್ಷಗಳ ಹಿಂದೆಯೇ ವೇದಶಾಸ್ತ್ರದಲ್ಲಿ ಉಲ್ಲೇಖಿವಾಗಿರುವ ಧರ್ಮದ ಕುರಿತು ಚರ್ಚೆಯಾಗದಿರುವುದು ಬೇಸರದ ಸಂಗತಿ ಎಂದರು.

ಸನಾತನ ಧರ್ಮ ಸದಾ ಶಾಂತಿ ಬೋಧನೆ ಮಾಡುವ ಧರ್ಮ. ಆದರೆ, ಕೆಲವರು ಹಿಂದೂ ಧರ್ಮದ ಕುರಿತು ಬೇರೆ ರೀತಿಯಲ್ಲಿ ನಿರೂಪಣೆ ಮಾಡುತ್ತಿದ್ದಾರೆ. ಹಾಗಾಗಿ ಹಿಂದೂ ಧರ್ಮ ಅಪಾಯದಲ್ಲಿದೆ ಎಂಬಂತೆ ನನಗೆ ಭಾಸವಾಗುತ್ತಿದೆ. ಇದರ ರಕ್ಷಣೆಗೆ ಪ್ರತಿಯೊಬ್ಬರು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯ ಮೈಸೂರು ಘಟಕದ ಮುಖ್ಯಸ್ಥರಾದ ರಾಜಯೋಗಿನಿ ಹಿರಿಯ ಜಾನಪದ ಕಲಾವಿದ ಅಮ್ಮ ರಾಮಚಂದ್ರ, ಬಿಕೆ ಆತ್ಮಾನಂದ, ಬ್ರಹ್ಮಕುಮಾರಿ ಅಶ್ವಿನಿ ಸರಸ್ವತಿಪುರಂ ಶಾಖೆಯ ಮುಖ್ಯಸ್ಥೆ, ಖಾಸಗಿ ಕಂಪನಿಯ ಡಿಜಿಟಲ್ ಎಐ ಪ್ರೈಲಿನ ಸಿಇಒ ರವಿಶಂಕರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಜಿಲ್ಲಾಧ್ಯಕ್ಷ ಕೆ.ಬಿ. ಲಿಂಗರಾಜು ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಸ್ಕಾನ್ ವತಿಯಿಂದ ನಾಳೆ
ಶ್ರೀಕೃಷ್ಣ ಬಲರಾಮ ರಥಯಾತ್ರೆ



ಮೈಸೂರು ಇಸ್ಕಾನ್ ಸಂಸ್ಥೆ ಉಪಾಧ್ಯಕ್ಷ ಕಾರುಣ್ಯ ಸಾಗರ್‌ದಾಸ ಗೋಷ್ಠಿಯಲ್ಲಿ ಮಾತನಾಡಿದರು. ರಥಯಾತ್ರೆ ಸಂಯೋಜಕ ಸೌಮ್ಯ ಕೃಷ್ಣ ರೂಪದಾಸ ಚಿತ್ರದಲ್ಲಿದ್ದಾರೆ.

ಮೈಸೂರು, ಜ.22(ಜಿಎ)–ಮೈಸೂರು ಇಸ್ಕಾನ್ ವತಿಯಿಂದ ಜ.24ರಂದು ಸಂಜೆ 4.30ಕ್ಕೆ 28ನೇ ವಾರ್ಷಿಕ ಶ್ರೀ ಕೃಷ್ಣ ಬಲರಾಮನ ರಥಯಾತ್ರೆ ನಡೆಸಲಾಗುವುದು ಎಂದು ಮೈಸೂರು ಇಸ್ಕಾನ್ ಸಂಸ್ಥೆ ಉಪಾಧ್ಯಕ್ಷ ಕಾರುಣ್ಯ ಸಾಗರ್‌ದಾಸ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರತಿ ವರ್ಷದಂತೆ ಈ ಬಾರಿಯೂ ರಥಯಾತ್ರೆ ಹಮ್ಮಿಕೊಂಡಿದ್ದು, ಇಸ್ಕಾನ್ ದೇವಸ್ಥಾನಕ್ಕೆ ಭೇಟಿ ನೀಡಲಾಗದಿರುವ ಸಾವಿರಾರೂ ಭಕ್ತರು ಶ್ರೀಕೃಷ್ಣನ ದರ್ಶನ ಪಡೆದುಕೊಳ್ಳಬೇಕೆಂಬ ಸದುದ್ದೇಶದಿಂದ ಈ ರಥಯಾತ್ರೆ ನಡೆಸುತಿದ್ದೇವೆ ಎಂದರು.

ಅಂದು ಸಂಜೆ 4.30ರಿಂದ 5.30ರವರೆಗೆ ಅರಮನೆಯ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ವೇದಿಕೆ ಕಾರ್ಯಕ್ರಮವಿದೆ. ಬಳಿಕ ಅಲ್ಲಿಂದ ರಥಯಾತ್ರೆ ಹೊರಡಲಿದೆ. ರಥಯಾತ್ರೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಹಾಗೂ ಬೆಂಗಳೂರು ಇಸ್ಕಾನ್ ಅಧ್ಯಕ್ಷ ಮಧು ಪಂಡಿತ್ ದಾಸ ಅವರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ರಥಯಾತ್ರೆಯೂ ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ, ಡಿ.ದೇವರಾಜ ಅರಸು ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ರಾಮಸ್ವಾಮಿ ವೃತ್ತ, ಆರ್.ಟಿ.ಓ ವೃತ್ತ, ಬಲ್ಲಾಳ್ ವೃತ್ತ, ನ್ಯೂ ಕಾಂತರಾಜ ಅರಸು ರಸ್ತೆ, ಜಯನಗರ 2ನೇ ಮುಖ್ಯ ರಸ್ತೆ ಮೂಲಕ ಸಾಗಿ ಅಂತಿಮವಾಗಿ ಇಸ್ಕಾನ್ ದೇವಸ್ಥಾನ ಬಳಿ ರಥಯಾತ್ರೆ ರಾತ್ರಿ 8.30ಕ್ಕೆ ಸಂಪನ್ನಗೊಳ್ಳಲಿದೆ ಎಂದರು.

ರಥಯಾತ್ರೆಯಲ್ಲಿ ಸಾರ್ವಜನಿಕರು ಭಾಗವಹಿಸಬಹುದಾಗಿದ್ದು, ಭಕ್ತರು ಶ್ರೀ ಕೃಷ್ಣನಿಗೆ ಹಣ್ಣು, ಕಾಯಿ, ಪೂಜಾ ಸಾಮಗ್ರಿಗಳನ್ನು ಸಲ್ಲಿಸಬಹುದು. ರಥವನ್ನು ಎಳೆಯಲು ಕೈಜೋಡಿಸಬಹುದು. ರಥ ಸಾಗುವ ರಸ್ತೆಯ ಮಾರ್ಗದ ಮನೆಗಳ ಮುಂದೆ ರಸ್ತೆಯನ್ನು ಸ್ವಚ್ಛಗೊಳಿಸಿ ರಂಗೋಲಿ ಚಿತ್ರಿಸಿ ಅಲಂಕರಿಸಬಹುದು. ರಥ ಮುಂದೆ ಸಾಗಿದಂತೆ ಬಳಿಕ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಗುತ್ತದೆ. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಬೇಕೆಂದು ಕೋರಿದರು. ರಥಯಾತ್ರೆ ಸಂಯೋಜಕ ಸೌಮ್ಯ ಕೃಷ್ಣ ರೂಪದಾಸ ಗೋಷ್ಠಿಯಲ್ಲಿದ್ದರು.

ಮಾರ್ಷಲ್‌ಗಳು ಇಲ್ಲದಿದ್ದರೆ ಕಾಂಗ್ರೆಸ್ ಶಾಸಕರು ರಾಜ್ಯಪಾಲರ ಮೇಲೆ ಹಲ್ಲೆ ನಡೆಸುತ್ತಿದ್ದರೇನೊ...!

ಮಾಜಿ ಸಂಸದ ಪ್ರತಾಪ್ ಸಿಂಹ ಆತಂಕ

- ಕಾಂಗ್ರೆಸ್ ಶಾಸಕರು ಪುಂಡ, ಪೋಕರಿಗಳು
- ಸಂಖ್ಯಾಬಲವಿದೆ ಎಂದು ಅವರಿಗೆ ಮದ
- ಜಿ ರಾಮ್ ಜಿ ಗೆ 2 ಸಾವಿರ ಕೋಟಿ ಕೊಡಬೇಕಿದೆ



ಪ್ರತಾಪ್ ಸಿಂಹ

ಮೈಸೂರು, ಜ.22(ಬಿಎಲ್‌ಯು)– ವಿಧಾನಮಂಡಲ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಸುತ್ತ ಇಂದು ಮಾರ್ಷಲ್‌ಗಳು ಇಲ್ಲದಿದ್ದರೆ ಕಾಂಗ್ರೆಸ್ ಶಾಸಕರು ರಾಜ್ಯಪಾಲರ ಮೇಲೆ ಹಲ್ಲೆ ನಡೆಸುತ್ತಿದ್ದರೇನೊ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದ್ವೇಷಪೂರಿತ ಭಾಷಣವನ್ನು ಸರ್ಕಾರ ಬರೆದುಕೊಟ್ಟರೆ ರಾಜ್ಯಪಾಲರು ಹೇಗೆ ಓದುತ್ತಾರೆ? ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ರಾಜ್ಯಪಾಲರಿಗೆ ಬರೆದುಕೊಟ್ಟ ಭಾಷಣ ಖಂಡನಾ ನಿರ್ಣಯದಂತೆ ಇತ್ತು ಎಂದು ಪ್ರತಾಪ್ ಸಿಂಹ ಆಪಾದಿಸಿದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಸಚಿವ ಸ್ಥಾನ ಪಡೆಯಲು ವರಿಷ್ಠರ ಓಲೈಕೆಗಾಗಿ ದುರ್ನಡತೆ ತೋರಿ, ಗೂಂಡಾ ವರ್ತನೆ ಪ್ರದರ್ಶಿಸಿದ್ದಾರೆ. ಇವರು ಶಾಸಕರಾ ಅಥವಾ ಪುಂಡ ಪೋಕರಿಗಳಾ ಎಂಬ ಅನುಮಾನ ಜನರನ್ನು ಕಾಡಿದೆ. ಇಡೀ ದೇಶದಲ್ಲೇ ಕರ್ನಾಟಕ ತಲೆ ತಗ್ಗಿಸುವ ಪರಿಸ್ಥಿತಿಯನ್ನು ಇಂದು ಕಾಂಗ್ರೆಸ್ ಶಾಸಕರು ತಂದಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಜಂಟಿ ಅಧಿವೇಶನದಲ್ಲಿ ಗಲಾಟೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿತಾವಣೆ ಇದೆ. ಸಂಖ್ಯಾಬಲದ ಶಾಸಕರಿದ್ದಾರೆ ಎಂದು ರಾಜ್ಯ ಸರ್ಕಾರ ಮದದಿಂದ ವರ್ತಿಸುತ್ತಿದೆ ಎಂದು ಕಿಡಿಕಾರಿದರು. ಜಿ ರಾಮ್ ಜಿ ಯೋಜನೆಗೆ ರಾಜ್ಯ ಸರ್ಕಾರ 2 ಸಾವಿರ ಕೋಟಿ ರೂಪಾಯಿ ನೀಡಬೇಕಿದೆ. ಆದರೆ ಈ ಹಣ ಕೊಡಲು ಸಾಧ್ಯವಾಗುತ್ತಿಲ್ಲವೆಂದು ಹೀಗೆ ಗಲಾಟೆ ಮಾಡಿದ್ದಾರೆ.

ಸಿದ್ದರಾಮಯ್ಯ ಯಾವತ್ತು ಅಧಿಕಾರದಿಂದ ತೊಲಗಿ ಹೋಗುತ್ತಾರೊ, ಕಾಂಗ್ರೆಸ್ ಸರ್ಕಾರ ಯಾವಾಗ ಕೊನೆ ಆಗುತ್ತದೆಯೋ ಎಂದು ಕರ್ನಾಟಕದ ಜನರು ಕಾಯುತ್ತಿದ್ದಾರೆ ಎಂದು ಆರೋಪಿಸಿದರು.

ಬಿಗ್ ಬಾಸ್–12ರ ವಿಜೇತ ಗಿಲ್ಲಿಗೆ ಸಿಎಂ ಅಭಿನಂದನೆ!




ಬೆಂಗಳೂರು: ಬಿಗ್ ಬಾಸ್ ಮುಗಿದ ಮೇಲೂ ಗಿಲ್ಲಿನಟನ ಕ್ರೇಜ್ ಕಮ್ಮಿಯಾಗಿಲ್ಲ. ಹೋದ ಕಡೆ, ಬಂದ ಕಡೆ ಅಭಿಮಾನಿಗಳು ಮುತ್ತಿಕೊಳ್ಳುತ್ತಿದ್ದು, ಗೌರವ, ಸನ್ಮಾನಗಳಲ್ಲಿ ಮಿಂದೆದ್ದಿದ್ದಾರೆ. ಈ ನಡುವೆ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದರು. ಕಾವೇರಿ ನಿವಾಸದಲ್ಲಿ ತಮ್ಮನ್ನು ಭೇಟಿ ಯಾದ ಗಿಲ್ಲಿ ನಟನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿ ದ್ದಾರೆ. ಗಿಲ್ಲಿ ನಟನ ಭುಜದ ಮೇಲೆ ಕೈ ಹಾಕಿ ಪ್ರೋತ್ಸಾಹಿಸಿದ್ದಾರೆ.

ಗಿಲ್ಲಿ ನಟ ತಮ್ಮ ಎಂದಿನ ಶೈಲಿಯಲ್ಲೇ ಸರಳವಾಗಿ ಶರ್ಟ್ ಧರಿಸಿ ಸಿಎಂ ಸಿದ್ದರಾಮಯ್ಯರನ್ನು ಭೇಟಿಯಾಗಿದ್ದಾರೆ. ಈ ವೇಳೆ ನಗರಾಭಿವೃದ್ಧಿ ಖಾತೆ ಸಚಿವ ಭೈರತಿ ಸುರೇಶ್, ಸಿಎಂ ಮಾಧ್ಯಮ ಸಲಹೆಗಾರ ಪ್ರಭಾಕರ್ ಕೂಡ ಉಪಸ್ಥಿತರಿದ್ದರು.

ಈ ಕುರಿತ ಫೋಟೋವೊಂದನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಮುಖ್ಯಮಂತ್ರಿ, 12ನೇ ಆವೃತ್ತಿಯ ಬಿಗ್ ಬಾಸ್ ವಿಜೇತ ಗಿಲ್ಲಿ ನಟರಾಜ್ ಅವರನ್ನು ಅಭಿನಂದಿಸಿ, ಮುಂದಿನ ಜೀವನ ಇನ್ನಷ್ಟು ಯಶಸ್ಸು, ಸಂತಸದಿಂದ ಕೂಡಿ ರಲಿ ಎಂದು ಶುಭ ಹಾರೈಸಿದೆ ಎಂದು ಬರೆದುಕೊಂಡಿದ್ದಾರೆ.


ತಿಬ್ಬಾದೇವಿ ಪಿ.ಸ್ವಾಮಿ ನಿಧನ



ಮೈಸೂರು: ನಗರದ ಎನ್.ಆರ್.ಮೊಹಲ್ಲಾ ನಿವಾಸಿ ತಿಬ್ಬಾದೇವಿ ಪಿ.ಸ್ವಾಮಿ(72) ಹೃದಯಾಘಾತದಿಂದ ನಿಧನರಾದರು.

ದಿವಂಗತರು ಇಬ್ಬರು ಪುತ್ರಿಯರು, ಪುತ್ರ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಎನ್.ಆರ್.ಮೊಹಲ್ಲಾದ ರುದ್ರಭೂಮಿಯಲ್ಲಿ ಶುಕ್ರವಾರ (ಜ.23) ಮಧ್ಯಾಹ್ನ ನಡೆಯಲಿದೆ.

ದೇವನಿರ ಹರಿಣಿ



ಮೈಸೂರು, ಜ.22– ನಗರದ ಗೋಕುಲಂ, 3ನೇ ಹಂತ, 7ನೇ ಮುಖ್ಯರಸ್ತೆ ನಿವಾಸಿ ದೇವನಿರ ಹರಿಣಿ(64) ಅವರು ಗುರುವಾರ ರಾತ್ರಿ ನಿಧನರಾದರು.

ಇವರು ಪತಿ ನಂದಕುಮಾರ್, ಪುತ್ರ ನಿಖಿಲ್ ಉತ್ತಪ್ಪ, ಪುತ್ರಿ ನಿವ್ಯಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹರಿಣಿ ಅವರ ಇಚ್ಛೆಯಂತೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಶುಕ್ರವಾರ ಮಧ್ಯಾಹ್ನ 1.30ರ ನಂತರ ದೇಹವನ್ನು ಹಸ್ತಾಂತರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ದ್ವಿತೀಯ ವಾರ್ಷಿಕೋತ್ಸವ; ಮೈಸೂರಲ್ಲಿ ಸಂಭ್ರಮಾಚರಣೆ



ಮೈಸೂರಿನ ಬಸವೇಶ್ವರ ರಸ್ತೆಯ ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಾಲಯದ ಸಮಿತಿ ವತಿಯಿಂದ ಅಯೋಧ್ಯೆ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು.



ಶ್ರೀರಾಮ ಗೆಳೆಯರ ಬಳಗದಿಂದ ಶ್ರೀರಾಮರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಮೈಸೂರು, ಜ.22(ಎಂಟಿವೈ)– ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಮೈಸೂರಿನ ವಿವಿಧೆಡೆ ರಾಮ ಭಕ್ತರು ಸಿಹಿ, ಪ್ರಸಾದ ವಿತರಿಸಿ ಸಂಭ್ರಮಾಚರಿಸಿದರು.

ಬಸವೇಶ್ವರ ರಸ್ತೆ: ಮೈಸೂರಿನ ಬಸವೇಶ್ವರ ರಸ್ತೆಯ ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಾಲಯ ಸಮಿತಿ ವತಿಯಿಂದ ಅಯೋಧ್ಯೆ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖಂಡರಾದ ರವಿಶಂಕರ್, ಮಂಜುನಾಥ್, ರಾಮಣ್ಣ, ರಾಜಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ಚಾಮುಂಡಿಪುರಂ: ಚಾಮುಂಡಿಪುರಂನಲ್ಲಿ ಶ್ರೀರಾಮ ಗೆಳೆಯರ ಬಳಗದಿಂದ ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಿ, ಪೂಜೆ ಸಲ್ಲಿಸಿದ ಬಳಿಕ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕೆ.ಆರ್. ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜೇ ಅರಸ್, ಬಿಜೆಪಿ ಮುಖಂಡ ಜೋಗಿ ಮಂಜು, ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಮುಖಂಡರಾದ ಬಸವರಾಜ, ಕಿರಣ್, ಮೋಹನ್, ಮಲ್ಲೇಶ್, ಕುಶಾಲ್, ಮಹೇಶ್ ಅರಸ್, ಭಾನು, ಶೇಖರ್, ಶಿವಪ್ರಸಾದ್, ರಾಘವೇಂದ್ರ, ರಘುರಾಮ್ ಅರಸ್, ಪ್ರಭುಶಂಕರ್, ಅಜ್ಗರ್, ಸುರೇಶ್, ಕುಮಾರ್, ರಾಜೇಂದ್ರ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



ಅಪೂರ್ವ ಸ್ನೇಹ ಬಳಗದ ವತಿಯಿಂದ ಮೈಸೂರಿನ ಚಾಮುಂಡಿಪುರಂನಲ್ಲಿ ಸಿಹಿ ವಿತರಿಸಿ, ಸಂಭ್ರಮಿಸಲಾಯಿತು.

ಸಿಹಿ ವಿತರಣೆ: ಅಪೂರ್ವ ಸ್ನೇಹ ಬಳಗದ ವತಿಯಿಂದ ಚಾಮುಂಡಿಪುರಂನ ಅಪೂರ್ವ ಹೋಟೆಲ್ ಬಳಿ ಶ್ರೀರಾಮಚಂದ್ರನ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವದ ಅಂಗವಾಗಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮೇಲುಕೋಟೆಯ ವೆಂಗೀಪುರದ ಇಳೈ ಆಳ್ವಾರ್ ಸ್ವಾಮೀಜಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಮುಖಂಡರಾದ ಜಗದೀಶ್, ಕೇಬಲ್ ಮಹೇಶ್, ಅಪೂರ್ವ ಸುರೇಶ್, ನಂದೀಶ್ ನಾಯಕ, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಟಿ.ಎಸ್.ಅರುಣ್, ದೂರ ರಾಜಣ್ಣ, ಆನಂದ್, ಶಿವಲಿಂಗಸ್ವಾಮಿ, ಡಿ.ಕೆ.ನಾಗಭೂಷಣ್, ಜತ್ತಿ ಪ್ರಸಾದ್, ಸುಚೆಂದ್ರ, ಚಕ್ರಪಾಣಿ, ಆದರ್ಶ್, ರಂಗನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಅಪಘಾತಗಳಲ್ಲಿ ಸಾವನ್ನಪ್ಪಿದವರಿಗೆ
ಮೇಣದಬತ್ತಿ ಹಿಡಿದು ಮೌನ ಮೆರವಣಿಗೆ ಮೂಲಕ ಸಂತಾಪ



ಮೈಸೂರಿನಲ್ಲಿ ನಗರ ಸಂಚಾರ ಪೊಲೀಸ್ ವತಿಯಿಂದ ಮೇಣದಬತ್ತಿ ಹಿಡಿದು ಮೌನ ಮೆರವಣಿಗೆ ನಡೆಸುವ ಮೂಲಕ ಹೆಲ್ಮೆಟ್ ಧರಿಸದೇ ಬೈಕ್ ಅಪಘಾತಗಳಲ್ಲಿ ಸಾವನ್ನಪ್ಪಿದವರಿಗೆ ಸಂತಾಪ ಸಲ್ಲಿಸಲಾಯಿತು.

ಜೊತೆಗೆ ದ್ವಿಚಕ್ರ ವಾಹನ ಚಾಲನೆ ವೇಳೆ ಹೆಲ್ಮೆಟ್ ಧರಿಸಿರೆಂಬ ಸಂದೇಶ ರವಾನೆ

ಮೈಸೂರು,ಜ.22(ಪಿಎಂ)– ಮೈಸೂರು ನಗರ ಸಂಚಾರ ಪೊಲೀಸ್ ವತಿಯಿಂದ ಮೇಣದಬತ್ತಿ ಹಿಡಿದು ಮೌನ ಮೆರವಣಿಗೆ ನಡೆಸುವ ಮೂಲಕ 2025ರಲ್ಲಿ ಹೆಲ್ಮೆಟ್ ಧರಿಸದೇ ಬೈಕ್ ಅಪಘಾತಗಳಲ್ಲಿ ಸಾವನ್ನಪ್ಪಿದವರಿಗೆ ಬುಧವಾರ ಸಂಜೆ ಸಂತಾಪ ಸಲ್ಲಿಸಲಾಯಿತು.

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರ ನೇತೃತ್ವದಲ್ಲಿ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೌನ ಮೆರವಣಿಗೆಯು ಆರಂಭವಾಯಿತು.

ನಗರದ ವಿವಿಧ ಸಂಚಾರ ಠಾಣೆಯ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಮೌನ ಮೆರವಣಿಗೆಯಲ್ಲಿ ಕಾನೂನು ಸುವ್ಯವಸ್ಥೆ ಠಾಣೆಗಳ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸಹ ಪಾಲ್ಗೊಂಡಿದ್ದರು. 2025ರಲ್ಲಿ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಅಪಘಾತಗಳಲ್ಲಿ ಸಾವನ್ನಪ್ಪಿದವರ ಕುಟುಂಬಸ್ಥರು ಸಹ ಭಾಗವಹಿಸಿ, ದ್ವಿಚಕ್ರ ವಾಹನ ಸವಾರಿ ವೇಳೆ ಹೆಲ್ಮೆಟ್ ಧರಿಸುವುದರಿಂದ ಆಗುವ ಮಹತ್ತರ ಪ್ರಯೋಜನದ ಬಗ್ಗೆ ಸಂದೇಶ ಸಾರಿದರು.

'ಹೆಲ್ಮೆಟ್ ಧರಿಸುವುದು ಮುಖ್ಯವಾಗಿ ದಂಡ ತಪ್ಪಿಸಲು ಅಲ್ಲ, ನಮ್ಮ ಪ್ರಾಣ ಉಳಿಸಿಕೊಳ್ಳಲು' ಎಂಬಿತ್ಯಾದಿ ಸಂದೇಶ ಒಳಗೊಂಡ ಫಲಕಗಳನ್ನು ಸಹ ಹಿಡಿದು ಹೆಜ್ಜೆ ಹಾಕುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಚಾಮರಾಜ ಒಡೆಯರ್ ವೃತ್ತ, ಅಶೋಕ ರಸ್ತೆ, ದೊಡ್ಡ ಗಡಿಯಾರ ವೃತ್ತದ ಮೂಲಕ ಗಾಂಧಿಚೌಕ ಸಮೀಪಕ್ಕೆ ತಲುಪಿದ ಮೌನ ಮೆರವಣಿಗೆಯು, ಮತ್ತೆ ಹಿಂತಿರುಗಿ ಪುರಭವನ ಆವರಣ ತಲುಪಿತು.

ಬಳಿಕ ಇಲ್ಲಿ ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಅಪಘಾತಗಳಲ್ಲಿ ಸಾವನ್ನಪ್ಪಿದವರ ಭಾವಚಿತ್ರಗಳಿರುವ ಫೋಟೋ ಮುಂದೆ ಮೇಣದಬತ್ತಿ ಇಟ್ಟು ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಡಿಸಿಪಿ ಸುಂದರ್‌ರಾಜ್, ಸಂಚಾರ ವಿಭಾಗದ ಎಸಿಪಿ ಶಿವಶಂಕರ್ ಸೇರಿದಂತೆ ಇನ್ನಿತರ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಮೌನ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಜ.22– ಒಂಟಿಕೊಪ್ಪಲು ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ಜ.23ರಂದು ಕಟ್ಟೆ ಹೊಸೂರು, ವಿ.ವಿ.ಲೇಔಟ್, ಎಂ.ಜಿಕೊಪ್ಪಲು, ಅಭಿಷೇಕ್ ವೃತ್ತ ಅಂಬರೀಷ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ವಿ.ವಿ ಮೊಹಲ್ಲಾ 12 ನೇ, 13 ನೇ, 15ನೇ ಮತ್ತು 16 ನೇ ಕ್ರಾಸ್, ಆದಿಪಂಪಾ ರಸ್ತೆ ಹಾಗೂ ಸುತ್ತಮುತ್ತ.

ಜ.24ರಂದು ಲಯನ್ಸ್ ಸ್ಕೂಲ್, ಕಾಂಟೂರು ರಸ್ತೆ, ಗೋಕುಲಂ ಚಾಟ್ಸ್, ಗೋಕುಲಂ 3ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜ.30, ಮಾಂಸ ಮಾರಾಟ ನಿಷೇಧ

ಮೈಸೂರು,ಜ.22– ಜ.30ರಂದು ಸರ್ವೋದಯ ದಿನ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ನಗರದಲ್ಲಿ ಮುಚ್ಚಲಾಗುತ್ತದೆ. ಈ ದಿನದಂದು (ಕುರಿ–ಮೇಕೆ, ಕೋಳಿ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವೀರನಗೆರೆ ಮುಖ್ಯದ್ವಾರದಲ್ಲಿ ಅಯೋಧ್ಯೆ ಬಾಲರಾಮನ ಪ್ರತಿಷ್ಠಾಪನೆ ವಾರ್ಷಿಕೋತ್ಸವ; ಲಕ್ಷ ದೀಪೋತ್ಸವ

ಮೈಸೂರು, ಜ.22(ವಿವಿಹೆಚ್)– ಶ್ರೀರಾಮ ಜ್ಯೋತಿ ಸೇವಾ ಸಮಿತಿ ವತಿಯಿಂದ ಮೈಸೂರಿನ ವೀರನಗೆರೆ ಮುಖ್ಯದ್ವಾರದಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಮತ್ತು ಲಕ್ಷ ದೀಪೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಮೈಸೂರಿನ ನಾನಾ ಭಾಗಗಳಿಂದ 2 ಸಾವಿರಕ್ಕೂ ಅಧಿಕ ಮಂದಿ ದೀಪೋತ್ಸವದಲ್ಲಿ ಭಾಗವಹಿಸಿ, ತಮ್ಮ ಭಕ್ತಿ ಪರಾಕಾಷ್ಠೆ ಮೆರೆದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇತಿಹಾಸಕಾರ ಡಾ. ಸೆಲ್ವಪಿಳ್ಳೈ ಅಯ್ಯಂಗಾರ್ ಮಾತನಾಡಿ, ಈ ಜಾಗದಲ್ಲಿ ಸುಮಾರು 600 ವರ್ಷಗಳ ಇತಿಹಾಸ ಇರುವ ಪ್ರಾಚೀನವಾದ ವೀರಾಂಜನೇಯ ಸ್ವಾಮಿ ವಿಗ್ರಹ ಇದೆ. ದಸರಾ ಅಂಬಾರಿ ಮೆರವಣಿಗೆ ಅರಮನೆಯಿಂದ ಹೊರಟು ಈ ಮಾರ್ಗದಲ್ಲಿ ಬರುತ್ತಿತ್ತು. ಈ ಗಣಪತಿಯ ಮುಂಭಾಗದಲ್ಲಿ ಅಂಬಾರಿ ನಿಲ್ಲುತ್ತಿತ್ತು ಎಂದು ತಿಳಿಸಿದರು.

ವೀರನಗೆರೆಯವರು ಅರಸರ ಜೊತೆ ಜೊತೆಯಲ್ಲಿ ಯುದ್ಧ ಮಾಡುತ್ತಿದ್ದವರು. ಪಿರಿಯಾಪಟ್ಟಣ ಕಾಳಗ ಇದಕ್ಕೆ ಒಂದು ಉದಾಹರಣೆ ಆಗಿದೆ. ಇದರೊಂದಿಗೆ ಅಂಬಾರಿ ಅಲಂಕಾರ ಮಾಡುವವರೂ ವೀರನಗೆರೆಯವರೇ ಆಗಿದ್ದು, ಹಾಗಾಗಿ ಇದೊಂದು ಪವಿತ್ರ ಸ್ಥಳವಾಗಿದೆ ಎಂದು ವಿವರಿಸಿದರು. ಅರ್ಚಕ ಪ್ರಹ್ಲಾದ್ ರಾವ್, ಪನೀತ್, ಮಾರ್ಕೆಟ್ ಮಂಜುನಾಥ್, ಮಹದೇವ್, ರವಿಕುಮಾರ್, ವೆಂಕಟೇಶ್, ವೀರನಗೆರೆ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.



ವಿದ್ಯುತ್ ದೀಪಗಳಿಂದ ಅಲಂಕಾರಗೊಂಡಿರುವ ವೀರನಗೆರೆ ವೀರಗಣಪತಿ ದೇವಸ್ಥಾನ

ಅಯೋಧ್ಯೆ ಬಾಲರಾಮನ ಪ್ರತಿಷ್ಠಾಪನೆ 2ನೇ ವಾರ್ಷಿಕೋತ್ಸವ; ರಂಗೋಲಿ ಸ್ಪರ್ಧೆ

ಮೈಸೂರು, ಜ.22(ವಿವಿಹೆಚ್)– ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಯಾಗಿ 2 ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರಿನ ಹನುಮಂತೋತ್ಸವ ಸಮಿತಿ ವತಿಯಿಂದ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಅಯೋಧ್ಯೆಯಲ್ಲಿ ಬಾಲ ರಾಮನ ಪ್ರತಿಷ್ಠಾಪನೆಯ 2ನೇ ವಾರ್ಷಿಕೋತ್ಸವ, ರಂಗೋಲಿ ಸ್ಪರ್ಧೆ ಮತ್ತು ದೀಪೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜೈ ಶ್ರೀರಾಮ, ಜೈ ಹನುಮಾನ್, ಜಾನಕಿ ರಾಮ ಘೋಷಣೆ ಕೂಗುತ್ತ ಶ್ರೀರಾಮ, ಸೀತಾ ಮಾತೆ ಮತ್ತು ಲಕ್ಷ್ಮಣರ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನೆರೆದಿದ್ದವರೆಲ್ಲಾ ರಾಮಜಪ ಮಾಡುತ್ತಾ, ರಾಮಲಲ್ಲಾ ಮಹಿಮೆಯನ್ನು ಸಾರುವ ಸಾಲುಗಳನ್ನು ಪಠಿಸುತ್ತ ರಾಮನಾಮದಲ್ಲಿ ಮಿಂದೆದ್ದರು. ಅರ್ಜುನ್ ಗುರೂಜಿ ಪ್ರಭು ಶ್ರೀರಾಮರಿಗೆ ವಿಶೇಷ ಪೂಜೆ ಸಲ್ಲಿಸಿ, ಸಕಲೈಶ್ವರ್ಯಕ್ಕಾಗಿ ಪ್ರಾರ್ಥಿಸಿದರು.

ಇದಕ್ಕೂ ಮೊದಲು 2ನೇ ವಾರ್ಷಿ ಕೋತ್ಸವ ಪ್ರಯುಕ್ತ ಆಯೋಜಿಸಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ 39 ಮಂದಿ ಭಾಗವಹಿಸಿದರು. ಶ್ರೀರಾಮರ ಅಯೋಧ್ಯೆ, ಧರ್ಮ ಧ್ವಜ ಸೇರಿದಂತೆ ಸಾಂಸ್ಕೃತಿಕ ಮೆರಗು ನೀಡುವ ರಂಗೋಲಿಗಳು ಕಣ್ಮನ ಸೆಳೆದವು.

ಈ ರಂಗೋಲಿ ಸ್ಪರ್ಧೆಯಲ್ಲಿ ಹೇಮಾವತಿ ರಾಜು ಎಂಬುವವರು ಪ್ರಥಮ ಸ್ಥಾನ (2 ಸಾವಿರ ನಗದು) ಪಡೆದುಕೊಂಡರು. ದ್ವಿತೀಯ ಸ್ಥಾನವನ್ನು (1 ಸಾವಿರ ನಗದು) ಸುಗಂಧರಾಜು ಮತ್ತು ಸೀಮಾ ಅವರು ಪಡೆದರೆ, ಮೂರನೇ ಸ್ಥಾನವನ್ನು (500 ರೂ. ನಗದು) ಜಿ.ಲಕ್ಷ್ಮೀ, ವಿ.ಲೀಲಾವತಿ ಪಡೆದುಕೊಂಡರು.

ವಿಶೇಷಚೇತನ ಮಹಿಳೆ ಪುಟ್ಟಮಣಿ ಅವರು ರಂಗೋಲಿಯಲ್ಲಿ ಶ್ರೀರಾಮ ಚಿತ್ರಬಿಡಿಸಿ ಎಲ್ಲರ ಮೆಚ್ಚುಗೆಗಳಿಸಿದರು. ಕೊನೆಯಲ್ಲಿ ನೂರಾರು ಜನರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ವಕೀಲ ವೆಂಕಟೇಶ್, ಹೆಚ್.ವಿ. ರಾಜೀವ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಪಿ.ಪ್ರಕಾಶ್, ಸಮಿತಿ ಸಂಚಾಲಕರಾದ ಜೀವನ್ ಕುಮಾರ್, ಸಂಜಯ್, ಗೋಕುಲ್ ಗೋವರ್ಧನ್, ಚಂದ್ರು ನಂಜನಗೂಡು, ಪ್ರಜ್ವಲ್, ರಜತ್, ಹೇಮಂತ್, ಮಲಂ ಸಿಂಗ್ ಉಪಸ್ಥಿತರಿದ್ದರು.



ರಂಗೋಲಿ ಸ್ಪರ್ಧೆ ವಿಜೇತರಿಗೆ ವಕೀಲ ವೆಂಕಟೇಶ್ ಬಹುಮಾನ ವಿತರಿಸಿದರು.

ಪತ್ನಿ ಹತ್ಯೆಗೆ ಯತ್ನಿಸಿದ್ದವನಿಗೆ ಐದು ವರ್ಷ ಜೈಲು

ಮೈಸೂರು,ಜ.22– ಕುತ್ತಿಗೆಗೆ ದುಪ್ಪಟ ಬಿಗಿದು ಪತ್ನಿಯ ಹತ್ಯೆಗೆ ಯತ್ನಿಸಿದ್ದ ವ್ಯಕ್ತಿಗೆ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಐದು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ನಯಾಜ್ ಅಹಮದ್‌ಗೆ ಶಿಕ್ಷೆ ವಿಧಿಸಲಾಗಿದ್ದು, ಈತ ತನ್ನ ಪತ್ನಿ ಶ್ರೀಮತಿ ಸೀಮಾ ಭಾನು 2019ರ ಸೆ.2ರಂದು ಹತ್ಯೆ ಮಾಡಲು ಯತ್ನಿಸಿದ್ದ. ಮದುವೆಯಾಗಿ ಕೆಲ ದಿನಗಳ ಕಾಲ ಅನ್ಯೋನ್ಯವಾಗಿದ್ದ ನಯಾಜ್, ನಂತರ ನಿತ್ಯ ಜಗಳವಾಡಲು ಆರಂಭಿಸಿದ್ದ. ನೆರೆಹೊರೆಯವರೊಂದಿಗೆ ಮಾತನಾಡುವುದಕ್ಕೂ ಬಿಡದೆ, ಮನೆ ನಿರ್ವಹಣೆಯನ್ನೂ ಮಾಡದೆ ಅನುಮಾನದಿಂದ ಪತ್ನಿಗೆ ಚಿತ್ರಹಿಂಸೆ ಕೊಡುತ್ತಿದ್ದ. 2019ರ ಸೆ.2ರಂದು ಜಗಳ ತೆಗೆದು ನಾನು ಮತ್ತೊಂದು ಮದುವೆಯಾಗಬೇಕು, ವಿಚ್ಛೇದನ ಕೊಡು ಎಂದು ಕುತ್ತಿಗೆಗೆ ದುಪ್ಪಟ ಬಿಗಿದು ಕೊಲೆ ಮಾಡಲು ಯತ್ನಿಸಿದ್ದ.

ಈ ಸಂಬಂಧ ಪೊಲೀಸರು ನಯಾಜ್ ಸೇರಿ ಕುಟುಂಬದ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ದೋಷಾ ರೋಪ ಪಟ್ಟಿ ಸಲ್ಲಿಸಿದ್ದರು.ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಎನ್. ರೂಪ ಅವರು ಮೊದಲ ಆರೋಪಿ ನಯಾಜ್‌ಗೆ 5 ವರ್ಷ ಜೈಲು ಹಾಗೂ 50 ಸಾವಿರ ದಂಡ ವಿಧಿಸಿ, ಉಳಿದ ಆರೋಪಿಗಳ ಬಿಡುಗಡೆಗೊಳಿಸಲಾಗಿದೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ವಾದ ಮಂಡಿಸಿದ್ದರು.

ಮೈಸೂರು ಮಿತ್ರ ಶುಕ್ರವಾರ 23 ಜನವರಿ 2026

ಭೂ ಕಬಳಿಕೆದಾರರಿಗೆ ಸಚಿವ ಸಿಆರ್‌ಎಸ್ ರಕ್ಷಣೆ

ಮಾಜಿ ಶಾಸಕ ಕೆ.ಸುರೇಶ್‌ಗೌಡ ಗಂಭೀರ ಆರೋಪ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿದರು.

ಮಂಡ್ಯ ಜ.22– ನಾಗಮಂಗಲ ತಾಲೂಕಿನ ಸರ್ಕಾರಿ ಹಾಗೂ ಸಾರ್ವಜನಿಕರ ಜಮೀನು ಕಬಳಿಕೆದಾರರನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರೇ ರಕ್ಷಿಸುತ್ತಿದ್ದಾರೆ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಆರೋಪಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮೀನು ಕಬಳಿಕೆ, ಭ್ರಷ್ಟಾಚಾರ ಸಂಬಂಧ ಆಡಳಿತ ಪಕ್ಷದವರೇ ಲೋಕಾಯುಕ್ತರಿಗೆ ದೂರು ನೀಡಿದ್ದು, ತಪ್ಪು ಮಾಡಿದ ಅಧಿಕಾರಿಗಳು ಬಂಧನಕ್ಕೊಳಗಾಗಿದ್ದು, ಪ್ರಮುಖರು ಆರಾಮಾಗಿ ತಿರುಗಾಡುತ್ತಿದ್ದಾರೆ. ಈ ರೀತಿ ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿರುವುದು ಮೊದಲೇನಲ್ಲ. 90ರ ದಶಕದಿಂದಲೂ ಇದು ನಡೆಯುತ್ತಿದೆ. ಜಿಲ್ಲೆಯ ಇತರೇ ತಾಲೂಕುಗಳಿಗೆ ಹೋಲಿಸಿದರೆ ನಾಗಮಂಗಲದಲ್ಲಿ 4500 ಹೆಕ್ಟೇರ್ ಭೂಮಿ ಕಬಳಿಸಲಾಗಿದೆ. ಸರ್ಕಾರ ಈ ಸಂಬಂಧ ಸಂಪೂರ್ಣ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಸಂಬಂಧ ನ್ಯಾಯ ದೊರಕಿಸುವ ಇಚ್ಛೆ ಇದ್ದರೆ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಏಕೆಂದರೆ ಪೊಲೀಸರಿಗೆ ಕಂದಾಯ ದಾಖಲೆಗಳ ಅರಿವಿರುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಡಿವೈಎಸ್‌ಪಿಯೋರ್ವರಿಗೆ ತನಿಖೆ ನಡೆಸಲು ಸೂಚಿಸಿದ್ದಾರೆ ಸಚಿವರ ಬೇನಾಮಿಗಳು, ಹಿಂಬಾಲಕರು, ಸಂಬಂಧಿಗಳ ರಕ್ಷಣೆಗೆ ಪೊಲೀಸರಿಂದ ತನಿಖೆ ಮಾಡಿಸಲು ಮುಂದಾಗಿದ್ದಾರೆ ಎಂದು ದೂರಿದರು.

2023 ರಿಂದ ಒಬ್ಬ ವ್ಯಕ್ತಿ 15 ರಿಂದ 20 ಎಕರೆ ಜಮೀನಿನಲ್ಲಿ ತೋಟಗಾರಿಕೆ ಮಾಡುತ್ತಿದ್ದಾರೆ. ಅಲ್ಲದೇ ದಾಖಲಾತಿ ಮಾಡಿಸಿಕೊಳ್ಳುತ್ತಿದ್ದಾರೆ. ಎಷ್ಟು ಮೂಲ ದಾಖಲಾತಿಗಳನ್ನು ತಿದ್ದಲಾಗಿದೆ ಎಂಬುದನ್ನು ತನಿಖೆ ಮಾಡಬೇಕಾಗಿದೆ. ಸರ್ಕಾರ ಈ ಬಗ್ಗೆ ಸತ್ಯಾಂಶ ಹೊರ ತರಬೇಕಾದ ಕೆಲಸ ಮಾಡಬೇಕಿದೆ ಎಂದು ಆಗ್ರಹಿಸಿದರು.

ಭೂ ಕಬಳಿಕೆಗೆ ಸಚಿವ ಚಲುವರಾಯಸ್ವಾಮಿ ಅವರೇ ನೇರ ಹೊಣೆಗಾರರು. ಅವರ ಆದೇಶ ಇಲ್ಲದೇ ನಾಗಮಂಗಲ ತಾಲೂಕಿನಲ್ಲಿ ಒಂದು ಕಟ್ಟಿಯೂ ಅಲ್ಲಾಡುತ್ತಿಲ್ಲ. ಅವರಿಗೆ ಗೊತ್ತಿಲ್ಲದೇ ಯಾವ ಕೆಲಸವೂ ಆಗುವುದಿಲ್ಲ. ಕೇವಲ ದಿಕ್ಕು ತಪ್ಪಿಸುವಂತಹ ಕೆಲಸ ಮಾಡಿ ಬೇರೆಯವರ ಮೇಲೆ ಆಪಾದನೆ ಹೊರಿಸುತ್ತಿದ್ದಾರೆ ಎಂದು ಆರೋಪಿಸಿದರು.

ನಾವು ಅರ್ಜಿ, ಅನುಭವ ಮತ್ತು ಅರ್ಹತೆ ಆಧಾರದಲ್ಲಿ ಭೂಮಿ ಹಂಚಿದ್ದೇವೆ. ಅಕ್ರಮ ಯಾರ ಅವಧಿಯಲ್ಲಿ ಆಗಿದ್ದರೂ ತನಿಖೆ ಮಾಡಲಿ ಎದುರಿಸಲು ನಾವು ಸಿದ್ದರಿದ್ದೇವೆ. ಎರಡೂವರೆ ವರ್ಷದಿಂದ ನ್ಯಾಯಬದ್ಧವಾಗಿದ್ದ ದಾಖಲೆ ಬದಲಿಸಲಾಗಿದೆ. ಅವುಗಳನ್ನು ಅಕ್ರಮವಾಗಿ ಹಣಕ್ಕಾಗಿ ಅನ್ಯರಿಗೆ ಖಾತೆ ಮಾಡಿಕೊಡಲಾಗುತ್ತಿದೆ ಎಂದು ದೂರಿದರು.

ಭೂ ಅಕ್ರಮ ಕಬಳಿಕೆ ವಿಚಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ ಇದರ ಸಂಪೂರ್ಣ ತನಿಖೆಯಾಗಬೇಕು. ರಾಜ್ಯ ಸರ್ಕಾರಕ್ಕೆ ತನಿಖೆ ಮಾಡಲು ಸಾಧ್ಯವಾಗದೇ ಇದ್ದರೆ ಸಿಬಿಐಗೆ ವಹಿಸಲಿ. ಇಲ್ಲವಾದಲ್ಲಿ ನ್ಯಾಯಾಧೀಶರಲ್ಲಿ ಯಾರಿಗೆ ಕಂದಾಯ ದಾಖಲೆಗಳ ಬಗ್ಗೆ ಅರಿವಿದೆಯೋ ಅವರಿಂದ ತನಿಖೆ ಮಾಡಿಸಲಿ ಎಂದು ಒತ್ತಾಯಿಸಿದರು.

ಮೇಕೆದಾಟು ಯೋಜನೆ ಸಂಬಂಧ ನಾಗಮಂಗಲದಲ್ಲಿ ಪರಿಹಾರವಾಗಿ ಜಮೀನು ನೀಡುವುದಾಗಿ ಹೇಳುತ್ತಿದ್ದಾರೆ. ಮೇಕೆದಾಟಿಗೂ ನಾಗಮಂಗಲಕ್ಕೂ ಏನು ಸಂಬಂಧ ತಾಲೂಕಿನಲ್ಲೇ ಅರ್ಜಿ ಹಾಕಿದವರಿಗೆ ಸ್ಥಳ ನೀಡಲು ಜಾಗವಿಲ್ಲ. ಇರುವಲ್ಲಿ ಹಲವರಿಗೆ ಮಂಜೂರಾಗಿದೆ. ಕೆಲವರು ಅನುಭವದಲ್ಲಿದ್ದಾರೆ. ಜಿಲ್ಲಾಧಿಕಾರಿಗಳು ಜಾಗವಿದೆ ಎಂದು ಹೇಳಿದ್ದಾರೆ ಇವರು ಐಎಎಸ್ ಮಾಡಿದ್ದಾರೋ ಅದೇನೋ ತಿಳಿಯದು ಎಂದು ಬೇಸರ ವ್ಯಕ್ತಪಡಿಸಿದರು.

ಸಚಿವರು ಜೆಡಿಎಸ್ ಅನ್ನು ಬೇರು ಮಟ್ಟದಿಂದ ಕಿತ್ತೊಗೆಯುವ ಹೇಳಿಕೆ ನೀಡಿದ್ದಾರೆ. ಅವರು ಬೆಳೆದು ಬಂದ ಪಕ್ಷದ ಬಗ್ಗೆ ಮಾತನಾಡುವುದು ಸರಿಯಲ್ಲ. ಪಕ್ಷದ ವ್ಯಕ್ತಿಗಳು, ಸರ್ಕಾರವನ್ನು ಆರೋಪ ಮಾಡಲಿ ಅವರಿಗೆ ಪಕ್ಷದ ಪರ ಮತ ನೀಡಿದ್ದು ಇಷ್ಟವಿಲ್ಲದಿದ್ದರೆ ಅವರು ಆಯ್ಕೆಯಾದಾಗ ರಾಜೀನಾಮೆ ನೀಡಬೇಕು. 2028ಕ್ಕೆ ಯಾವ ಪಕ್ಷ ಉಳಿಯುತ್ತದೆ ಎಂಬುದನ್ನು ಜನ ತೋರಿಸುತ್ತಾರೆ ಎಂದು ಸವಾಲೆಸೆದರು.

ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಗ್ಗೆ ಮಾತಾಡಿದರೆ ದೊಡ್ಡ ನಾಯಕರಾಗುವ ಭಾವನೆಯಲ್ಲಿ ಸಚಿವರಿದ್ದಾರೆ. ಅವರ ಸ್ಥಾನ ಏನೆಂಬುದನ್ನು 2028ರ ಚುನಾವಣೆ ತಿಳಿಯಲಿದೆ ಎಂದರು.

ಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾ.ಅಧ್ಯಕ್ಷ ಚನ್ನಪ್ಪ, ಎಸ್ಸಿ ಎಸ್ಟಿ ತಾಲೂಕು ಅಧ್ಯಕ್ಷ ಸಂತೋಷ್, ಅಪ್ಪಾಜಿ, ಎಸ್.ಕೆ.ನಾಗೇಶ್, ರಾಜೇಗೌಡ, ಶ್ರೀನಿವಾಸ್ ಇದ್ದರು.

ಸರ್ಕಾರ ಮಾನವ–ಪ್ರಾಣಿಗಳ ಸಂಘರ್ಷ ತಡೆಗಟ್ಟಬೇಕು

ಚಿರತೆ ದಾಳಿಯಿಂದ ಮೃತಪಟ್ಟ ಯುವಕನ ಕುಟುಂಬಕ್ಕೆ ರವೀಂದ್ರ ಶ್ರೀಕಂಠಯ್ಯ ಸಾಂತ್ವನ



ಮೃತನ ಕುಟುಂಬಕ್ಕೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಸಾಂತ್ವನ ಹೇಳಿದರು.

ಮಂಡ್ಯ, ಜ.22– ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಯಿಂದ ಮೃತಪಟ್ಟ ಮಂಡ್ಯ ತಾಲೂಕು ಚೀರನಹಳ್ಳಿ ಗ್ರಾಮದ ಯುವಕ ಪ್ರವೀಣ್ ನಿವಾಸಕ್ಕೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಹೆಚ್ಚಾಗುತ್ತಿದೆ. ಸರ್ಕಾರ ಇದಕ್ಕೆ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜನಸಾಮಾನ್ಯರ ಜೀವ ಕಾಪಾಡಬೇಕಾಗಿದೆ ಎಂದರು.

ಅರಣ್ಯ ಇಲಾಖೆಗೆ ಹೆಚ್ಚಿನ ಬೋನುಗಳನ್ನು ಒದಗಿಸಬೇಕು. ಅಭಯಾರಣ್ಯ ನಿರ್ಮಿಸಿ ಅಲ್ಲಿಗೆ ವನ್ಯಜೀವಿಗಳನ್ನು ಬಿಡಬೇಕು ಎಂದು ನಾನು ಶಾಸಕನಾಗಿದ್ದ ವೇಳೆ ಸದನದಲ್ಲೇ ಚರ್ಚೆ ಮಾಡಿದ್ದೆ. ಆದರೆ ಈವರೆಗೂ ಅದು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳು ಜನಸಾಮಾನ್ಯರ ಪ್ರಾಣದ ಜೊತೆಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ಹೆಚ್ಚಿನ ಸಂಖ್ಯೆಯಲ್ಲಿ ಮಹದೇಶ್ವರಬೆಟ್ಟದ ಪಾದಯಾತ್ರೆಗೆ ಕೈಗೊಳ್ಳುತ್ತಾರೆ. ಅವರಿಗೆ ಸೂಕ್ತ ರಕ್ಷಣೆ ನೀಡಬೇಕು. ಸಂಬಂಧಿಸಿದ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದರು.

ಇನ್ನೂ ಬಾಳಿ ಬದುಕಬೇಕಾದ 30 ವರ್ಷ ವಯಸ್ಸಿನ ಯುವಕ ಪ್ರವೀಣ್ ಪ್ರಾಣ ಕಳೆದುಕೊಂಡಿದ್ದಾನೆ. ಮನೆಗೆ ಆಧಾರವಾಗಬೇಕಿದ್ದ ಮಗನನ್ನು ಕಳೆದುಕೊಂಡ ತಾಯಿ ರೋಧನವನ್ನು ನೋಡಲಾಗದು. ಕೆಲ ದಿನಗಳ ಹಿಂದೆ ಯಲಿಯೂರು ಬಳಿ ಓರ್ವ ಮಹಿಳೆ ಮೇಲೆ ಚಿರತೆ ದಾಳಿ ನಡೆಸಿತ್ತು. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂತಹ ಅನೇಕ ಘಟನೆಗಳು ನಡೆಯುತ್ತಲೇ ಇವೆ. ಅರಣ್ಯ ಸಚಿವರು ಒಂದು ದಿನವಾದರೂ ಜಿಲ್ಲೆಗೆ ಭೇಟಿ ನೀಡಿ ಏನೆಲ್ಲಾ ನಡೆಯುತ್ತಿದೆ ಎಂಬುದರ ಬಗ್ಗೆ ಅಧಿಕಾರಿಗಳ ಸಭೆ ನಡೆಸಿ ಇಂತಹ ಘಟನೆಗಳಿಗೆ ಕಡಿವಾಣ ಹಾಕುವ ಬಗ್ಗೆ ಚಿಂತನೆ ನಡೆಸುತ್ತಿಲ್ಲ ಎಂದು ಕಿಡಿಕಾರಿದರು.

ಘಟನೆ ನಡೆದು ಹೋಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದರೂ ಮೃತನ ನಿವಾಸಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಕನಿಷ್ಠ ಸಾಂತ್ವನ ಹೇಳುವ ಔದಾರ್ಯ ತೋರಲಿಲ್ಲ. ಬೋನುಗಳನ್ನು ಹೆಚ್ಚಿಗೆ ಕೊಟ್ಟು ಪ್ರಾಣಿಗಳನ್ನು ಸಾಕಲಿ. ನಾವು ಪ್ರಾಣಿಗಳ ವಿರೋಧಿಗಳಲ್ಲ. ಆದರೆ ಜನಸಾಮಾನ್ಯರೂ ಸಹ ಬದುಕಬೇಕು. ಅವರ ಜೀವವೂ ಅಮೂಲ್ಯವಾದದ್ದು. ರೈತಾಪಿ ಕುಟುಂಬದಲ್ಲಿ ಈ ರೀತಿಯ ಘಟನೆ ಆಗಿರುವುದು ಬಹಳ ನೋವಾಗುತ್ತದೆ ಎಂದರು.

ಇದೇ ವೇಳೆ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ, ಧನಸಹಾಯ ಮಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಡಿ.ಲಕ್ಷ್ಮಣ, ಮುಖಂಡರಾದ ಪ್ರಸನ್ನ, ರಮೇಶ, ಸುರೇಶ, ಬೀರೇಶ, ನಾಗೇಶ ಇತರರಿದ್ದರು.

ಬಲ್ಲೇನಹಳ್ಳಿ ಡೇರಿಯಲ್ಲಿ 'ಕೈ' ಬೆಂಬಲಿತರ ಮೇಲುಗೈ



ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ವಿಜಯೋತ್ಸವ ಆಚರಿಸಿದರು.

ಕೆ.ಆರ್.ಪೇಟೆ, ಜ.22– ತಾಲೂಕಿನ ಬಲ್ಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ 8 ಮಂದಿ ಕಾಂಗ್ರೆಸ್ ಬೆಂಬಲಿತರು ಗೆಲುವು ಸಾಧಿಸಿ ಮೇಲುಗೈ ಸಾಧಿಸಿದ್ದು, ಜೆಡಿಎಸ್ ಕೇವಲ ಒಂದು ಸ್ಥಾನ ಪಡೆದಿದೆ.

ಕಾಂಗ್ರೆಸ್ ಬೆಂಬಲಿತರಾದ ಬಿ.ಆರ್. ಮಹೇಶ್, ಬಿ.ಸಿ.ಅಶೋಕ್, ನಿಂಗೇಗೌಡ, ಉಮಾಶಂಕರ್, ಬಿ.ಎಲ್.ಶಿಲ್ಪ ಪುಟ್ಟರಾಜು, ಸಾವಿತ್ರಮ್ಮ ಕೃಷ್ಣೇಗೌಡ, ಬಿ.ಎಸ್. ಪುಟ್ಟರಾಜು ಹಾಗೂ ನರಸಿಂಹಶೆಟ್ಟಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಉಳಿದಂತೆ ಜೆಡಿಎಸ್ ಬೆಂಬಲಿತ ಬಿ.ಎಸ್. ಪ್ರಸನ್ನಕುಮಾರ್ ಜಯಗಳಿಸಿದ್ದಾರೆ.

ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಎಸ್. ರಾಮು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪುಟ್ಟಸ್ವಾಮಿಗೌಡರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಚುನಾವಣಾಧಿಕಾರಿ ವಾಸಿಂ ಪಾಷ ಕಾರ್ಯ ನಿರ್ವಹಿಸಿದರು.

ನೂತನ ನಿರ್ದೇಶಕರನ್ನು ಪಟೇಲ್ ಸ್ವಾಮಿಗೌಡ, ಪಟೇಲ್ ಮಹದೇವ್, ಯೋಗಣ್ಣ, ಡೇರಿ ಕುಮಾರ್, ಶೀಳನೆರೆ ರಾಮೇಗೌಡ, ಅಣ್ಣೇಚಾಕನಹಳ್ಳಿ ನಾಗರಾಜು, ಹೊನ್ನೇನಹಳ್ಳಿ ಕೃಷ್ಣೇಗೌಡ, ಕಾಶಿಮುರುಕನಹಳ್ಳಿ ಪ್ರೀತಮ್, ಬಲ್ಲೇನಹಳ್ಳಿ ಪೆಪ್ಸಿ ದಯಾನಂದ್, ಬಿ.ಎನ್. ಮಹೇಶ್, ಜಯರಾಂ, ನಂಜಪ್ಪನ ಕುಮಾರ್, ಸೇರಿದಂತೆ ಗ್ರಾಮದ ಹಿರಿಯ ಮುಖಂಡರು, ಯುವಕರು ಸೇರಿದಂತೆ ಇತರರು ಹಾಜರಿದ್ದರು.

ಕುಸುಮ್–ಸಿ: ಜಿಲ್ಲೆಯ ಮೊದಲ ಕಾಮಗಾರಿಗೆ ಚಾಲನೆ



ಕಾಮಗಾರಿಗೆ ಶಾಸಕ ರಮೇಶ್‌ಬಾಬು ಚಾಲನೆ ನೀಡಿದರು.

ಮಂಡ್ಯ, ಜ.22– ಕೃಷಿ ಫೀಡರ್‌ಗಳ ಸೋಲರೈಸೇಷನ್ ಮೂಲಕ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ಪೂರೈಸುವ 'ಕುಸುಮ್–ಸಿ' ಯೋಜನೆಯ ಮೊದಲ ಕಾಮಗಾರಿಗೆ ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಹಾಗೂ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಗುರುವಾರ ಚಾಲನೆ ನೀಡಿದರು.

ಮದ್ದೂರು ತಾಲೂಕಿನ ಬೆಸಗರಹಳ್ಳಿ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಎನ್.ಕೋಡಹಳ್ಳಿ ಗ್ರಾಮದಲ್ಲಿ ಕುಸುಮ್–ಸಿ ಯೋಜನೆಯಡಿ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲಾಗುತ್ತಿದೆ. ಈ ಯೋಜನೆ ಅಡಿ ಜಿಲ್ಲೆಯಲ್ಲಿ ಮೊಟ್ಟ ಮೊದಲ ಘಟಕ ಇದಾಗಲಿದ್ದು, 15 ಎಕರೆ ವಿಸ್ತೀರ್ಣದಲ್ಲಿ 4.572 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದ ಬೆಸಗರಹಳ್ಳಿ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಕೃಷಿ ಫೀಡರ್‌ನಿಂದ 1,125 ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಅನುಕೂಲಕರವಾಗಲಿದೆ. ಈಗಾಗಲೇ 12 ಕುಸುಮ್–ಸಿ ಸೋಲಾರೈಸೇಷನ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಯೋಜನೆಯಿಂದ ಮಂಡ್ಯ ಜಿಲ್ಲಾ ವ್ಯಾಪ್ತಿಯ ರೈತರಿಗೆ ಹಗಲು ವೇಳೆಯಲ್ಲಿ 3 ಫೇಸ್ ವಿದ್ಯುತ್ ಸಂಪರ್ಕ ನೀಡಲು ಸಹಕಾರಿಯಾಗುವುದು.

ಈ ಸಂದರ್ಭ ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಮುಖ್ಯ ಇಂಜಿನಿಯರ್ ಮೃತ್ಯುಂಜಯ, ಮಂಡ್ಯ ವೃತ್ತದ ಅಧೀಕ್ಷಕ ಇಂಜಿನಿಯರ್ ಸೋಮಶೇಖರ್ ಸೇರಿದಂತೆ ನಿಗಮದ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ಸುಶೀಲಮ್ಮ ನಿಧನ



ಕೆ.ಆರ್.ಪೇಟೆ, ಜ.22– ತಾಲೂಕಿನ ಅನುವಿನಕಟ್ಟೆ ಗ್ರಾಮದ ಹಿರಿಯ ಮುಖಂಡ ನರಸಿಂಹೇಗೌಡರ ಪತ್ನಿ ಸುಶೀಲಮ್ಮ (70) ಗುರುವಾರ ಸಂಜೆ ನಿಧನರಾದರು.

ಮೃತರು ಪುತ್ರ ಆನಂದ್, ಸೊಸೆ ಗ್ರಾಪಂ ಸದಸ್ಯೆ ಆಶಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಮ್ಮ



ಕೆ.ಆರ್.ಪೇಟೆ: ತಾಲೂಕಿನ ಕುಂಬೇನಹಳ್ಳಿ ಗ್ರಾಮದ ಶಿವಜ್ಯೋತಿಪಣದ ಹಿರಿಯರಾದ ಜಯಮ್ಮ (80) ಗುರುವಾರ ನಿಧನರಾದರು.

ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಸಭೆಗೆ ಅವಮಾನ ಮಾಡಿದ್ದಾರೆ

ಓದುವಂತಿಲ್ಲ ಎಂದರು. ವರ್ಷದ ಮೊದಲ ಜಂಟಿ ಅಧಿವೇಶನ ಮತ್ತು ವಿಶೇಷ ಅಧಿವೇಶನ ಕರೆಯಲಾಗಿತ್ತು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ–ಮನರೇಗಾ ರದ್ದುಪಡಿಸಿ, ವಿಬಿ–ಜಿ ರಾಮ್ ಜಿ (ವಿಕಸಿತ ಭಾರತ–ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್–ಗ್ರಾಮೀಣ) ಎಂಬ ಕಾಯ್ದೆಯನ್ನು ಕೇಂದ್ರ ಸರ್ಕಾರ ಹೊಸದಾಗಿ ರಚಿಸಿದೆ. ಇದಕ್ಕೆ ನಮ್ಮ ಸರ್ಕಾರದ ತೀವ್ರ ವಿರೋಧವಿದೆ. ಹೊಸ ಕಾಯ್ದೆಯಿಂದ ಮಹಾತ್ಮಾ ಗಾಂಧಿ ಹೆಸರು ತೆಗೆಯಲಾಗಿದೆ. ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ 2005ರಲ್ಲಿ ಸಂವಿಧಾನದ ನಿರ್ದೇಶನಗಳಂತೆ, ಆಹಾರ ಭದ್ರತೆ, ಮಾಹಿತಿ ಹಕ್ಕು, ಶಿಕ್ಷಣ ಹಕ್ಕು, ಉದ್ಯೋಗದ ಹಕ್ಕು ಕಾಯ್ದೆಗಳನ್ನು ಜಾರಿಗೆ ತಂದಿದ್ದರು.

ಬಡ ಕಾರ್ಮಿಕರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗ ಒದಗಿಸುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಕಾಯ್ದೆಯಿಂದ ದಲಿತರು, ಕಾರ್ಮಿಕರು ಮತ್ತು ಮಹಿಳೆಯರು ಮತ್ತು ಸಣ್ಣ ರೈತರಿಗೆ ಅನುಕೂಲವಾಗಿತ್ತು. ಹೊಸ ಕಾಯ್ದೆಯಲ್ಲಿ ವಿಶೇಷವಾಗಿ ಶೇ.53 ಮಹಿಳೆಯರು, ಶೇ.28 ದಲಿತರಿದ್ದು, ಇವರಿಗೆ ಉದ್ಯೋಗದ ಖಾತ್ರಿ ಇಲ್ಲವಾಗಿದೆ. ಅಪೇಕ್ಷಿಸಿದ ಸ್ಥಳದಲ್ಲಿ, ಸಣ್ಣ ರೈತರು ತಮ್ಮ ಜಮೀನುಗಳಲ್ಲಿಯೇ ಕೆಲಸ ಮಾಡುವ ಅವಕಾಶ ಮುಂಚಿನ ಕಾಯ್ದೆಯಲ್ಲಿತ್ತು. ವಿಬಿ–ಜಿ ರಾಮ್ ಜಿ ಕಾಯ್ದೆಯಲ್ಲಿ ಈ ನಿರ್ಣಯವನ್ನು ಕೇಂದ್ರ ಸರ್ಕಾರ ಕೈಗೊಳ್ಳುತ್ತದೆ. ಕೇಂದ್ರ ಸರ್ಕಾರ ನಿರ್ಧರಿಸುವ ಕಡೆಗಳಲ್ಲಿ ಬಡ ಕಾರ್ಮಿಕರು ಕೆಲಸ ಮಾಡಬೇಕಿದೆ.

ಹಿಂದಿನ ಕಾಯ್ದೆಯಲ್ಲಿ ವರ್ಷದ 365 ದಿನಗಳಲ್ಲಿ ಯಾವಾಗಲಾದರೂ ಕೆಲಸ ಕೊಡಬಹುದಾಗಿದ್ದು, ಅದು ಸರ್ಕಾರದ ಕರ್ತವ್ಯವೂ ಆಗಿತ್ತು ಅಲ್ಲದೇ, ಕ್ರಿಯಾಯೋಜನೆ ರಚಿಸುವ ಹಕ್ಕು ಆಯಾ ಗ್ರಾಮಸಭೆ ಮತ್ತು ಪಂಚಾಯತ್‌ಗಳಿಗಿತ್ತು. ಈ ಹೊಸ ಕಾಯ್ದೆಯಲ್ಲಿ ಈ ಅವಕಾಶ ರದ್ದುಪಡಿಸಲಾಗಿದೆ.

ವಿರೋಧ ಪಕ್ಷಗಳವರು ಹೊಸ ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಅವರಿಗೆ ಸ್ವಾತಂತ್ರ್ಯವಿಲ್ಲ. ಕೇಂದ್ರದ ಕಾಯ್ದೆಯಗಳನ್ನು ಸಹಕರಿಸಲೇಬೇಕೆಂಬ ನೀತಿಯಂತೆ ನಡೆದುಕೊಳ್ಳುತ್ತಿದ್ದಾರೆ. ಆಡಳಿತ ಪಕ್ಷವಾಗಿ ನಮಗೆ ವಿರೋಧವಿದ್ದು, ಈ ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಲಾಗಿತ್ತು.

ಮನರೇಗಾ ಕಾಯ್ದೆ ಮರುಸ್ಥಾಪನೆ ಮತ್ತು ಹೊಸ ಕಾಯ್ದೆಯನ್ನು ರದ್ದುಗೊಳಿಸಬೇಕೆಂಬುದೇ ನಮ್ಮ ಉದ್ದೇಶ. ನಮ್ಮ ಪಕ್ಷ ಮತ್ತು ಸರ್ಕಾರದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ಹಳೇ ಕಾಯಿದೆ ಮರುಸ್ಥಾಪನೆ ಮಾಡುವವರೆಗೆ ನಿರಂತರವಾಗಿ ನಮ್ಮ ಹೋರಾಟ ನಡೆಯಲಿದೆ.

ಈ ಹಿಂದೆ ರೈತ ವಿರೋಧಿ ಕಾಯ್ದೆಯನ್ನು ಕೇಂದ್ರ ಸರ್ಕಾರ ವಾಪಸ್ಸು ತೆಗೆದುಕೊಂಡಂತೆ, ಹೊಸ ಕಾಯ್ದೆಯನ್ನೂ ವಾಪಸು ಪಡೆಯುವವರೆಗೆ ನಮ್ಮ ಹೋರಾಟ ನಡೆಯಲಿದೆ.

ಸಚಿವ ಸಂಪುಟ ಭಾಷಣ ಓದಲೇಬೇಕಿರುವುದು ವಾಸ್ತವಾಂಶ, ಸಂವಿಧಾನ ಜಾರಿ ಆದಾಗಿನಿಂದ ನಡೆದುಕೊಂಡು ಬಂದಿರುವ ಪದ್ಧತಿ, ರಾಜ್ಯಪಾಲರ ನಡೆ ಸಂವಿಧಾನ ಬದ್ಧ ವಿಚಾರದ ಉಲ್ಲಂಘನೆಯಾಗಿದೆ.

ಇದನ್ನು ನಮ್ಮ ಪಕ್ಷ ಮತ್ತು ಸರ್ಕಾರ, ಶಾಸಕರು, ಎಂಎಲ್‌ಸಿ ಪ್ರತಿಭಟನೆ ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿದೆ. ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸಿದ್ದಾರೆ. ಕೇಂದ್ರ ಸರ್ಕಾರ ತಾವು ಮಾಡಿದ ತಪ್ಪನ್ನು ಮರೆಮಾಚಲು ರಾಜ್ಯಪಾಲರ ಕೈಯಲ್ಲಿ ಬೇರೆ ಭಾಷಣ ಓದಿಸಿದೆ. ಇದು ಸಂವಿಧಾನ ಬಾಹಿರ ಕೃತ್ಯ, ರಾಜ್ಯಪಾಲರು ತಮ್ಮ ಕರ್ತವ್ಯ ಪಾಲನೆ ಮಾಡಿಲ್ಲ ಎಂದರು.

ಸರ್ಕಾರ ಸಿದ್ಧಪಡಿಸಿದ ಭಾಷಣದ ಪ್ರತಿಯನ್ನು ಎಲ್ಲ ಶಾಸಕರು, ಎಂಎಲ್‌ಸಿಗಳಿಗೆ ವಿತರಿಸಲಾಗಿತ್ತು. ರಾಜ್ಯಪಾಲರ ನಡೆ ವಿಚಾರ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಮೊಕದ್ದಮೆ ಹೂಡುವ ಸಂಬಂಧ ಚರ್ಚಿಸಿ ಕಾನೂನು ರೀತ್ಯಾ ಕ್ರಮದ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಸದನದಿಂದ ಹೊರ ನಡೆದ ರಾಜ್ಯಪಾಲರು...


ಸರ್ಕಾರ ಸಿದ್ಧಪಡಿಸಿರುವ ಭಾಷಣವನ್ನು ಓದುವಂತೆ ಒತ್ತಾಯಿಸಿ ರಾಜ್ಯಪಾಲರನ್ನು ಸುತ್ತುವರಿಯಲು ಮುಂದಾದರು. ಈ ವೇಳೆ ಮಾರ್ಷಲ್‌ಗಳು ಹಾಗೂ ರಾಜ್ಯಪಾಲರ ಅಂಗರಕ್ಷಕರು ಒಳಪ್ರವೇಶಿಸಿ ಭದ್ರತೆಯಲ್ಲಿ ರಾಜ್ಯಪಾಲರನ್ನು ಕರೆದೊಯ್ದರು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರೀ ಮಾತಿನ ಚಕಮಕಿ ಗದ್ದಲದ ಮಧ್ಯೆಯೇ ಉಭಯ ಸದನಗಳ ಪೀಠಾಸೀನಾಧಿಕಾರಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ವಿಧಿವತ್ತಾಗಿ ರಾಜ್ಯಪಾಲರನ್ನು ಬೀಳ್ಕೊಟ್ಟರು. ಮತ್ತೆ ಸದನ ಸಮಾವೇಶ ಗೊಂಡಾಗ ರಾಜ್ಯಪಾಲರ ನಡೆಯ ಕುರಿತು ಪರ ಮತ್ತು ವಿರುದ್ಧವಾಗಿ, ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಮಾತಿನ ಚಕಮಕಿ ನಡೆಸಿದರು.


ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ರಾಜ್ಯಪಾಲರು ಕಾನೂನು ಬದ್ಧವಾಗಿ ಉಭಯ ಸದನದ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿ ತೆರಳಿದ್ದಾರೆ ಎಂದರು. ಸಭಾಧ್ಯಕ್ಷರು ಹೇಳಿಕೆ ನೀಡುತ್ತಿದ್ದಂತೆ ಮಧ್ಯಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ರಾಜ್ಯಪಾಲರು ಭಾಷಣ ಮಾಡಿ ರಾಷ್ಟ್ರಗೀತೆ ನಿಯಮ ಪಾಲಿಸದೆ ತೆರಳಿದ್ದು ಸಂವಿಧಾನ ವಿರೋಧಿ ನಡೆ ಎಂದರು. ಸಚಿವರ ಮಾತಿಗೆ ಪ್ರತಿಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ರಾಜ್ಯಪಾಲರು ಕಾನೂನು ರೀತಿಯೇ ನಡೆದುಕೊಂಡಿದ್ದಾರೆ ಎನ್ನುತ್ತಿದ್ದಂತೆ ಮಧ್ಯಪ್ರವೇಶಿಸಿದ ಸಭಾಧ್ಯಕ್ಷರು, ವಿಷಯಕ್ಕೆ ತೆರೆ ಎಳೆದು ಮುಂದಿನ ಕಲಾಪವನ್ನು ಕೈಗೆತ್ತಿಕೊಂಡರು.

ಚಾಮುಂಡಿಬೆಟ್ಟದಲ್ಲಿ ಪ್ರಸಾದ ಕಾಮಗಾರಿ ಪ್ರಗತಿ

ದೇವಾಲಯದ ಸನಿಹದಲ್ಲೆ ಅಡಿಪಾಯದ ಕಾಮಗಾರಿ; ಗ್ರಾಮಸ್ಥರಲ್ಲಿ ದೇವಸ್ಥಾನ, ಗೋಪುರಕ್ಕೆ ಹಾನಿ ಆತಂಕ

- ರಾಜರ ಕಾಲದಲ್ಲಿ ದೇವಾಲಯದ ಸುತ್ತ ತಡೆಗೋಡೆ ನಿರ್ಮಾಣ
- ದೇವಸ್ಥಾನ, ಗೋಪುರ ಸುಭದ್ರತೆಗೆ ಕಲ್ಲು, ಮಣ್ಣಿನ ಸುಭದ್ರತೆ
- ದೇವಸ್ಥಾನ ಬಳಿ ಅಡಿಪಾಯ ತೋಡಿದರೆ ಭೂಮಿ ಸಡಿಲದ ಚಿಂತೆ
- ಸರ್ಕಾರ ಮಾಡಿದಂತಹ ನಿಯಮವನ್ನ ತಾನೇ ಉಲ್ಲಂಘನೆ ಮಾಡುತ್ತಿದೆ!





ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಸುತ್ತ ನಿರ್ಮಾಣವಾಗಿರುವ ಕಲ್ಲಿನ ತಡೆಗೋಡೆ (ಎಡಚಿತ್ರ), ರಾಜರ ಕಾಲದಲ್ಲಿ ನಡೆದಂತಹ ಶ್ರೀ ಚಾಮುಂಡೇಶ್ವರಿ ದೇವಿಯ ರಥೋತ್ಸವದ ಅಪರೂಪದ ಚಿತ್ರ.

ಅಂದು ನಿರ್ಮಾಣ ಮಾಡಿರುವ ಕಲ್ಲಿನ ತಡೆಗೋಡೆಯು ಶ್ರೀ ಚಾಮುಂಡೇಶ್ವರಿ ದೇವಾಲಯ, ರಾಜಗೋಪುರ ಹಾಗೂ ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ಭದ್ರ ಬುನಾದಿಯಾಗಿದೆ. ಆದರೆ, ಪ್ರಸಾದ ಯೋಜನೆಯಡಿ ಈಗ ನಡೆಸಲಾಗುತ್ತಿರುವ ಕಾಮಗಾರಿಯಿಂದ ದೇವಸ್ಥಾನದ ಅಡಿಪಾಯಕ್ಕೆ ಒಂದಲ್ಲ ಒಂದು ರೀತಿ ಹಾನಿಯಾಗಬಹುದು.

ಮೈಸೂರು, ಜ.22(ಬಿಎಲ್‌ಯು)– ಪ್ರಸಾದ ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ವೇಳೆ ಚಾಮುಂಡೇಶ್ವರಿ ದೇವಸ್ಥಾನದ ಉತ್ತರ ಭಾಗದ ದೇವಾಲಯದ ಗೋಡೆ ಸನಿಹದಲ್ಲೆ ದೊಡ್ಡ ಪ್ರಮಾಣದ ಅಡಿಪಾಯ ಹಾಕಲಾಗುತ್ತಿದೆ ಎಂದು ಶ್ರೀ ಚಾಮುಂಡೇಶ್ವರಿ ಮಹಾಬಲೇಶ್ವರ ಬೆಟ್ಟ ಸಂರಕ್ಷಣಾ ವೇದಿಕೆ ಆತಂಕ ವ್ಯಕ್ತಪಡಿಸಿದೆ.

ದೇವಸ್ಥಾನದ ಬಳಿ ನಡೆಯುತ್ತಿರುವ ಕಾಮಗಾರಿಯಿಂದ ದೇವಸ್ಥಾನ ಹಾಗೂ ಗೋಪುರಕ್ಕೆ ಹಾನಿ ಆಗಬಹುದು ಎಂಬ ಎಚ್ಚರಿಕೆಯನ್ನು ವೇದಿಕೆ ನೀಡಿದೆ.

ಪ್ರಸಾದ ಯೋಜನೆಯ ಕಾಮಗಾರಿಯಿಂದ ದೇವಸ್ಥಾನ ಹಾಗೂ ರಾಜಗೋಪುರಕ್ಕೆ ಯಾವ ರೀತಿ ಧಕ್ಕೆ ಆಗಬಹುದು ಎಂದು ವೇದಿಕೆಯು ಇಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ವಿವರಿಸಿದೆ.

ಸುಮಾರು 200 ವರ್ಷದ ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಈ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯ ಕೈಗೊಂಡಿದ್ದರು ಎಂದು ಇದಕ್ಕೆ ಸಂಬಂಧಿಸಿದ ದಾಖಲೆಯನ್ನು ಕೂಡ ಜಿಲ್ಲಾಧಿಕಾರಿ ಅವರಿಗೆ ಸಲ್ಲಿಸಿದೆ.

ಈ ಮೂಲಕ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಗೋಪುರ ಪ್ರಾಚ್ಯವಸ್ತು ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದಕ್ಕೆ ಬೇರೆ ನಿದರ್ಶನ ಬೇಕಿಲ್ಲ. ದೇವಸ್ಥಾನ ಹಾಗೂ ಗೋಪುರದ 100 ಮೀಟರ್ ಸುತ್ತ ಯಾವುದೇ ಕಾಮಗಾರಿ ಮಾಡುವಂತಿಲ್ಲ ಎಂಬ ಸರ್ಕಾರದ ಕಾನೂನು ನಿಯಮವನ್ನು ಸರ್ಕಾರವೇ ಉಲ್ಲಂಘನೆ ಮಾಡುತ್ತಿದೆ ಎಂದು ಆರೋಪಿಸಿದೆ ಈಗ ನಿರ್ಮಾಣವಾಗಿರುವ ದೇವಾಲಯಕ್ಕೂ ಮುನ್ನ ಸಾಧಾರಣ ಪ್ರಮಾಣದ ದೇವಸ್ಥಾನವಿತ್ತು. ಈ ದೇವಾಲಯವನ್ನು ವಿಶಾಲವಾಗಿ ನಿರ್ಮಾಣ ಮಾಡಬೇಕೆಂದು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಯೋಜನೆ ರೂಪಿಸಿ, ಅದಕ್ಕೆ ಚಾಲನೆ ನೀಡಿದ್ದರು.

ಹಾಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಶ್ರೀ ಮಹಾಬಲೇಶ್ವರ ದೇವಸ್ಥಾನದ ಸುತ್ತ ಬಹಳ ಎತ್ತರದ ತಡೆಗೋಡೆ ನಿರ್ಮಾಣ ಮಾಡಿ, ಅದು ಗಟ್ಟಿಯಾಗಿ ನಿಲ್ಲಬೇಕೆಂದು ಅದಕ್ಕೆ ಒತ್ತಾಸೆಯಾಗಿ ಕಲ್ಲು ಹಾಗೂ ಮಣ್ಣು ತುಂಬಿಸಿದ್ದರು. ರಥೋತ್ಸವಕ್ಕಾಗಿ ಸಮದಟ್ಟದ ನಾಲ್ಕು ರಸ್ತೆಗಳನ್ನು ಕೂಡ ನಿರ್ಮಾಣ ಮಾಡಲಾಗಿತ್ತು ಅಂದು ಸಿಡಿಲು ಬಡಿದರೂ ಮೂಲ ಕಟ್ಟಡಕ್ಕೆ ಯಾವುದೇ ಹಾನಿ ಆಗದಂತೆ ಗೋಪುರಕ್ಕೆ ತಾಮ್ರದ ತಂತಿಯ ಗ್ರೌಂಡಿಂಗ್ ವ್ಯವಸ್ಥೆ ಮಾಡಲಾಗಿದೆ. ಈಗ ನಡೆಯುವ ಕಾಮಗಾರಿಯಿಂದ ಇಂತಹ ಗ್ರೌಂಡಿಂಗ್ ವ್ಯವಸ್ಥೆ ಸಂಪರ್ಕ ಕಳೆದುಕೊಳ್ಳುವ ಸಾಧ್ಯತೆ ಇದೆ. ಇದರಿಂದ ಏನಾದರೂ ಅವಘಡ ಸಂಭವಿಸಿದರೆ ಭಕ್ತಾದಿಗಳಿಗೆ ಅಪಾಯವಾಗಲಿದೆ ಎಂದು ವೇದಿಕೆ ಆತಂಕ ವ್ಯಕ್ತಪಡಿಸಿದೆ.

ಪ್ರಾಚ್ಯವಸ್ತು ಇಲಾಖೆಯ ವ್ಯಾಪ್ತಿಗೆ ಬರುವ ಪಾರಂಪರಿಕ ಕಟ್ಟಡದ ಸೂಕ್ಷ್ಮತೆಯನ್ನು ಪರಿಶೀಲನೆ ನಡೆಸದ ಸರ್ಕಾರ ಪ್ರಸಾದ ಯೋಜನೆಯ ಅವೈಜ್ಞಾನಿಕ ಕಾಮಗಾರಿ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಇಂತಹ ಕಾಮಗಾರಿ ಸ್ಥಗಿತಗೊಳಿಸಿ ವಿಶ್ವ ವಿಖ್ಯಾತ ಹಿಂದೂ ಧಾರ್ಮಿಕ ಕ್ಷೇತ್ರವಾದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪಾರಂಪರಿಕ ಕಟ್ಟಡ ಸಂರಕ್ಷಣೆ ಮಾಡಬೇಕೆಂದು ಶ್ರೀ ಚಾಮುಂಡೇಶ್ವರಿ ಮಹಾಬಲೇಶ್ವರ ಬೆಟ್ಟ ಸಂರಕ್ಷಣಾ ವೇದಿಕೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರನ್ನು ಆಗ್ರಹಿಸಿದೆ.

ಪ್ರಸಾದ ಯೋಜನೆ ವಿರುದ್ಧ ಹೋರಾಟಕ್ಕೆ ವೇದಿಕೆ ರಚನೆ

ಚಾಮುಂಡಿಬೆಟ್ಟದಲ್ಲಿ ಕೈಗೊಂಡಿರುವ ಪ್ರಸಾದ ಯೋಜನೆ ಕಾಮಗಾರಿ ವಿರುದ್ಧ ಹೋರಾಡಲು ಶ್ರೀ ಚಾಮುಂಡೇಶ್ವರಿ ಮಹಾ ಬಲೇಶ್ವರ ಬೆಟ್ಟ ಸಂರಕ್ಷಣಾ ವೇದಿಕೆ ರಚನೆಯಾಗಿದೆ. ಚಾಮುಂಡಿಬೆಟ್ಟ ಗ್ರಾಮದ ನೂರಾರು ಗ್ರಾಮಸ್ಥರು ಹಾಗೂ ಹಿಂದೂಪರ ಸಾಮಾಜಿಕ ಹೋರಾಟಗಾರರು ಸೇರಿ ಒಗ್ಗೂಡಿ ಹೋರಾಟವನ್ನು ತೀವ್ರಗೊಳಿಸಿದ್ದಾರೆ. ಪ್ರಸಾದ ಯೋಜನೆ ಕಾಮಗಾರಿ ಸ್ಥಗಿತಗೊಳಿಸುವಂತೆ ಇಂದು ವೇದಿಕೆಯ ನೂರಾರು ಸದಸ್ಯರು ಸಹಿ ಮಾಡಿದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರಿಗೆ ಸಲ್ಲಿಸಿದೆ. ಹಿಂದೂಪರ ಸಾಮಾಜಿಕ ಹೋರಾಟಗಾರ ಲೋಹಿತ್ ಅರಸ್ ವೇದಿಕೆಯ ಸಂಚಾಲಕರಾಗಿದ್ದಾರೆ. ಪ್ರಸಾದ ಯೋಜನೆ ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕೆಂದು ಎಲ್ಲರೂ ಸೇರಿ ಕಾರ್ಯತಂತ್ರ ರೂಪಿಸಿದ್ದಾರೆ.

ವಯೋಮಿತಿ ಸಡಿಲಿಕೆ

ಇಂದಿನ ಘಟನೆಯನ್ನು ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ. ಇದೇ ವೇಳೆ, ರಾಜ್ಯದ 22 ಹಿಂದುಳಿದ ಹಾಗೂ ದಲಿತ ಮಠಗಳಿಗೆ ಜಾಗ ಮಂಜೂರು ಮಾಡಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲೂಕಿನ ದಾಸನಪುರ ಹೋಬಳಿಯಲ್ಲಿ ಜಾಗ ಮಂಜೂರಿಗೆ ಒಪ್ಪಿಗೆ ನೀಡಲಾಗಿದೆ. ರಾವುತ್ತನಹಳ್ಳಿ ಗ್ರಾಮದ ಸರ್ವೆ 57 ಮತ್ತು 58 ರಲ್ಲಿರುವ ಸರ್ಕಾರಿ ಜಮೀನು ದಲಿತ ಹಾಗೂ ಹಿಂದೂಳಿದ ವರ್ಗಗಳ 22 ಮಠಗಳಿಗೆ ಮಂಜೂರು ಮಾಡಲು ಕ್ಯಾಬಿನೆಟ್ ಸಮ್ಮತಿ ಸೂಚಿಸಿದೆ.

ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಮಾದಪ್ಪನ ಭಕ್ತನ ಬಲಿ ಪಡೆದ ಚಿರತೆ ಸೆರೆ



ಚಾಮರಾಜನಗರ, ಜ.22– ರಾಜ್ಯದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದ ತಾಳುಬೆಟ್ಟ ಸಮೀಪದ ರಂಗಸ್ವಾಮಿ ವಡ್ಡುವಿನ ಬಳಿ ಮಾದಪ್ಪನ ಭಕ್ತನನ್ನು ಬಲಿ ಪಡೆದಿದ್ದ ನರಹಂತಕ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಸುಮಾರು 2 ರಿಂದ 3 ವರ್ಷ ಪ್ರಾಯದ ಗಂಡು ಚಿರತೆ ಸೆರೆ ಹಿಡಿದಿದ್ದಾರೆ ಎನ್ನಲಾಗಿದೆ.

ಘಟನೆ ವಿವರ: ಮಲೆ ಮಹದೇಶ್ವರ ಬೆಟ್ಟದ ರಸ್ತೆ ಬದಿ ಕಳೆದೊಂದು ವಾರದಿಂದ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದ ಚಿರತೆ ಬುಧವಾರ ಮುಂಜಾನೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿದ್ದ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಗ್ರಾಮದ ಪ್ರವೀಣ್ ಎಂಬ ಯುವಕನ ಮೇಲೆ ದಾಳಿ ನಡೆಸಿ ಬಲಿ ಪಡೆದಿತ್ತು. ಬಳಿಕ ಚಿರತೆ ಸೆರೆ ಹಿಡಿಯುವಂತೆ ಮಹದೇಶ್ವರ ಭಕ್ತರು, ಸ್ಥಳೀಯರು ಹಾಗೂ ರೈತ ಸಂಘದ ಮುಖಂಡರು ಒತ್ತಾಯಿಸಿದ್ದರು. ಅಲ್ಲದೇ ಡಿಸಿ ಶ್ರೀರೂಪ ಹಾಗೂ ಎಡಿಸಿ ಟಿ.ಜವರೇಗೌಡ ಅವರು ಮುಂಜಾಗ್ರತಾ ಕ್ರಮವಾಗಿ ಜ.24ರವರೆಗೆ ಬೆಟ್ಟಕ್ಕೆ ಪಾದಯಾತ್ರೆ ಹಾಗೂ ಬೈಕ್‌ನಲ್ಲಿ ತೆರಳುವುದನ್ನು ನಿರ್ಬಂಧಿಸಿ ಆದೇಶ ಹೊರಡಿಸಿದ್ದರು.

ಈ ಘಟನೆಯಿಂದ ಎಚ್ಚೆತ್ತುಕೊಂಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗಾಗಿ ಕಾರ್ಯಾಚರಣೆ ಆರಂಭಿಸಿದ್ದರು. ಅಲ್ಲದೇ ಚಿರತೆ ಹೆಚ್ಚು ಓಡಾಡುತ್ತಿದ್ದ ಸ್ಥಳಗಳಲ್ಲಿ 2 ಬೋನುಗಳನ್ನು ಅಳವಡಿಸಿದ್ದರು. 50ಕ್ಕೂ ಹೆಚ್ಚು ಸಿಬ್ಬಂದಿಗಳು, ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ಡ್ರೋನ್ ತಂಡ ಹಾಗೂ ಮೈಸೂರಿನಿಂದ ಚಿರತೆ ಕಾರ್ಯಾಚರಣೆ ಪಡೆ ಹಾಗೂ ತಜ್ಞ ವೈದ್ಯಾಧಿಕಾರಿಗಳಾದ ಡಾ. ಆದರ್ಶ ಅವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.


ಡ್ರೋನ್ ಕ್ಯಾಮರಾದ ಮೂಲಕ ಚಿರತೆ ಚಲನವಲನಗಳ ಮೇಲೆ ನಿಗಾ ವಹಿಸಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ರಾತ್ರಿ 7 ಗಂಟೆ ಸುಮಾರಿನಲ್ಲಿ ರಂಗಸ್ವಾಮಿ ವಡ್ಡುವಿನ ಬಳಿ ಚಿರತೆ ಇರುವುದನ್ನು ಖಾತರಿಪಡಿಸಿಕೊಂಡು ಕಾರ್ಯಾಚರಣೆ ನಡೆಸಿ ಚಿರತೆಗೆ ಅರವಳಿಕೆ ಚುಚ್ಚುಮದ್ದು ನೀಡಿ, ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಮಲೆ ಮಹದೇಶ್ವರ ವನ್ಯಜೀವಿ ಧಾಮದ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ಮಾತನಾಡಿ, ಚಿರತೆಯನ್ನು ಯಶಸ್ವಿಯಾಗಿ ಸೆರೆ ಹಿಡಿಯಲಾಗಿದ್ದು, ಅದರ ಆರೋಗ್ಯದ ಬಗ್ಗೆ ನಿಗಾವಹಿಸಲಾಗಿದೆ. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಚಿರತೆಯನ್ನು ಮೈಸೂರಿನ ಪುನರ್ ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪಾಲಿಕೆ ಬಜೆಟ್‌ನಲ್ಲಿ ಶ್ರೀಗಂಧ ಮರ ರಕ್ಷಣೆ, ವಿಶೇಷ ಮಕ್ಕಳ ಕುಟುಂಬಕ್ಕೆ ಧನ ಸಹಾಯಕ್ಕೆ ಯೋಜನೆ ರೂಪಿಸಿ

ಆಯುಕ್ತರಲ್ಲಿ ಪತ್ರ ಮುಖೇನ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮನವಿ

ಮೈಸೂರು, ಜ.22 (ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ಈ ಬಾರಿ ಬಜೆಟ್‌ನಲ್ಲಿ ನಗರದ ಪಾರ್ಕ್‌ಗಳ ಶ್ರೀಗಂಧ ಮರಗಳ ರಕ್ಷಣೆ, ವಿಶೇಷ ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಧನ ಸಹಾಯ ನೀಡಲು ಯೋಜನೆ ರೂಪಿಸುವುದು ಸೇರಿದಂತೆ ಇನ್ನಿತರ ಜನಪರ ಯೋಜನೆಗಳ ರೂಪಿಸಲು ಪಾಲಿಕೆ ಆಯುಕ್ತರಲ್ಲಿ ಪಾಲಿಕೆಯ ವಾರ್ಡ್ 6ರ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಪತ್ರ ಮುಖೇನ ಮನವಿ ಮಾಡಿದ್ದಾರೆ.



ಎಸ್‌ಬಿಎಂ ಮಂಜು

ಮೈಸೂರಿನ ಹಲವು ಪಾರ್ಕ್‌ಗಳಲ್ಲಿ ಶ್ರೀಗಂಧ ಮರಗಳಿದ್ದು, ಅವುಗಳ ಕಳ್ಳತನ ಆಗಾಗ್ಗೆ ನಡೆಯುತ್ತಿರುತ್ತವೆ. ಹಾಗಾಗಿ ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ವಿಶೇಷ ಮಕ್ಕಳನ್ನು ಹೊಂದಿರುವ ಬಡ ಕುಟುಂಬಗಳಿಗೆ ಧನಸಹಾಯಕ್ಕಾಗಿ ಯೋಜನೆ ರೂಪಿಸಬೇಕು. ಜೊತೆಗೆ ಹಲವು ವರ್ಷಗಳ ಹಿಂದೆ ಜಲಭಾಗ್ಯ ಯೋಜನೆಯಡಿ ಉಚಿತವಾಗಿ ನೀರು ಸಂಪರ್ಕ ನೀಡಿದ್ದವರಿಗೆ ತದನಂತರದಲ್ಲಿ ಬಿಲ್ ಪಾವತಿಸಲು ಸೂಚಿಸಲಾಗಿತ್ತು. ಆದರೆ ಈ ಫಲಾನುಭವಿಗಳು ಈವರೆಗೆ ಬಿಲ್ ಪಾವತಿಸಲು ಸಾಧ್ಯವಾಗಿಲ್ಲ. ಮುಂಬರುವ ದಿನಗಳಲ್ಲಿ ಅವರು ಹಣ ಪಾವತಿಸಲು ತಯಾರಿದ್ದು, ಅದಕ್ಕೆ ಅವಕಾಶ ಕಲ್ಪಿಸಬೇಕು. ಹಾಗೆಯೇ ಪಾಲಿಕೆಯಲ್ಲಿ ಈಗಾಗಲೇ ಅನಾರೋಗ್ಯ ವ್ಯಕ್ತಿಗಳಿಗೆ 15 ಸಾವಿರ ರೂ. ಸಹಾಯಧನ ನೀಡುವ ಯೋಜನೆ ಇದ್ದು, ಈಗಿನ ವೈದ್ಯಕೀಯ ವೆಚ್ಚವೂ ಹೆಚ್ಚಾಗಿರುವುದರಿಂದ ಇದನ್ನು 25 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು. ಪಾಲಿಕೆ ವ್ಯಾಪ್ತಿಯಲ್ಲಿ ಬಡ ಕುಟುಂಬದ ಮಕ್ಕಳು ವಿದ್ಯಾಭ್ಯಾಸಕ್ಕೆ ಈಗ ನೀಡುತ್ತಿರುವ ಹಣವು ಕಡಿಮೆಯಾಗಿದ್ದು, ಅದನ್ನು ಈ ಬಜೆಟ್‌ನಲ್ಲಿ ಹೆಚ್ಚಿಸಬೇಕೆಂದು ಕೋರುವುದಾಗಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿ ಶಾಸಕರು ನನ್ನ ಬಟ್ಟೆ ಹರಿದಿದ್ದಾರೆ...

ಬೆಂಗಳೂರು, ಜ.22– ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ ಇಂದು ಕೇವಲ ರಾಜಕೀಯ ಭಾಷಣಗಳಿಗಷ್ಟೇ ಅಲ್ಲ, ದೈಹಿಕ ನೂಕುನುಗ್ಗಲಿಗೂ ಸಾಕ್ಷಿಯಾಯಿತು.



ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದದೆ ಹೊರನಡೆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ತಡೆಯಲು ಹೋದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹಾಗೂ ಮಾರ್ಷಲ್‌ಗಳ ನಡುವೆ ತೀವ್ರ ಘರ್ಷಣೆ ನಡೆದಿದ್ದು, ಈ ವೇಳೆ ಹರಿಪ್ರಸಾದ್ ಅವರ ಜುಬ್ಬಾ ಹರಿದುಹೋಗಿರುವ ಘಟನೆ ಸಂಭವಿಸಿದೆ.

ರಾಜ್ಯಪಾಲರು ಕೇವಲ ಎರಡು ಸಾಲುಗಳ ಭಾಷಣ ಮಾಡಿ ಸದನದಿಂದ ಹೊರನಡೆಯುತ್ತಿದ್ದಂತೆ ಆಕ್ರೋಶಗೊಂಡ ಕಾಂಗ್ರೆಸ್ ನಾಯಕರು ಅವರನ್ನು ತಡೆಯಲು ಮುಂದಾದರು. ಈ ವೇಳೆ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರು ರಾಜ್ಯಪಾಲರ ಹಾದಿಗೆ ಅಡ್ಡಲಾಗಿ ನಿಂತು ಪ್ರತಿಭಟಿಸಲು ಮುಂದಾದರು.

ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಗಮನಿಸಿದ ವಿಧಾನಸಭೆಯ ಮಾರ್ಷಲ್‌ಗಳು ತಕ್ಷಣವೇ ಕಾರ್ಯಪ್ರವೃತ್ತರಾಗಿ ರಾಜ್ಯಪಾಲರಿಗೆ ದಾರಿ ಮಾಡಿಕೊಡಲು ಯತ್ನಿಸಿದರು. ಹರಿಪ್ರಸಾದ್ ಅವರು ರಾಜ್ಯಪಾಲರನ್ನು ಅಡ್ಡಗಟ್ಟಲು ಬಿಡದ ಮಾರ್ಷಲ್‌ಗಳು, ಅವರನ್ನು ಬಲವಂತವಾಗಿ ಅಲ್ಲಿಂದ ತೆರವುಗೊಳಿಸಲು ಮುಂದಾದರು.

ಈ ವೇಳೆ ನಡೆದ ತಳ್ಳಾಟದಲ್ಲಿ ಮಾರ್ಷಲ್‌ಗಳು ಹರಿಪ್ರಸಾದ್ ಅವರನ್ನು ಎತ್ತಿಕೊಂಡು ಹೋಗಿ ಪಕ್ಕಕ್ಕೆ ತಳ್ಳಿದರು. ಈ ಸಂಘರ್ಷದ ನಡುವೆ ಹರಿಪ್ರಸಾದ್ ಅವರು ಧರಿಸಿದ್ದ ಬಿಳಿ ಬಣ್ಣದ ಜುಬ್ಬಾ ಹರಿದು ಹೋಯಿತು. ಇದರಿಂದ ಕೆಲಹೊತ್ತು ಉಸಾರಾಕೂ ಇಲ್ಲದ ಜಾಗದಲ್ಲಿ ನಿಂತುಕೊಂಡು ತಮ್ಮ ಆಪ್ತರಿಗೆ ಬೇರೊಂದು ಜುಬ್ಬಾ ವ್ಯವಸ್ಥೆ ಮಾಡುವುದಕ್ಕೆ ಕರೆ ಮಾಡಿ ತಿಳಿಸಿದರು.

ಸಂವಿಧಾನದಲ್ಲಿ ರಾಜ್ಯಪಾಲರ ಅಧಿಕಾರವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರದ ಭಾಷಣವನ್ನು ಸದನದಲ್ಲಿ ಓದುವ ಕೆಲಸ ಮಾಡಬೇಕು. ಆದರೆ ಸರ್ಕಾರದ ಭಾಷಣ ಓದದೆ ಅವರದ್ದೇ ಆದ ಭಾಷಣ ಓದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯಪಾಲರು ಸ್ವೇಚ್ಛಾಚಾರವಾಗಿ ನಡೆದುಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ ರಾಜ್ಯಪಾಲರ ವಿರುದ್ಧ ಪ್ರತಿಭಟನೆ ಮಾಡಿದ ಸಂದರ್ಭದಲ್ಲಿ ಹಿಂದಿನಿಂದ ಬಂದು ನನ್ನ ಬಟ್ಟೆ ಹರಿದಿದ್ದಾರೆ ಬಿಜೆಪಿಗರು. ಮುಂದಿನಿಂದ ಬರುವ ಶಕ್ತಿ ಇಲ್ಲ ಹಿಂದಿನಿಂದ ಬಂದು ಹರಿದಿದ್ದಾರೆ. ರಣಹೇಡಿಗಳು ಹಾಗೂ ಬ್ರಿಟೀಷರ ಬೂಟ್ ನೆಕ್ಕಿದವರು. ಕರ್ನಾಟಕದ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ರಾಜ್ಯಪಾಲರು ಸರ್ಕಾರದ ಭಾಷಣವನ್ನು ಪೂರ್ಣವಾಗಿ ಓದದಿರಲು ನಿರ್ಧರಿಸಿರುವುದು ತೀವ್ರ ವಿಷಾದಕರ. ಸಂವಿಧಾನವು ನಿಸ್ಸಂದೇಹವಾಗಿ ಈ ಬಗ್ಗೆ ಸ್ಪಷ್ಟವಾಗಿದೆ. ಸಂವಿಧಾನದ 176ನೇ ವಿಧಿಯ ಅಡಿಯಲ್ಲಿ ಇದು ಉಲ್ಲಂಘನೆಯಾಗಿದೆ. ರಾಜ್ಯಪಾಲರು ವರ್ಷದ ಮೊದಲ ಅಧಿವೇಶನದಲ್ಲಿ ಶಾಸಕಾಂಗವನ್ನು ಉದ್ದೇಶಿಸಿ ಮಾತನಾಡಬೇಕಾಗುತ್ತದೆ ಮತ್ತು ಆ ಭಾಷಣವು ಚುನಾಯಿತ ಸರ್ಕಾರದ ನೀತಿ ಹೇಳಿಕೆಯಾಗಿದ್ದು, ರಾಜ್ಯಪಾಲರ ವೈಯಕ್ತಿಕ ಅಭಿಪ್ರಾಯಗಳಲ್ಲ. ಇದನ್ನು ಸಚಿವ ಸಂಪುಟ ಸಿದ್ಧಪಡಿಸುತ್ತದೆ ಮತ್ತು ಅವರು ಸಾಂವಿಧಾನಿಕವಾಗಿ ಸಲಹೆಯಂತೆ ಅದನ್ನು ಸದನದಲ್ಲಿ ಮಂಡಿಸಬೇಕಾಗುತ್ತದೆ.

- ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ



ಕೇಂದ್ರ ಸರ್ಕಾರ ರಾಜ್ಯಪಾಲರನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ. ಅಧಿವೇಶನದಲ್ಲಿ ಕೇವಲ 5 ನಿಮಿಷ ಏನೋ ಓದಿ ಹೋಗಿದ್ದಾರೆ. ಸ್ವಲ್ಪ ಗೊಂದಲ ಆಯ್ತು, ರಾಮನಗರದಲ್ಲಿ ಮೀಟಿಂಗ್ ಇದ್ದ ಕಾರಣ ನಾನು ಈ ಕಡೆ ಬಂದೆ. ಸ್ವಾತಂತ್ರ್ಯ ಬಂದಾಗಲಿಂದಲೂ ಅಧಿಕಾರದಲ್ಲಿರೋ ಸರ್ಕಾರ ರೆಡಿ ಮಾಡಿಕೊಡುವ ಭಾಷಣವನ್ನೇ ರಾಜ್ಯಪಾಲರು ಓದುತ್ತಾರೆ. ಎಲ್ಲಾ ರಾಜ್ಯಗಳಲ್ಲೂ ಈ ಸಂಪ್ರದಾಯ ಇದೆ. ಕೇಂದ್ರ ಸರ್ಕಾರ ಪ್ರಜಾಪ್ರಭುತ್ವವನ್ನ ಶಿಥಿಲಗೊಳಿಸುವ ಕೆಲಸ ಮಾಡುತ್ತಿದೆ. ಗವರ್ನರ್ ಕೂಡಾ ಕಾನೂನು ಚೌಕಟ್ಟಿನಲ್ಲಿ ಅವರ ಕೆಲಸ ಮಾಡಬೇಕು.

- ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಕೈಗಾರಿಕಾ ಕ್ಲಸ್ಟರ್ ರಚನೆ ತರಬೇತಿ

ಮೈಸೂರು, ಜ.22–ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಕೈಗಾರಿಕಾ ಕ್ಲಸ್ಟರ್ ರಚನೆ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಜನವರಿ 29 ಮತ್ತು 30ರಂದು ಹಮ್ಮಿಕೊಳ್ಳಲಾಗಿದೆ. ಜ.29ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಣ್ಣ, ಅತೀಸಣ್ಣ ಹಾಗೂ ಮಧ್ಯಮ ವರ್ಗದ (ಎಂಎಸ್‌ಎಂಇ) ಕೈಗಾರಿಕಾ ಘಟಕಗಳಿಗೆ ತರಬೇತಿ ಬಹಳ ಉಪಯುಕ್ತವಾಗಿದೆ. ಆದ ಕಾರಣ, ಕೈಗಾರಿಕಾ ಘಟಕಗಳ ಉದ್ದಿಮೆದಾರರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ 0821–2520886 ಸಯ್ಯಾಜಿರಾವ್ ರಸ್ತೆ, ಕೇಂದ್ರ ಸಿಟಿಐ ಕಟ್ಟಡ, ಜಿಲ್ಲಾ ಕೈಗಾರಿಕಾ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಕರಾಳ ರೀತಿಯಲ್ಲಿ ಅಧಿವೇಶನವನ್ನ ನಡೆಸಿದೆ

- **ಇದು ಕಾಂಗ್ರೆಸ್‌ನ ಗೂಂಡಾ ಸಂಸ್ಕೃತಿಯ ಭಾಗ: ಆರ್.ಅಶೋಕ್**
- **ಸದನದಲ್ಲಿ ಅಗೌರವ ತೋರಿಸಿದ ಶಾಸಕರ ವಿರುದ್ಧ ಕ್ರಮ ಆಗಬೇಕು**

ಬೆಂಗಳೂರು, ಜ.22– ಇಂದು ಕರಾಳ ದಿನ. ಕರಾಳ ರೀತಿಯಲ್ಲಿ ಈ ಅಧಿವೇಶನವನ್ನ ಕಾಂಗ್ರೆಸ್ ನಡೆಸಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್, ಕಾಂಗ್ರೆಸ್ ವಿರುದ್ಧ ಗುಡುಗಿದ್ದಾರೆ.



ಭಾಷಣ ಓದದೇ ಹೊರನಡೆದ ರಾಜ್ಯಪಾಲರ ನಡೆಗೆ ಕಾಂಗ್ರೆಸ್ ಶಾಸಕರು ವಿರೋಧ ವ್ಯಕ್ತಪಡಿಸಿ ಅಗೌರವ ತೋರಿದ ಘಟನೆ ಕುರಿತು ಮಾತನಾಡಿದ ಅವರು, ರಾಜ್ಯಪಾಲರ ನಡೆ ಇದೇ ಮೊದಲು ಅಲ್ಲ. ಹಿಂದೆ ಹಂಸರಾಜ್ ಭಾರದ್ವಾಜ್ ಮಾಡಿದ್ದರು. ಕಾಂಗ್ರೆಸ್ ಗೂಂಡಾಗಿರಿ ಮಾಡಿದ್ದಾರೆ. ರಾಜ್ಯಪಾಲರಿಗೆ ಘೇರಾವ್ ಮಾಡಿದ್ದಾರೆ. ಇದನ್ನು ಖಂಡಿಸುತ್ತೇವೆ ಇವರನ್ನು ಸದನದಿಂದ ಹೊರಗೆ ಹಾಕಬೇಕು. ಸ್ವತಃ ಕಾನೂನು ಮಂತ್ರಿಯೇ ಅಡ್ಡಿಪಡಿಸಿದ್ದಾರೆ. ಸಭಾಧ್ಯಕ್ಷರು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಆಫೀಸ್ ಮಾಡಲು ಪ್ರಯತ್ನಿಸಿದರು. ರಾಜ್ಯಪಾಲರಿಗೆ ಯಾರೆಲ್ಲ ಅಗೌರವ ತೋರಿಸಿದ್ದಾರೆ ಅವರ ವಿರುದ್ಧ ಕ್ರಮ ಆಗಬೇಕು. ರಾಹುಲ್, ಸೋನಿಯಾ ಮೆಚ್ಚಿಸಲು ಮಾಡಿರುವ ಕುತಂತ್ರ ಇದು. ಕಾಂಗ್ರೆಸ್ ಗೂಂಡಾ ಪ್ರವೃತ್ತಿಯನ್ನ ಮುಂದುವರೆಸಿದೆ. ಕಾಂಗ್ರೆಸ್‌ನ ಸದಸ್ಯರಿಗೆ ನಾಚಿಕೆಯಾಗಬೇಕು. ರಾಜ್ಯಪಾಲರನ್ನ ಅಡ್ಡಗಟ್ಟಿ ಹಲ್ಲೆ ನಡೆಸಲು ಮುಂದಾಗಿದ್ದಾರೆ. ಇದು ಕಾಂಗ್ರೆಸ್‌ನ ಗೂಂಡಾ ಸಂಸ್ಕೃತಿಯ ಭಾಗ. ರಾಜ್ಯಪಾಲರು ಇವತ್ತು ಸಂವಿಧಾನವನ್ನ ಎತ್ತಿ ಹಿಡಿದಿದ್ದಾರೆ. ಬಿಜೆಪಿ ಹೋರಾಟ ಮುಂದುವರಿಸುತ್ತೆ ಎಂದು ಕಿಡಿಕಾರಿದರು.

ರಾಜ್ಯಪಾಲರು ಸಂವಿಧಾನದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಧನ್ಯವಾದ ಹೇಳಿ ಹೊರಟಿದ್ದಾರೆ. ಭಾರಾದ್ವಾಜ್ ಇದ್ದಾಗಲೂ ಘೋಷಣೆ ಮಾಡಿ ಹೊರಟು ಹೋಗಿದ್ದರು. ಇದರಲ್ಲಿ ತಪ್ಪೇನಾಗಿದೆ. ಆ ಕುರ್ಚಿಯಲ್ಲಿ ಕುಳಿತು ಭಾಷಣ ಪ್ಲೇ ಮಾಡಿ ಹೋಗುವ ಅಧಿಕಾರ ಇದೆ. ಇದಕ್ಕೆ ಕಾಂಗ್ರೆಸ್‌ನವರು ಅಗೌರವ ತೋರಿದ್ದಾರೆ. ಹೆಚ್.ಕೆ ಪಾಟೀಲರೇ ಅಡ್ಡಿಪಡಿಸಿದ್ದಾರೆ. ಅಡ್ಡಿಪಡಿಸಿದವರ ಮೇಲೆ ಕ್ರಮ ಆಗಬೇಕು. ಇವರ ಬಿಲ್‌ಗಳಿಗೆಲ್ಲ ರಾಜ್ಯಪಾಲರು ಸಹಿ ಹಾಕಿ ಕಳುಹಿಸಿದ್ದಾರೆ, ಆಗ ಇವ್ರಿಗೆ ಸರಿ ಇತ್ತಾ? ಲೋಕಭವನವನ್ನ ಕಾಂಗ್ರೆಸ್ ಭವನ ಮಾಡಲು ಹೊರಟಿದ್ದಾರೆ. ಇದು ಸಂವಿಧಾನ ವಿರೋಧಿ ನಡೆ. ರಾಹುಲ್, ಸೋನಿಯಾ ಮೆಚ್ಚಿಸುವ ಕುತಂತ್ರ ಇದು. ಸಂವಿಧಾನಕ್ಕೆ ಕಾಂಗ್ರೆಸ್ ಅಪಮಾನ ಮಾಡಿದೆ. ಅಂಬೇಡ್ಕರ್‌ನ ಈ ಹಿಂದೆ ಸೋಲಿಸಿದ್ದೇ ಅವರು. ಸದನದಲ್ಲಿ ಅಗೌರವ ತೋರಿಸಿದ ಶಾಸಕರ ವಿರುದ್ಧ ಕ್ರಮ ಆಗಲೇಬೇಕು ಎಂದು ಪಟ್ಟುಹಿಡಿದರು.



ರಾಜ್ಯಪಾಲರ ಸ್ಥಾನಕ್ಕೆ ಒಂದು ಗೌರವ ಇದೆ ಅವರು ಏನನ್ನ ಓದಬೇಕು ಎನ್ನುವುದು ಅವರಿಗೆ ಬಿಟ್ಟ ವಿಚಾರ. ಅವರ ಘನತೆಯನ್ನ ಕಾಂಗ್ರೆಸ್‌ನವರು ಹಾಳು ಮಾಡಲು ಹೊರಟಿದ್ದಾರೆ. ರಾಜ್ಯ ಸರ್ಕಾರ, ಕೇಂದ್ರ ಸಂಘರ್ಷ ಮಾಡಿಕೊಂಡು ಹೋದರೆ ರಾಜ್ಯದ ಜನತೆಯೇ ಬಡವಾಗುತ್ತಾರೆ. ತುಮಕೂರಿನಲ್ಲಿ ಸ್ಟೇಡಿಯಂ ಹೆಸರು ಬದಲಾವಣೆ ಆಯ್ತು ಮಹಾತ್ಮ ಗಾಂಧಿ ಹೆಸರು ಬದಲಾವಣೆ ಮಾಡಿರುವುದು ನಿಮ್ಮ ನಾಯಕರೇ. ಕಾಂಗ್ರೆಸ್‌ನವರು ಯಾಕೆ ಈ ವಿಚಾರದಲ್ಲಿ ಡಬಲ್ ಸ್ಟ್ಯಾಂಡ್ ತೆಗೆದುಕೊಂಡಿದ್ದೀರಿ.

- ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ನಾಳೆಯಿಂದ ಮೈಸೂರಲ್ಲಿ ಅಧಿಕ ಹಾಲು ಕರೆಯುವ ಸ್ಪರ್ಧೆ

ಮೈಸೂರು, ಜ.22(ಜಿಎ)–ಮೈಸೂರು ನಗರ ಗೋಪಾಲಕರ ಸಂಘ ಹಾಗೂ ಪಶುಸಂಗೋಪನಾ ಇಲಾಖೆ ವತಿಯಿಂದ ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ 20ನೇ ವರ್ಷದ ಕರ್ನಾಟಕ ರಾಜ್ಯ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಜ.24 ಮತ್ತು 25ರಂದು ಜೆಕೆ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯ ಗೋಪಾಲಕರ ಸಂಘದ ಅಧ್ಯಕ್ಷರೂ ಆದ ಡಿ.ನಾಗಭೂಷಣ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.24 ಹಾಗೂ 25ರ ಬೆಳಗ್ಗೆ 6.30 ಹಾಗೂ ಸಂಜೆ 5.30ಕ್ಕೆ ಸ್ಪರ್ಧೆ ನಡೆಯಲಿದೆ. ಮೊದಲನೇ ಬಹುಮಾನವಾಗಿ 1.50 ಲಕ್ಷ, 2ನೇ ಬಹುಮಾನವಾಗಿ 1ಲಕ್ಷ, 3ನೇ ಬಹುಮಾನವಾಗಿ 75 ಸಾವಿರ, 4ನೇ ಬಹುಮಾನವಾಗಿ 50 ಸಾವಿರ ಹಾಗೂ 5ನೇ ಬಹುಮಾನವಾಗಿ 25 ಸಾವಿರ ರೂ.ಗಳಲ್ಲದೆ ಎಲ್ಲಾ ವಿಜೇತರಿಗೆ ಟ್ರೋಫಿ ನೀಡಲಾಗುವುದು ಎಂದರು.

ಸ್ಪರ್ಧೆಯಲ್ಲಿ ಮೈಸೂರು ಜಿಲ್ಲೆ ಮಾತ್ರವಲ್ಲದೆ, ಬೆಂಗಳೂರು, ಕೋಲಾರ, ದೇವನಹಳ್ಳಿ, ಆನೇಕಲ್ ಹಾಗೂ ಹಾಸನ ಮೊದಲಾದ ಕಡೆಗಳಿಂದಲೂ ಗೋಪಾಲಕರು ತಮ್ಮ ಹಸುಗಳನ್ನು ಕರೆ ತರುತ್ತಿದ್ದಾರೆ. ಎಲ್ಲಾ ಹಸುಗಳ ತಪಾಸಣೆಗೆ ಒಳಪಡಿಸಲಾಗುವುದು ಅದಕ್ಕಾಗಿ ವೈದ್ಯರ ತಂಡ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.


25ರಂದು ಸಂಜೆ 6.30ಕ್ಕೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ಜ.23ರಂದು ಮಧ್ಯಾಹ್ನ 12ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಕೃಷ್ಣನ ಮೂರ್ತಿಯನ್ನೊಳಗೊಂಡ ಭವ್ಯ ಮೆರವಣಿಗೆಗೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್‌ಖಾನ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕಾಂಗ್ರೆಸ್ ಮುಖಂಡ ಅನಂತು, ಚೇತನರಾಜ್, ರಾಕೇಶ್ ಪಾಪಣ್ಣ, ಬಿಜೆಪಿ ಮುಖಂಡ ಕವೀಶ್‌ಗೌಡ, ಉದ್ಯಮಿ ಸುಧಾಕರ್ ಶೆಟ್ಟಿ, ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜು, ಪಶು ವೈದ್ಯಾಧಿಕಾರಿ ಡಾ.ಎಂ.ಪಿ.ಪೂರ್ಣಾನಂದ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಬಿಜೆಪಿ ಮುಖಂಡ ಎಸ್.ಕೆ. ದಿನೇಶ್, ಡಾ.ಜ್ಯೋತಿ ಉಮೇಶ್ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಮೆರವಣಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹೊರಟು ದೊಡ್ಡ ಗಡಿಯಾರ, ಗಾಂಧಿವೃತ್ತದಿಂದ ಸಯ್ಯಾಜಿ ರಾವ್ ರಸ್ತೆ ಮೂಲಕ ಸಾಗಿ ನಾರಾಯಣ ಶಾಸ್ತ್ರಿ ರಸ್ತೆ ಮೂಲಕ ಜೆ.ಕೆ. ಮೈದಾನದ ತಲುಪಲಿದೆ ಎಂದರು.

ಆಸಕ್ತರು ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ 998641 6956, 6362463067 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಗೋಪಿ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಶೇಖರ್, ಮಹದೇವ್, ಶಿವಣ್ಣ, ಮಂಜುನಾಥ್ ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ...



ಬೆಂಗಳೂರಿನ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನಿವಾಸದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ರಿಗೆ ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಸಿಹಿ ತಿನ್ನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ನೀಲಕಂಠ ಇನ್ನಿತರರಿದ್ದರು.



ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಮಹೇಶ್, ಶ್ರೀನಿವಾಸ್, ಹರೀಶ್, ನಾಗರಾಜು, ಚಂದ್ರಶೇಖರ್ ಇದ್ದರು.

ಯುವಕನ ಕೊಲೆ ಪ್ರಕರಣ; ಮೂವರ ಬಂಧನ

ಉಳಿದ ಆರೋಪಿಗಳಿಗೆ ಮುಂದುವರೆದ ಕಾರ್ಯಾಚರಣೆ

ಮೈಸೂರು,ಜ.22(ಆರ್‌ಕೆ)– ಸೋಮವಾರ ತಡರಾತ್ರಿ ಯುವಕ ನೋರ್ವನನ್ನು ಐವರ ಗುಂಪು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿದ್ದ ಪ್ರಕರಣ ಸಂಬಂಧ ಉದಯಗಿರಿ ಠಾಣಾ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಗೌಸಿಯಾನಗರ ನಿವಾಸಿ ಶಹಬಾಜ್ (26) ದುಷ್ಕರ್ಮಿಗಳಿಂದ ಹತ್ಯೆಯಾಗಿದ್ದ ಯುವಕ. ಪ್ರಕರಣ ಸಂಬಂಧ ಗೌಸಿಯಾನಗರದ ಜುಬೇರ್ ಹಾಗೂ ಇಬ್ಬರು ಆರೋಪಿಗಳನ್ನು ಉದಯಗಿರಿ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಫ್ಯಾಬ್ರಿ ಕೇಟರ್ ಆಗಿ ಕೆಲಸ ಮಾಡುತ್ತಿದ್ದ ಶಹಬಾಜ್, ಗೌಸಿಯಾನಗರದಲ್ಲಿ ರಾತ್ರಿ ವೇಳೆ ಬಾಡಿಗೆ ಪಡೆದು ಆಟೋ ನಿಲ್ಲಿಸುವ ಜಾಗದ ನಿರ್ವಹಣೆ ಮಾಡುತ್ತಿದ್ದ. ಇದರ ಜೊತೆಗೆ ಕೆಲ ಹಣಕಾಸಿಗೆ ಸಂಬಂಧಿಸಿದಂತೆ ವ್ಯವಹಾರ ಕೂಡ ನಡೆಸುತ್ತಿದ್ದ.

ಸೋಮವಾರ ತಡರಾತ್ರಿ ನಾಲ್ವರು ಸ್ನೇಹಿತರೊಂದಿಗೆ ಆಟೋದಲ್ಲಿ ಬಂದ ಜುಬೇರ್, ಆಟೋ ನಿಲ್ಲಿಸಲು ನೀಡುವ ಬಾಡಿಗೆ ವಿಚಾರದಲ್ಲಿ ಜಗಳ ಆರಂಭಿಸಿದ. ಈ ವೇಳೆ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಕೊಲೆಯಲ್ಲಿ ಅಂತ್ಯವಾಗಿತ್ತು. ಈ ಸಂಬಂಧ ತನಿಖೆ ಆರಂಭಿಸಿದ್ದ ಉದಯಗಿರಿ ಇನ್ಸ್‌ಪೆಕ್ಟರ್ ಸುಧಾಕರ್ ಮತ್ತು ಸಿಬ್ಬಂದಿ, ಕೆಲವೇ ಗಂಟೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಉಳಿದವರ ಪತ್ತೆಗಾಗಿ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಸಾಧನೆ ಹಾದಿಗೆ ಕ್ರೀಡಾ ಚಟುವಟಿಕೆ ಚಿಮ್ಮುವ ಹಲಗೆಯಂತೆ

ನೈಪುಣ್ಯ ಶಿಕ್ಷಣ ಸಂಸ್ಥೆ ಕನಕದಾಸನಗರ, ಆರ್.ಟಿ.ನಗರದ ಕ್ಯಾಂಪಸ್ ಕ್ರೀಡಾಕೂಟದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಶಂಕರೇಗೌಡ ಅಭಿಮತ

ಮೈಸೂರು, ಜ.22(ಪಿಎಂ)–ಸಾಧನೆ ಹಾದಿಗೆ ಕ್ರೀಡಾ ಚಟುವಟಿಕೆಗಳು ಚಿಮ್ಮುವ ಹಲಗೆ ರೀತಿಯಲ್ಲಿ ಪ್ರೇರಣೆ ನೀಡುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ನಿವೃತ್ತ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರೇಗೌಡ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂನಲ್ಲಿ ಹಮ್ಮಿಕೊಂಡಿದ್ದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಕನಕದಾಸನಗರ ಮತ್ತು ಆರ್.ಟಿ.ನಗರದ ಕ್ಯಾಂಪಸ್‌ಗಳ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಯಾವುದೇ ಸವಾಲನ್ನು ಎದುರಿಸುವ ಗುಣಗಳನ್ನು ಬೆಳೆಸುವಲ್ಲಿ ಕ್ರೀಡೆ ಮಹತ್ವದ ಪಾತ್ರ ವಹಿಸುತ್ತದೆ. ಕ್ರೀಡೆ ವ್ಯಕ್ತಿತ್ವ ರೂಪಿಸುತ್ತದೆ. ಸ್ಥೈರ್ಯ ಬೆಳೆಸುತ್ತದೆ. ಹಾಗೂ ಸಮುದಾಯದೊಂದಿಗೆ ಸಾಮರಸ್ಯದಿಂದ ಕೆಲಸ ಮಾಡುವ ಮನೋಭಾವ ಮೂಡಿಸುತ್ತದೆ. ಕ್ರೀಡೆ ನಮ್ಮ ದೇಹವನ್ನು ಬಲಿಷ್ಠಗೊಳಿಸಿ, ಮನಸ್ಸನ್ನು ಶುದ್ಧೀಕರಿಸಿ, ಆತ್ಮವನ್ನು ಉನ್ನತೀಕರಿಸುತ್ತದೆ. ಆದ್ದರಿಂದ ತಮ್ಮ ಆಸಕ್ತಿ ವಲಯದ ಕ್ರೀಡೆಗೆ ಆದ್ಯತೆ ನೀಡಬೇಕು ಎಂದರು.

ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಎಪಿಜೆ ಅಬ್ದುಲ್ ಕಲಾಂ ಮೊದಲಾದ ಮಹನೀಯರು ಸಾರಿದ ಸಂದೇಶಗಳ ಬಗ್ಗೆ ಅವಲೋಕಿಸಬೇಕು. ಕ್ರೀಡೆಯಲ್ಲಿ ವಿಜೇತರಾದರೆ ಅಹಂ ತೋರದೆ, ಸೋತ ಕಾರಣಕ್ಕೆ ಹತಾಶರಾಗದೇ ಸಮಾನ ಮನೋಭಾವದಿಂದ ಎರಡನ್ನೂ ಸ್ವೀಕರಿಸಿ ಮರಳಿ ಪ್ರಯತ್ನ ಮಾಡಬೇಕೆಂಬ ಮನೋಭಾವ ಬೆಳೆಸಿಕೊಳ್ಳಬೇಕೆಂದರು.

ಮಧ್ಯಾಹ್ನ ನಡೆದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಗಾಲ್ಫ್ ಕ್ರೀಡಾ ಸಾಧಕ ಹಾಗೂ ಹೆಸರಾಂತ ಗಾಯಕ ಬಿ.ಪಿ.ಮಂಜುನಾಥ್ ಭಾಗವಹಿಸಿ ಕ್ರೀಡೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಕ್ರೀಡಾಕೂಟದಲ್ಲಿ 650 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಲ್ಲದೇ ಅವರ ಪೋಷಕರಿಗಾಗಿಯೂ ವಿಶೇಷ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. ಕ್ರೀಡಾ ಸ್ಪರ್ಧಿಗಳ ಪಥಸಂಚಲನ, ಏರೋಬಿಕ್ಸ್ ನೃತ್ಯ ನೆರೆದಿದ್ದವರ ಆಕರ್ಷಿಸಿತು.

ನೈಪುಣ್ಯ ಸಂಸ್ಥೆಯ ಅಧ್ಯಕ್ಷ ಆರ್.ರಘು, ಪ್ರಾಂಶುಪಾಲ ಎಂ.ಎಸ್.ಮಹೇಂದ್ರ, ಉಪ ಪ್ರಾಂಶುಪಾಲೆ ಶಾಲಿನಿ ಮಾಜೋ, ಶಿಕ್ಷಣ ಸಂಯೋಜಕಿ ರೇಷ್ಮಾ ರೈ, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು.






ಚಾಮುಂಡಿವಿಹಾರ ಸ್ಟೇಡಿಯಂನಲ್ಲಿ ನೈಪುಣ್ಯ ಶಿಕ್ಷಣ ಸಂಸ್ಥೆಗಳ ಕ್ರೀಡಾಕೂಟವನ್ನು ನಿವೃತ್ತ ಪೊಲೀಸ್ ಅಧಿಕಾರಿ ಶಂಕರೇಗೌಡ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಗಾಲ್ಫ್ ಕ್ರೀಡಾ ಸಾಧಕ ಬಿ.ಪಿ.ಮಂಜುನಾಥ್ ಇನ್ನಿತರರು ಭಾಗವಹಿಸಿದ್ದರು.

ದೇಶ - ವಿದೇಶ

ವಿವಾದಿತ ಭೋಜ್‌ಶಾಲಾ ಸಂಕೀರ್ಣದಲ್ಲಿ ಪ್ರಾರ್ಥನೆಗೆ ಸುಪ್ರೀಂಕೋರ್ಟ್ ಅನುಮತಿ


ನವದೆಹಲಿ: ಮಧ್ಯಪ್ರದೇಶದ ಧಾರ್ ಜಿಲ್ಲೆಯ ವಿವಾದಿತ ಭೋಜ್‌ಶಾಲಾ ಸಂಕೀರ್ಣದಲ್ಲಿ ಬಸಂತ್ ಪಂಚಮಿಯ ದಿನದಂದು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಹಾಗೂ ಪ್ರತಿ ಮಂಗಳವಾರ ಪ್ರಾರ್ಥನೆ ಸಲ್ಲಿಸಲು ಹಿಂದೂಗಳಿಗೆ ಸುಪ್ರೀಂಕೋರ್ಟ್ ಅನುಮತಿ ನೀಡಿದೆ. ಹಾಗೆಯೇ ಮುಸ್ಲಿಂ ಸಮುದಾಯದ ಸದಸ್ಯರು ಶುಕ್ರವಾರ ಮಧ್ಯಾಹ್ನ 1ರಿಂದ 3 ಗಂಟೆವರೆಗೆ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಿದೆ. 11ನೇ ಶತಮಾನದ ಈ ಸ್ಮಾರಕವನ್ನು ಹಿಂದೂಗಳು ದೇವಿ ಸರಸ್ವತಿಯ ದೇವಸ್ಥಾನವೆಂದು ಪರಿಗಣಿಸುತ್ತಾರೆ. ಮುಸ್ಲಿಮರು ಇದನ್ನು ಕಮಲ್ ಮೌಲಾ ಮಸೀದ್ ಎಂದು ಭಾವಿಸುತ್ತಾರೆ. ಆದರೆ, ಈ ವರ್ಷ ಬಸಂತ ಪಂಚಮಿ ಶುಕ್ರವಾರಕ್ಕೆ ಬಂದಿರುವ ಹಿನ್ನೆಲೆ ಸ್ಪಷ್ಟತೆಗಾಗಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಲಾಗಿತ್ತು.



ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಜಿಲ್ಲಾಡಳಿತವು ಎರಡೂ ಸಮುದಾಯಗಳ ಪ್ರಾರ್ಥನೆಗಳು ಶಾಂತಿಯುತವಾಗಿ ನಡೆಯಲು ಸೂಕ್ತ ಕಾನೂನು ಸುವ್ಯವಸ್ಥೆ ಕೈಗೊಳ್ಳಬೇಕು. ಮುಸ್ಲಿಂ ಸಮುದಾಯದಿಂದ ಎಷ್ಟು ಜನ ನಮಾಜ್‌ಗೆ ಬರುವರೆಂಬ ಮಾಹಿತಿಯನ್ನು ಮುಂಚಿತವಾಗಿ ಜಿಲ್ಲಾಡಳಿತಕ್ಕೆ ಒದಗಿಸಬೇಕು ಎಂದೂ ನಿರ್ದೇಶನ ನೀಡಲಾಗಿದೆ.

ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಆಸಕ್ತಿ ಇಲ್ಲ ಎಂದ ಪುಟಿನ್

ಮಾಸ್ಕೋ: ಅಮೆರಿಕಾ ಗ್ರೀನ್‌ಲ್ಯಾಂಡ್ ಸ್ವಾಧೀನ ಪಡಿಸಿಕೊಳ್ಳಲು ಪಣತೊಟ್ಟಿರುವುದರ ನಡುವೆ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿರುವ ರಷ್ಯಾ ಅಧ್ಯಕ್ಷ ಪುಟಿನ್, ಗ್ರೀನ್‌ಲ್ಯಾಂಡ್ ಪ್ರದೇಶದ ವಿಚಾರದಲ್ಲಿ ನಮಗೆ ಯಾವುದೇ ಆಸಕ್ತಿ ಇಲ್ಲ ಎಂದು ಹೇಳಿದ್ದಾರೆ.



ರಾಷ್ಟ್ರೀಯ ಭದ್ರತಾ ಮಂಡಳಿ ಸಭೆಯಲ್ಲಿ ಮಾತನಾಡಿದ ಪುಟಿನ್, ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಏನಾಗಲಿದೆ ಎಂಬುದು ನಮಗೆ ಸಂಬಂಧಪಡದ ಹಾಗೂ ಆಸಕ್ತಿಯಿರದ ವಿಚಾರ. ಡೆನ್ಮಾರ್ಕ್ ಯಾವಾಗಲೂ ಗ್ರೀನ್‌ಲ್ಯಾಂಡ್ ಅನ್ನು ವಸಾಹತು ಎಂದು ಪರಿಗಣಿಸಿದೆ. ಅದರ ಬಗ್ಗೆ ಕ್ರೂರವಲ್ಲದಿದ್ದರೂ, ಸಾಕಷ್ಟು ಕಠಿಣವಾಗಿ ವರ್ತಿಸಿದೆ. ಆದಾಗ್ಯೂ, ಈ ವಿಚಾರದಲ್ಲಿ ಸದ್ಯ ಯಾರಾದರೂ ಹೆಚ್ಚಿನ ಆಸಕ್ತಿ ಹೊಂದಿದ್ದಾರೆಂದು ನನಗೆ ಅನಿಸುವುದಿಲ್ಲ ಎಂದಿದ್ದಾರೆ.

ಇದೇ ವೇಳೆ ರಷ್ಯಾ ಅಮೆರಿಕಾಗೆ ಅಲಾಸ್ಕವನ್ನು ಮಾರಾಟ ಮಾಡಿದ ವಿಚಾರವನ್ನೂ ಪ್ರಸ್ತಾಪಿಸಿ, ಗ್ರೀನ್‌ಲ್ಯಾಂಡ್ ಹಾಗೂ ಅಲಾಸ್ಕದ ಸದ್ಯದ ಸಂದರ್ಭವನ್ನು ಹೋಲಿಕೆ ಮಾಡಿದ್ದಾರೆ. ಸದ್ಯದ ಈ ಪರಿಸ್ಥಿತಿ 19ನೇ ಶತಮಾನದಲ್ಲಿ ರಷ್ಯಾ ಅಲಾಸ್ಕಾವನ್ನು ಅಮೆರಿಕಕ್ಕೆ ಮಾರಾಟ ಮಾಡಿದ್ದನ್ನು ನೆನಪಿಸುತ್ತದೆ. ಗ್ರೀನ್‌ಲ್ಯಾಂಡ್‌ನ ಪ್ರಸ್ತುತ ಮೌಲ್ಯ 200–250 ಮಿಲಿಯನ್ ಡಾಲರ್‌ಗಳಿರಬಹುದು ಎಂದು ರಷ್ಯಾದ ಸುದ್ದಿ ಸಂಸ್ಥೆಗಳ ವರದಿಯನ್ನು ಉಲ್ಲೇಖಿಸಿ ಹೇಳಿದ್ದಾರೆ.

ಗಣರಾಜ್ಯೋತ್ಸವ ಪರೇಡ್; ಪುರುಷ ತುಕಡಿಗೆ ಮಹಿಳೆ ಸಾರಥಿ

ನವದೆಹಲಿ: ಮುಂಬರುವ ಜ.26ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸಿಆರ್‌ಪಿಎಫ್‌ನ ಪುರುಷ ತುಕಡಿಗೆ ಮಹಿಳಾ ಅಧಿಕಾರಿ ನಾಯಕತ್ವ ವಹಿಸಲಿದ್ದಾರೆ.



ಗಣರಾಜ್ಯೋತ್ಸವದಂದು ಕರ್ತವ್ಯ ಪಥದಲ್ಲಿ ನಡೆಯುವ ಪರೇಡ್‌ನಲ್ಲಿ ಕೇಂದ್ರೀಯ ಮೀಸಲು ಪಡೆಯ (ಸಿಆರ್‌ಪಿಎಫ್) ಅಸಿಸ್ಟಂಟ್ ಕಮಾಂಡಂಟ್ 26 ವರ್ಷದ ಸಿಮ್ರನ್ ಬಾಲಾ ಅವರು ಪುರುಷ ತುಕಡಿಯನ್ನು ಮುನ್ನಡೆಸಲಿದ್ದಾರೆ. ವಿವಿಧ ತುಕಡಿಗಳಿಗೆ ಮಹಿಳಾ ಅಧಿಕಾರಿಗಳು ನೇತೃತ್ವ ವಹಿಸಿರುವ ನಿದರ್ಶನಗಳಿದ್ದರೂ 140ಕ್ಕೂ ಹೆಚ್ಚು ಪುರುಷ ಸಿಬ್ಬಂದಿಯ ತಂಡಕ್ಕೆ ಮಹಿಳಾ ಅಧಿಕಾರಿಯೊಬ್ಬರು ನೇತೃತ್ವ ವಹಿಸುವುದು ಇದೇ ಮೊದಲಾಗಿದೆ. ದೇಶದ ಅರೆಸೇನಾ ಪಡೆಗೆ ಸೇರಿದ ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಮೊದಲ ಮಹಿಳೆ ಎನ್ನುವ ಖ್ಯಾತಿಗೂ ಸಿಮ್ರಾನ್ ಪಾತ್ರರಾಗಿದ್ದಾರೆ. ಯುಪಿಎಸ್‌ಸಿ 2023ರಲ್ಲಿ ನಡೆಸಿದ ಸಿಎಪಿಎಫ್ ಸಹಾಯಕ ಕಮಾಂಡೆಂಟ್ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ 82ನೇ ರ್‍ಯಾಂಕ್ ಪಡೆದ ಇವರು, ಬಳಿಕ ಗುರುಗ್ರಾಮದ ಸಿಆರ್‌ಪಿಎಫ್ ಅಕಾಡೆಮಿಯಲ್ಲಿ ಕೌಶಲ ತರಬೇತಿ ಮತ್ತು ಸಾರ್ವಜನಿಕ ಭಾಷಣ ವಿಷಯಗಳಲ್ಲಿ ಅತ್ಯುತ್ತಮ ಅಧಿಕಾರಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಭಾರತದೊಂದಿಗೆ ವ್ಯಾಪಾರ ಒಪ್ಪಂದ; ಟ್ರಂಪ್ ವಿಶ್ವಾಸ

ದಾವೋಸ್: ಪ್ರಧಾನಿ ನರೇಂದ್ರ ಮೋದಿ ಅದ್ಭುತ ನಾಯಕ ಮತ್ತು ನನ್ನ ಉತ್ತಮ ಸ್ನೇಹಿತ. ಭಾರತದೊಂದಿಗೆ ಉತ್ತಮ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ವಿಶ್ವಾಸವಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.



ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮನಿ ಕಂಟ್ರೋಲ್‌ನ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಿಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಗ್ಗೆ ನನಗೆ ಅಪಾರ ಗೌರವವಿದೆ. ಅವರು ಅದ್ಭುತ ವ್ಯಕ್ತಿ ಮತ್ತು ನನ್ನ ಸ್ನೇಹಿತ. ನಮಗೆ ಉತ್ತಮ ವ್ಯಾಪಾರ ಒಪ್ಪಂದವಾಗಲಿದೆ ಎಂಬ ಭರವಸೆ ನನಗಿದೆ ಎಂದಿದ್ದಾರೆ.

ಭಾರತೀಯ ಸರಕುಗಳ ಮೇಲೆ ಕಳೆದ ವರ್ಷ ಅಧ್ಯಕ್ಷ ಟ್ರಂಪ್ ಅವರು ಅಮೆರಿಕದಲ್ಲಿ ಮಾರಾಟವಾಗುವ ಭಾರತೀಯ ಸರಕುಗಳ ಮೇಲೆ ಶೇ.50 ರಷ್ಟು ಸುಂಕವನ್ನು ವಿಧಿಸಿದರು. ಇದರಲ್ಲಿ ಶೇ.25ರಷ್ಟು ಪರಸ್ಪರ ಸುಂಕ ಮತ್ತು ಭಾರತದ ರಷ್ಯಾದ ತೈಲ ಖರೀದಿಗೆ ಶೇ.25 ರಷ್ಟು ಹೆಚ್ಚುವರಿ ದಂಡನಾತ್ಮಕ ಸುಂಕ ಸೇರಿದೆ. ಅಂದಿನಿಂದ ಎರಡೂ ದೇಶಗಳು ವ್ಯಾಪಾರ ಒಪ್ಪಂದವನ್ನು ರೂಪಿಸಲು ಮಾತುಕತೆ ನಡೆಸುತ್ತಿವೆ.

ತೆಲಂಗಾಣದಲ್ಲಿ ಮತ್ತೆ ಬೀದಿ ನಾಯಿಗಳ ಮಾರಣ ಹೋಮ

ತೆಲಂಗಾಣ: ಹೈದರಾಬಾದ್‌ನಲ್ಲಿ ಬೀದಿನಾಯಿಗಳ ಮಾರಣಹೋಮ ಮುಂದುವರೆದಿದ್ದು, ಕಮರೆಡ್ಡಿ, ಹನ್ಮಗೊಂಡ ಜಿಲ್ಲೆಗಳ ಮೂರು ಗ್ರಾಮಗಳಲ್ಲಿ ಸುಮಾರು 500ಕ್ಕೂ ಹೆಚ್ಚು ಬೀದಿ ನಾಯಿಗಳನ್ನು ಹತ್ಯೆ ಮಾಡಿದ ಘಟನೆ ಮಾಸುವ ಮುನ್ನವೇ ರಂಗಾರೆಡ್ಡಿ ಜಿಲ್ಲೆಯ ಯಾಚ್ರಮ್ ಗ್ರಾಮದಲ್ಲಿ 100ಕ್ಕೂ ಹೆಚ್ಚು ಬೀದಿನಾಯಿಗಳನ್ನು ಹತ್ಯೆ ಮಾಡಲಾಗಿದೆ. ಯಾಚ್ರಮ್ ಗ್ರಾಮದಲ್ಲೂ ಗ್ರಾಮ ಪಂಚಾಯ್ತಿ ಸದಸ್ಯರೇ ಬೀದಿ ನಾಯಿಗಳಿಗೆ ವಿಷವಿಕ್ಕಿ ಕೊಂದಿದ್ದಾರೆ ಎಂದು ಹೇಳಲಾಗಿದೆ. ಜ.19ರಂದು ನಾಯಿಗಳಿಗೆ ವಿಷಕಾರಿ ಪದಾರ್ಥಗಳನ್ನು ನೀಡಲಾಗಿದೆ ಎಂದು 'ಸ್ಟ್ರೇ ಅನಿಮಲ್ ಫೌಂಡೇಷನ್ ಆಫ್ ಇಂಡಿಯಾ' ಪ್ರಾಣಿ ಕಲ್ಯಾಣ ಸಂಘಟನೆ ಕಾರ್ಯಕರ್ತರು ಪೊಲೀಸರಿಗೆ ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಯಾಚರಮ್ ಗ್ರಾಪಂ ಅಧ್ಯಕ್ಷ, ಕಾರ್ಯದರ್ಶಿ ಮತ್ತು ವಾರ್ಡ್ ಸದಸ್ಯನ ಪ್ರಕರಣ ದಾಖಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಸುಮಾರು 50 ನಾಯಿಗಳು ಹತ್ಯೆಯಾಗಿರುವುದು ಕಂಡುಬಂದಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ. ಜ.6ರಿಂದ ತೆಲಂಗಾಣದ ಹನುಮಕೊಂಡ ಜಿಲ್ಲೆಯ ಶ್ಯಾಂಪೇಟ್ ಮತ್ತು ಅರೆಪಲ್ಲಿಯಲ್ಲಿ ಸುಮಾರು 500 ಬೀದಿನಾಯಿಗಳನ್ನು ಹತ್ಯೆ ಮಾಡಿದ ಘಟನೆ ಸಂಬಂಧ ಇಬ್ಬರು ಮಹಿಳಾ ಗ್ರಾಪಂ ಅಧ್ಯಕ್ಷರು ಸೇರಿ 9 ಮಂದಿ ವಿರುದ್ಧ, ಕಮರೆಡ್ಡಿ ಜಿಲ್ಲೆಯಲ್ಲಿ ಸುಮಾರು 200 ಬೀದಿನಾಯಿಗಳನ್ನು ಹತ್ಯೆ ಮಾಡಿದ ಘಟನೆ ಸಂಬಂಧ ಐವರು ಗ್ರಾಪಂ ಅಧ್ಯಕ್ಷರು ಸೇರಿದಂತೆ ಆರು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.




ಮೈಸೂರು ಮಿತ್ರ ಶುಕ್ರವಾರ 23 ಜನವರಿ 2026

ಸೆಪ್ಟೆಂಬರ್‌ವರೆಗೆ ಮಾತ್ರ ಗೃಹಲಕ್ಷ್ಮಿ ಹಣ ಪಾವತಿ

ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ಮಾಹಿತಿ





ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಡಿಕೇರಿ, ಜ.22– ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಪೊನ್ನಂಪೇಟೆ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯು ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾಲೂಕಿನ ವ್ಯಾಪ್ತಿಯಲ್ಲಿ ಗೃಹ ಲಕ್ಷ್ಮಿ ಯೋಜನೆಯಲ್ಲಿ ಒಟ್ಟು 1.17 ಫಲಾನುಭವಿಗಳಿಗೆ ಸೆಪ್ಟೆಂಬರ್ ತಿಂಗಳವರೆಗೆ ಗೃಹ ಲಕ್ಷ್ಮಿ ಹಣ ಪಾವತಿಯಾಗಿದ್ದು ಇನ್ನೂ 5 ತಿಂಗಳು ಬಾಕಿ ಇದ್ದು ಮುಂದಿನ ದಿನಗಳಲ್ಲಿ ಬಿಡುಗಡೆಯಾಗಲಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಗೃಹ ಲಕ್ಷ್ಮಿ ಯೋಜನೆಯಡಿ ಸೆಪ್ಟೆಂಬರ್ ತಿಂಗಳವರೆಗೆ 720 ಹೊಸ ಫಲಾನುಭವಿಗಳು ಹೆಸರು ನೋದಾಯಿಸಿಕೊಂಡಿದ್ದು ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದು, ಐಟಿ ಮತ್ತು ಜಿಎಸ್‌ಟಿ ಪಾವತಿ ಮಾಡುತ್ತಿರುವ ಫಲನುಭವಿಗಳಲ್ಲಿ ಕೆಲವು ತಾಂತ್ರಿಕ ದೋಷಗಳು ಕಂಡು ಬರುತ್ತಿದ್ದು, ಈ ಬಗ್ಗೆ ಸರ್ಕಾರದ ಗಮನ ತಂದು ಸಮಸ್ಯೆ ಬಗೆಹರಿಸಲು ಸಭೆಯಲ್ಲಿ ಚರ್ಚಿಸಲಾಯಿತು. ಸರ್ಕಾರ ಹೊಸದಾಗಿ ಮಹಿಳೆಯರಿಗಾಗಿ ಗೃಹಲಕ್ಷ್ಮಿ ವಿವಿದ್ದೋದ್ದೇಶ ಸಹಕಾರ ಸಂಘವನ್ನು ರಚನೆ ಮಾಡಿದ್ದು ಮೊದಲ ಹಂತದಲ್ಲಿ ಈಗಾಗಲೇ ತಾಲೂಕಿನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, 1250 ರೂ.ಗಳನ್ನು ಪಾವತಿ ಮಾಡಿ ನೋಂದಾಯಿಸಿಕೊಳ್ಳುವ ಮೂಲಕ ಮಹಿಳೆಯರಿಗೆ 3 ಸಾವಿರದಿಂದ 3 ಲಕ್ಷದವರೆಗೂ ಸಾಲ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಅನ್ನಭಾಗ್ಯ ಯೋಜನೆಯಡಿ ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ಪಡೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ ಅರ್ಜಿ ಸಲ್ಲಿಸಿದ ಫಲಾನುಭವಿಗಳು ಸದುಪಯೋಗವನ್ನು ಪಡೆದುಕೊಳ್ಳಲು ಸಭೆಯಲ್ಲಿ ಆಹಾರ ನಿರೀಕ್ಷಕರು ಮಾಹಿತಿ ನೀಡಿದರು.

ತೆರಿಗೆದಾರರು, ಪಿಎಂ ಕಿಸಾನ್ ಕಾರ್ಡ್ ಹೊಂದಿರುವವರ ಆದಾಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಬದಲಾವಣೆ ಮಾಡಲಾಗುತ್ತಿದ್ದು, ಕೆಲವೊಂದು ತಪ್ಪಾಗಿ ಪಟ್ಟಿಯಲ್ಲಿ ಬಡವರಿಗೂ ಬಿಪಿಎಲ್ ಕಾರ್ಡ್‌ನಿಂದ ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಲು ಬಂದಿದ್ದು ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಸಭೆಯಲ್ಲಿ ಕೋರಲಾಯಿತು.

ಸಭೆಯಲ್ಲಿ ಶಕ್ತಿ ಯೋಜನೆ, ಗೃಹ ಜ್ಯೋತಿ, ಯುವ ನಿಧಿ ಯೋಜನೆಗಳ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ವಿರಾಜಪೇಟೆ ತಾ.ಪಂ. ಇಒ ಕೆ.ಸಿ.ಅಪ್ಪಣ್ಣ, ಗ್ಯಾರಂಟಿ ಯೋಜನೆಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ವಿರಾಜಪೇಟೆಯಲ್ಲಿ ನೂತನ ಕಾಂಕ್ರೀಟ್ ರಸ್ತೆಯನ್ನು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆಯಲ್ಲಿ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟನೆ

ವಿರಾಜಪೇಟೆ, ಜ.22–ವಿರಾಜಪೇಟೆ ಪುರಸಭಾ ವ್ಯಾಪ್ತಿಯ ವಿದ್ಯಾನಗರದ ವಿವಿಧ ಭಾಗದಲ್ಲಿ ವಿಶೇಷ ಅನುದಾನದಡಿ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾದ ನೂತನ ಕಾಂಕ್ರೀಟ್ ರಸ್ತೆಯನ್ನು ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರು ಉದ್ಘಾಟಿಸಿದರು.

ಈ ಹಿಂದೆ ವಿದ್ಯಾನಗರದ ನಿವಾಸಿಗಳ ಬೇಡಿಕೆಯನ್ನು ಪರಿಗಣಿಸಿದ ಶಾಸಕರು ತಮ್ಮ ಅನುದಾನದಲ್ಲಿ ಈ ಭಾಗದಲ್ಲಿ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಲು ಸೂಚನೆ ನೀಡಿದ್ದರು. ಉದ್ಘಾಟನೆ ಬಳಿಕ ಮಾತನಾಡಿದ ಶಾಸಕರು ಇಲ್ಲಿನ ನಿವಾಸಿಗಳಿಗೆ ಮುಖ್ಯವಾಗಿ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇದ್ದು ಅದನ್ನು ನನ್ನ ಗಮನಕ್ಕೆ ತಂದಿದ್ದರು. ಅದರಂತೆ ಇಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಆಗಿದೆ. ಇಲ್ಲಿನ ನಿವಾಸಿಗಳ ಇನ್ನಷ್ಟು ಬೇಡಿಕೆಗಳಿವೆ. ಕೆಲವು ಭಾಗದಲ್ಲಿ ರಸ್ತೆ ನಿರ್ಮಾಣ ಆಗಬೇಕಿದೆ. ಮುಂದಿನ ದಿನಗಳಲ್ಲಿ ಸರಕಾರದಿಂದ ಅನುದಾನ ತಂದು ಇಲ್ಲಿನ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತದೆ. ಹಂತ ಹಂತವಾಗಿ ಜನಪರ ಕೆಲಸ ಮಾಡುವುದಾಗಿ ಭರವಸೆಯಿತ್ತರು.

ಸ್ಥಳೀಯ ವಾರ್ಡ್‌ನ ಪುರಸಭೆ ಮಾಜಿ ಸದಸ್ಯ ಮಹಮ್ಮದ್ ರಫಿ ಮಾತನಾಡಿದರು.

ಇದೇ ಸಂದರ್ಭ ಮಾಜಿ ಸದಸ್ಯ ಮಹಮ್ಮದ್ ರಫಿ ಹಾಗೂ ಅಲ್ಲಿನ ನಿವಾಸಿಗಳು ಶಾಸಕರನ್ನು ಸನ್ಮಾನಿಸಿ ಗೌರವಿಸಿದರು. ಇದೇ ವೇಳೆ ಸ್ಥಳೀಯ ನಿವಾಸಿಗಳು ತಮ್ಮ ಮನವಿ ಹಾಗೂ ಅಹವಾಲುಗಳನ್ನು ಶಾಸಕರಿಗೆ ಸಲ್ಲಿಸಿದರು. ಈ ಸಂದರ್ಭ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಪುರಸಭೆ ಮಾಜಿ ಉಪಾಧ್ಯಕ್ಷೆ ಫಸಿಯಾ ತಬ್ಸುಂ, ವಿರಾಜಪೇಟೆ ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಮತೀನ್, ಪುರಸಭೆ ಮಾಜಿ ಸದಸ್ಯ ಅತಿಫ್ ಮನ್ನ, ಜಲೀಲ್, ಜಿಲ್ಲಾ ಕಾಂಗ್ರೆಸ್ ಸದಸ್ಯ ಮೊಯಿದು, ಜಾಫರ್, ಜೋಕಿಮ್, ಚೆಕು, ಮಂಜು ಕುಂಡಚ್ಚಿರ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಆಯೂಬ್, ಗುತ್ತಿಗೆದಾರ ಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ನಾಚಪ್ಪ, ಅಭಿಯಂತರ ಹೇಮ್ ಕುಮಾರ್, ಪಕ್ಷದ ಮುಖಂಡರು, ಕಾರ್ಯಕರ್ತರು, ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.

ಸುಂಟಿಕೊಪ್ಪದಲ್ಲಿ ಛಾಪಾ ಕಾಗದ ಮಾರಾಟ ಕೇಂದ್ರ ಉದ್ಘಾಟನೆ



ಛಾಪಾ ಕಾಗದ ಮಾರಾಟ ಕೇಂದ್ರವನ್ನು ಉದ್ಘಾಟಿಸಿದ ಉಮೇಶ್ ಉತ್ತಪ್ಪ.

ಸುಂಟಿಕೊಪ್ಪ, ಜ.22– ಮಾದಾಪುರ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಇ–ಸ್ಟ್ಯಾಂಪ್ ಪೇಪರ್ ಮಾರಾಟ ಕೇಂದ್ರವನ್ನು ಸಂಘದ ಅಧ್ಯಕ್ಷ ನಾಪಂಡ ಉಮೇಶ್ ಉತ್ತಪ್ಪ ಉದ್ಘಾಟಿಸಿದರು.

ಮಾದಾಪುರ ಹೋಬಳಿ ಕೇಂದ್ರದಲ್ಲಿ ಕೃಷಿಕರಿಗೆ ಸಾಮಾನ್ಯ ಜನರಿಗೆ ಉಪಯೋಗಕ್ಕೆ ಬೇಕಾಗಿದ್ದ ಛಾಪ ಕಾಗದಕ್ಕಾಗಿ ಹತ್ತಾರು ಕಿ.ಮೀ. ದೂರ ಕ್ರಮಿಸಿ ತರಬೇಕಾಗಿತ್ತು. ಇಲ್ಲಿ ಜನತೆಯ ಸಂಕಷ್ಟವನ್ನು ಮನಗಂಡ ಮಾದಾಪುರ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ಇ– ಸ್ಟ್ಯಾಂಪ್ ಪೇಪರ್ ಮಾರಾಟ ಕೇಂದ್ರ ವನ್ನು ತೆರೆಯಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕರೆ ನೀಡಿದರು.

ಈ ಸಂದರ್ಭ ಸಂಘದ ಉಪಾಧ್ಯಕ್ಷೆ ಪವಿತ್ರ ಹರೀಶ್, ನಿರ್ದೇಶಕರುಗಳಾದ ಬಿ.ಐ.ಮೊಣ್ಣಪ್ಪ, ಪಿ.ಪಿ.ತಿಲಕ್‌ಕುಮಾರ್, ಸಿ.ಎ.ತಮ್ಮಯ್ಯ, ಕುಟ್ಟಂಡ ಕುಟ್ಟಪ್ಪ, ಮುಕ್ಕಾಟಿರ ತಿಮ್ಮಯ್ಯ, ದೇಚಮ್ಮ ಸೋಉನು, ಕೆ.ಎ. ಲತೀಫ್, ನಾಗಂಡ ಭವಿನ್, ಗಿರೀಶ್ ಎಂ.ಆರ್., ಹೆಚ್.ಇ.ಭೀಮಯ್ಯ ಹಾಗೂ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎಸ್.ಕಾವೇರಪ್ಪ ಉಪಸ್ಥಿತರಿದ್ದರು.

ಅಯೋಧ್ಯೆಯಲ್ಲಿ ಶ್ರೀರಾಮ ಲಲ್ಲಾನ ಪ್ರತಿಷ್ಠಾಪನೆ ವಾರ್ಷಿಕೋತ್ಸವ

ಮಡಿಕೇರಿಯಲ್ಲಿ ಅನ್ನ ಪ್ರಸಾದ ವಿತರಣೆ



ಮಡಿಕೇರಿ,ಜ.22– ಮರ್ಯಾದಾ ಪುರುಷೋತ್ತಮ ಶ್ರೀರಾಮನ ಜನ್ಮ ಸ್ಥಳ ವಾದ ಅಯೋಧ್ಯೆಯಲ್ಲಿ ಕೋಟ್ಯಾಂತರ ಹಿಂದೂ ಬಾಂಧವರ ನಿರೀಕ್ಷೆಯಂತೆ ಶ್ರೀರಾಮ ಲಲ್ಲಾನ ಪ್ರತಿಷ್ಠಾಪನೆಯೊಂದಿಗೆ ಭವ್ಯ ಮಂದಿರ ಲೋಕಾರ್ಪಣೆಗೊಂಡ ಪುಣ್ಯ ದಿನದ ಅಂಗವಾಗಿ ನಗರದ ಶ್ರೀ ರಾಮ ಜನ್ಮಭೂಮಿ ಸೇವಾ ಸಮಿತಿಯಿಂದ ಅನ್ನ ಪ್ರಸಾದ ವಿತರಣಾ ಕಾರ್ಯಕ್ರಮ ಭವ್ಯವಾಗಿ ನೆರವೇರಿತು.

ಶ್ರೀರಾಮ ಲಲ್ಲಾನ ಮೂರ್ತಿಯೊಂದಿಗೆ ಅಯೋಧ್ಯೆಯಲ್ಲಿ ಭಕ್ತರಿಗೆ ಮಂದಿರ ತೆರೆದುಕೊಂಡ ಬಳಿಕ ನಗರದ ಶ್ರೀ ರಾಮ ಜನ್ಮಭೂಮಿ ಸೇವಾ ಸಮಿತಿ ವರ್ಷಂಪ್ರತಿ ಅನ್ನದಾನದ ಸಂಕಲ್ಪದೊಂದಿಗೆ ಅದನ್ನು ನಡೆಸಿಕೊಂಡು ಬರುತ್ತಿದೆ. ವರ್ಷಂಪ್ರತಿಯಂತೆ ಈ ಬಾರಿಯೂ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಸಹಸ್ರಾರು ಮಂದಿಗೆ ಅನ್ನ ಪ್ರಸಾದ ವಿತರಣೆ ಅತ್ಯಂತ ಶಿಸ್ತುಬದ್ಧವಾಗಿ, ಭಕ್ತಿಪೂರ್ವಕವಾಗಿ ನೆರವೇರಿತು. ಶ್ರೀ ರಾಮ ಜನ್ಮಭೂಮಿ ಸೇವಾ ಸಮಿತಿಯ ಪದಾಧಿಕಾರಿಗಳು ಗುರುವಾರ ಬೆಳಗ್ಗೆ ಖಾಸಗಿ ಬಸ್ ನಿಲ್ದಾಣದ ಅನ್ನ ಪ್ರಸಾದ ವಿತರಣಾ ಜಾಗದಲ್ಲಿ ಗಣಪತಿ ಹೋಮವನ್ನು ನಡೆಸಿ ನಗರದ ಪೇಟೆ ಶ್ರೀ ರಾಮ ಮಂದಿರದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿದರು. ಬಳಿಕ ಬೆ.11 ಗಂಟೆಯಿಂದ ಆರಂಭಗೊಂಡ ಅನ್ನ ಪ್ರಸಾದ ವಿತರಣಾ ಕಾರ್ಯ ಸಂಜೆಯವರೆಗೆ ನಡೆಯಿತು. ಈ ಅವಧಿಯಲ್ಲಿ 5 ಸಾವಿರಕ್ಕೂ ಹೆಚ್ಚಿನ ಭಕ್ತಾದಿಗಳು ಅನ್ನ ಪ್ರಸಾದವನ್ನು ಸ್ವೀಕರಿಸಿದ್ದು ವಿಶೇಷ.

ಗಮನ ಸೆಳೆದ ಅಚ್ಚುಕಟ್ಟುತನ: ಖಾಸಗಿ ಬಸ್ ನಿಲ್ದಾಣದಲ್ಲಿ ಅನ್ನ ಪ್ರಸಾದ ವಿತರಣೆಗೆ 4 ಕೌಂಟರ್‌ಗಳನ್ನು ನಿರ್ಮಿಸಿ, ಭಕ್ತಾದಿಗಳಿಗೆ ದಿನದ ವಿಶೇಷವಾಗಿ ಅನ್ನ–ಸಾಂಬಾರು ಮತ್ತು ಪಾಯಸವನ್ನು ವಿತರಿಸಲಾಯಿತು. ಈ ಕಾರ್ಯದಲ್ಲಿ ಸಮಿತಿಯ ಪದಾಧಿಕಾರಿಗಳೊಂದಿಗೆ ನಗರದ ವಿವಿಧ ಸಂಘ ಸಂಸ್ಥೆಯ ನೂರಾರು ಸ್ವಯಂ ಸೇವಕರು ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸಂದರ್ಭ ಅನ್ನ ಪ್ರಸಾದ ವಿತರಣೆಯ ಪ್ರದೇಶದ ಪರಿಸರದ ಸ್ವಚ್ಛತೆಗೆ ಹೆಚ್ಚಿನ ನಿಗಾವಹಿಸಿದ್ದು ಕಂಡು ಬಂತು.

10 ಕ್ವಿಂಟಾಲ್ ಅಕ್ಕಿ ಬಳಕೆ: ಅನ್ನ ಪ್ರಸಾದ ವಿತರಣೆಗೆ ಸಮಿತಿಯು ದಾನಿಗಳು, ಭಕ್ತರ ಸಹಕಾರದೊಂದಿಗೆ ಸುಮಾರು 10 ಕ್ವಿಂಟಾಲ್ ಅಕ್ಕಿಯ ಅನ್ನವನ್ನು ಸಿದ್ಧಪಡಿಸಿದ್ದರೆ ಭಕ್ತ ಸಮೂಹ, ದಾನಿಗಳು ನೀಡಿದ್ದ ತರಕಾರಿಗಳ್ಳು ಬಳಸಿ ಸಾಂಬಾರನ್ನು ಸಿದ್ಧಪಡಿಸಿ ಭಕ್ತರಿಗೆ ಉಣಬಡಿಸಿದ್ದು ಗಮನ ಸೆಳೆಯಿತು.

ಶ್ರೀ ರಾಮ ಜನ್ಮಭೂಮಿ ಸೇವಾ ಸಮಿತಿಯ ಪದಾಧಿಕಾರಿಗಳಾದ ಪಿ.ಡಿ. ನವೀನ್, ರಘು, ಸದಾಶಿವ ರೈ, ಪ್ರಭು ರೈ, ಆನಂದ, ಶೇಖರ್, ಪ್ರಸಾದ್ ಸಂಪಿಗೆಕಟ್ಟೆ ಅವರ ಹಲವು ದಿನಗಳ ಪರಿಶ್ರಮ 'ಅನ್ನ ಪ್ರಸಾದ' ವಿತರಣೆಯ ಪುಣ್ಯ ಕಾರ್ಯವನ್ನು ಯಶಸ್ವಿಗೊಳಿಸಿತು.

ಕೊಡವರು ಸೇರಿದಂತೆ ಎಲ್ಲರನ್ನು ಒಳಗೊಂಡ ರಾಜ್ಯ ನಿರ್ಮಾಣಕ್ಕೆ ಆಗ್ರಹಿಸಿ ಸಿಎನ್‌ಸಿಯಿಂದ ಸತ್ಯಾಗ್ರಹ



ಎನ್.ಯು.ನಾಚಪ್ಪ

ಮಡಿಕೇರಿ,ಜ.22– ಕೊಡವರು ಸೇರಿದಂತೆ ಎಲ್ಲರನ್ನೂ ಒಳಗೊಂಡ ಪರಿಪೂರ್ಣ ಗಣರಾಜ್ಯವನ್ನು ನಿರ್ಮಿಸಬೇಕು ಕೊಡವರ 10 ಕಾನೂನುಬದ್ಧ ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜ.26ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಸತ್ಯಾಗ್ರಹ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು 77ನೇ ಗಣ ರಾಜ್ಯೋತ್ಸವದಂದು ಬೆಳಿಗ್ಗೆ 10.30ರಿಂದ 11.30 ರವರೆಗೆ ಸತ್ಯಾಗ್ರಹ ನಡೆಸಿ ಕೊಡವ ಆತ್ಮಸಾಕ್ಷಿ, ಕೊಡವ ಒಮ್ಮತ ಮತ್ತು ಕೊಡವ ಪ್ರಜ್ಞೆಯ ಅಭಿವ್ಯಕ್ತಿಯನ್ನು ದೃಢೀಕರಿಸುವ ಕುರಿತು ಸಂವಿಧಾನಬದ್ಧವಾದ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

ಸಂವಿಧಾನದ 5, 6 ಮತ್ತು 8ನೇ ಪರಿಚ್ಛೇದಗಳೊಂದಿಗೆ 244ನೇ ಮತ್ತು 371ನೇ ವಿಧಿಯ ಅಡಿಯಲ್ಲಿ ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯನ್ನು ರಚಿಸಬೇಕು. ಸ್ವ–ಆಡಳಿತ, ಸ್ವ–ನಿರ್ಣಯ ಹಕ್ಕುಗಳು, ಆದಿಸಮಸಂಜಾತ ಕೊಡವರಿಗೆ ವಿಶ್ವರಾಷ್ಟ್ರ ಸಂಸ್ಥೆಯ ಮಾನ್ಯತೆ ಕಲ್ಪಿಸಬೇಕು. ಸೂಕ್ಷ್ಮ ಆದಿಮಸಂಜಾತ ಏಕ–ಜನಾಂಗೀಯ ಅನಿಮಿಸ್ಟಿಕ್ ಕೊಡವ ಜನಾಂಗಕ್ಕೆ ಈಶಾನ್ಯ ಭಾರತದ ಎಥ್ನಿಕ್ ಕೂಟಕ್ಕೆ ಕೊಡಮಾಡಲಾದ ಎಸ್‌ಟಿ ನಮೂನೆಯ ರಾಜ್ಯಾಂಗ ಖಾತ್ರಿ ಅಡಿಯಲ್ಲಿ ವರ್ಗೀಕರಣ ನೀಡಬೇಕು ಎಂದು ಹಕ್ಕೊತ್ತಾಯ ಮಾಡಲಾಗುವುದು ಎಂದು ನಾಚಪ್ಪ ತಿಳಿಸಿದ್ದಾರೆ.

ಮಾನವ–ಪ್ರಾಣಿ ಸಂಘರ್ಷ ಮರುಕಳಿಸದಂತೆ ಕ್ರಮ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಾಕೀತು



ಸಭೆಯಲ್ಲಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

> ಮಲೆ ಮಹದೇಶ್ವರ ಬೆಟ್ಟಕ್ಕೆ ಸಾಕಷ್ಟು ಭಕ್ತರು ಕಾಲ್ನಡಿಗೆಯಲ್ಲಿ ಬರುವುದು ಸಂಪ್ರದಾಯ. ಹೀಗಾಗಿ ಕಾಲ್ನಡಿಗೆಯಲ್ಲಿ ತೆರಳಲು ಸಮಯ ನಿಗದಿ ಮಾಡುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಬೇಕಿದೆ. ಅಲ್ಲದೇ ಯಾವುದೇ ಅನಾಹುತವಾಗದಂತೆ ಜನರನ್ನು ಜಾಗೃತಿಗೊಳಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು. ಭಕ್ತರ ಹಾಗೂ ಜನರ ರಕ್ಷಣೆ ಆದ್ಯತೆಯಾಗಬೇಕು. ಈ ನಿಟ್ಟಿನಲ್ಲಿ ಅರಣ್ಯ ಅಧಿಕಾರಿಗಳು ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು.
>
> –ಕೆ.ವೆಂಕಟೇಶ್, ಉಸ್ತುವಾರಿ ಸಚಿವ.

ಚಾಮರಾಜನಗರ, ಜ.22– ಜಿಲ್ಲೆಯಲ್ಲಿ ಕಾಡು ಪ್ರಾಣಿಗಳು ಮಾನವನ ಮೇಲೆ ದಾಳಿ ಮಾಡುವಂತಹ ಪ್ರಕರಣಗಳು ಮರುಕಳಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ತಾಳುಬೆಟ್ಟದಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವ ಕಾಲ್ನಡಿಗೆ ಮಾರ್ಗದಲ್ಲಿ ಯುವಕನ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿರುವ ಹಾಗೂ ಮಾನವ ಪ್ರಾಣಿ ಸಂಘರ್ಷದ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮಾನವ ಪ್ರಾಣಿ ಸಂಘರ್ಷ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಜನರಿಗೆ ಕಾಡುಪ್ರಾಣಿಗಳಿಂದ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಅರಣ್ಯಾಧಿಕಾರಿಗಳ ಮೇಲಿದೆ. ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಭಕ್ತರೊಬ್ಬರ ಮೇಲೆ ಚಿರತೆ ದಾಳಿ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಅರಣ್ಯ ಅಧಿಕಾರಿಗಳು ಪರಿಗಣಿಸಬೇಕು. ಆ ಮೂಲಕ ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ಸಕಲ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ಕಾಲ್ನಡಿಗೆಯಲ್ಲಿ ತೆರಳುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಗಸ್ತು ಹೆಚ್ಚಳ ಮಾಡಬೇಕು. ಬೇಲಿ ಅಳವಡಿಕೆಯಂತಹ ಕ್ರಮಗಳಿಗೆ ಮುಂದಾಗಬೇಕು. ವನ್ಯಜೀವಿಗಳ ಹಾವಳಿ ತಪ್ಪಿಸಲು ಅತ್ಯಾಧುನಿಕ ಸಲಕರಣೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇದಕ್ಕೆ ಎಲ್ಲಾ ರೀತಿಯ ನೆರವು ನೀಡಲಾಗುವುದು. ಭಕ್ತರ ರಕ್ಷಣೆಗೆ ಅವಶ್ಯವಿರುವ ಎಲ್ಲಾ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿಶ್ವಜಿತ್ ಮಿಶ್ರಾ ಮಾತನಾಡಿ, ಗಸ್ತು ನಿಗಾ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಾಗುವುದು. ವನ್ಯಜೀವಿ ಮಾನವ ಸಂಘರ್ಷ ತಪ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಜಿಲ್ಲಾಧಿಕಾರಿ ಶ್ರೀರೂಪ, ಚಾಮರಾಜನಗರ ವೃತ್ತದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ ಮಾತನಾಡಿದರು. ಇದೇ ವೇಳೆ ಚಿರತೆ ದಾಳಿಯಿಂದ ಮೃತಪಟ್ಟ ಯುವಕನ ಪೋಷಕರಿಗೆ 20 ಲಕ್ಷ ರೂ. ಪರಿಹಾರ ಮೊತ್ತದ ಪೈಕಿ 5 ಲಕ್ಷ ರೂ.ಗಳ ಚೆಕ್ ಅನ್ನು ಸಚಿವರು ನೀಡಿದರು.

ಸಭೆಯಲ್ಲಿ ಜಿಪಂ ಸಿಇಓ ಮೋನಾ ರೋತ್, ಎಸ್ಪಿ ಎಂ.ಮುತ್ತುರಾಜ್, ಅರಣ್ಯ ಸಂರಕ್ಷಣಾಧಿಕಾರಿ ಡಾ.ಭಾಸ್ಕರ್, ಸುರೇಂದ್ರ, ಎಡಿಸಿ ಟಿ.ಜವರೇಗೌಡ, ಎಎಸ್ಪಿ ಎಂ.ಎನ್. ಶಶಿಧರ್, ತಹಸೀಲ್ದಾರರಾದ ಚೈತ್ರ, ಬಸವರಾಜು, ಗಿರಿಜಾ, ತನ್ಮಯ್ ಇನ್ನಿತರರಿದ್ದರು.

ಜ.25ಕ್ಕೆ ರೇಡಿಯಂಟ್ ಶಾಲಾ–ಕಾಲೇಜು ಉದ್ಘಾಟನೆ



ರೇಡಿಯಂಟ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ನಿಜಗುಣರಾಜು ಮಾತನಾಡಿದರು.

ಚಾಮರಾಜನಗರ, ಜ.22– ಗುಂಡ್ಲುಪೇಟೆ ತಾಲೂಕಿನ ದೊಡ್ಡತುಪ್ಪೂರು ಬಳಿ ನಿರ್ಮಿಸಿರುವ ರೇಡಿಯಂಟ್ ಸ್ಕೂಲ್ ಆಫ್ ಎಕ್ಸಲೆನ್ಸ್, ರೇಡಿಯಂಟ್ ಪಿಯು ಕಾಲೇಜು ಹಾಗೂ ರೇಡಿಯಂಟ್ ಅಕಾಡೆಮಿ ಜ.25ರಂದು ಉದ್ಘಾಟನೆಯಾಗಲಿದೆ ಎಂದು ರೇಡಿಯಂಟ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ನಿಜಗುಣರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಶಿವಕುಮಾರ ಸ್ವಾಮೀಜಿ ಅವರ ಕಂಚಿನ ಪ್ರತಿಮೆಯನ್ನು ಅಂದು ಬೆಳಗ್ಗೆ 10.30ಕ್ಕೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅನಾವರಣಗೊಳಿಸಲಿದ್ದಾರೆ. ಕಾಲೇಜು ಕಟ್ಟಡವನ್ನು ಸಿದ್ಧಗಂಗಾ ಮಠದ ಸಿದ್ಧ ಲಿಂಗ ಸ್ವಾಮೀಜಿ ಉದ್ಘಾಟಿಸಲಿದ್ದಾರೆ ಎಂದರು.

ಶ್ರೀಕ್ಷೇತ್ರ ಕನಕಗಿರಿಯ ಶ್ರೀಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದು, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕಾರ್ಯಕ್ರಮ ಉದ್ಘಾಟಿಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಸಿ.ಟಿ.ರವಿ, ಶಾಸಕರಾದ ಹೆಚ್.ಎಂ. ಗಣೇಶಪ್ರಸಾದ್, ಬಿ.ಪಿ.ಶ್ರೀವತ್ಸ, ಹೆಚ್.ಕೆ. ಸುರೇಶ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್, ಬೆಳ್ಳಿ ಪ್ರಕಾಶ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

ಪೂರ್ವ ಪ್ರಾಥಮಿಕದಿಂದ ಪಿಯುಸಿ ವರೆಗೆ ಶಿಕ್ಷಣ ನೀಡಲಾಗುವುದು. 5 ಎಕರೆ ಕ್ಯಾಂಪಸ್‌ನಲ್ಲಿ ಸುಸಜ್ಜಿತ ಕೊಠಡಿ ಗಳು, ಗ್ರಂಥಾಲಯ ಇರಲಿದೆ. ನೀಟ್, ಸಿಇಟಿ ತರಬೇತಿ ಕೂಡ ದೊರೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಲಹೆಗಾರರಾದ ಗೀತಾ ಬಸವರಾಜು, ಸಂಸ್ಥೆ ಕಾರ್ಯದರ್ಶಿ ಶ್ವೇತಾ, ಡೀನ್ ಡಾ.ಸುರೇಶ್, ಪ್ರಾಚಾರ್ಯರಾದ ಸಜಿತ ಸತೀಶ್, ಡಾ.ಸುಧಾಕರ್, ಡಾ.ಚಿದಾನಂದ್, ಡಾ.ಶಿವರಾಮಯ್ಯ ಇದ್ದರು.

ಕುಂದು ಕೊರತೆ, ಪ್ರಗತಿ ಪರಿಶೀಲನಾ ಸಭೆ

ಚಾಮರಾಜನಗರ, ಜ.22– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಅವರು ಜ.23ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸ್ವಚ್ಛತಾ ಕಾರ್ಮಿಕರು, ಪೌರ ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳ ಕುರಿತು ಪೌರ ಕಾರ್ಮಿಕರೊಡನೆ ನೇರ ಸಂವಾದ ಹಾಗೂ ಕುಂದು ಕೊರತೆ ಸಭೆ ನಡೆಸುವರು.

ಬಳಿಕ ಮಧ್ಯಾಹ್ನ 12 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಗರ ಸ್ಥಳೀಯ ಸಂಸ್ಥೆ, ಗ್ರಾಪಂಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು, ಪೌರಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

ಚಿರತೆ ದಾಳಿಗೆ ಕರು ಬಲಿ



ಚಿರತೆ ದಾಳಿಗೆ ಕರು ಬಲಿಯಾಗಿರುವುದು.

ಚಾಮರಾಜನಗರ, ಜ.22– ಚಿರತೆ ದಾಳಿಗೆ ಕರು ಬಲಿಯಾಗಿರುವ ಘಟನೆ ಗುರುವಾರ ತಾಲೂಕಿನ ಸಾಗಡೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಬಸವಣ್ಣ ಅವರಿಗೆ ಸೇರಿದ ಕರು ಸಾವನ್ನಪ್ಪಿರುವುದು. ಗುರುವಾರ ಮಧ್ಯಾಹ್ನ ತಮ್ಮ ಜಮೀನಿನಲ್ಲಿ ಮೇಯುತ್ತಿದ್ದ ಕರುವಿನ ಮೇಲೆ ಚಿರತೆ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಕರುವಿನ ಚೀರಾಟ ಕೇಳಿದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರು ಹಾಗೂ ರೈತರು ಜೋರಾಗಿ ಕೂಗಿಕೊಂಡಾಗ ಚಿರತೆ ಕರುವನ್ನು ಬಿಟ್ಟು ಪರಾರಿಯಾಗಿದೆ. ಈ ವೇಳೆಗಾಗಲೇ ತೀವ್ರವಾಗಿ ಗಾಯಗೊಂಡಿದ್ದ ಕರು ಸ್ಥಳದಲ್ಲೇ ಸಾವನ್ನಪ್ಪಿದೆ ಎನ್ನಲಾಗಿದೆ.

ಹಲವು ದಿನಳಿಂದ ಗ್ರಾಮದ ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದೆ. ರೈತರು ಜಮೀನಿನಲ್ಲಿ ಕೆಲಸ ಮಾಡಲು ಭಯಪಡುವಂತಾಗಿದೆ. ಜಾನುವಾರುಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯಬೇಕು. ಕರು ಕಳೆದುಕೊಂಡ ರೈತನಿಗೆ ಅರಣ್ಯ ಇಲಾಖೆಯಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಬಾಳೆಗೊನೆ ಕಳವು ಮಾಡುತ್ತಿದ್ದವರ ಬಂಧನ



ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿರುವುದು.

ಬೇಗೂರು, ಜ.22– ಜಮೀನುಗಳಲ್ಲಿ ಬಾಳೆಗೊನೆ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬೇಗೂರು ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಮ್ಮರಗಾಲ ನಿವಾಸಿಗಳಾದ ಕೆಂಪರಾಜು, ರಾಜಶೇಖರ ಮತ್ತು ತಗಡೂರು ಮಹೇಶ್ ಬಂಧಿತ ಆರೋಪಿಗಳು. ಇವರು ಗುಂಡ್ಲುಪೇಟೆ ತಾಲೂಕಿನ ಹಿರೇಬೇಗೂರು, ಅರಳೀಕಟ್ಟೆ ಸೇರಿದಂತೆ ನಂಜಗೂಡು ಸುತ್ತಮುತ್ತಲ ಗ್ರಾಮಗಳಲ್ಲಿ ರೈತರು ಜಮೀನುಗಳಲ್ಲಿ ಬೆಳೆದಿದ್ದ ಬಾಳೆ ಗೊನೆಗಳನ್ನು ರಾತ್ರಿ ವೇಳೆ ಕತ್ತರಿಸಿ ಕಳವು ಮಾಡಿ ಮೈಸೂರಿನಲ್ಲಿ ಮಾರಾಟ ಮಾಡುತ್ತಿದ್ದರು. ಈ ಸಂಬಂಧ ಹಿರೇಬೇಗೂರು, ಅರಳೀಕಟ್ಟೆ ಗ್ರಾಮಗಳ ರೈತರು ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಖದೀಮರ ಟವರ್ ಲೊಕೇಶನ್ ಆಧರಿಸಿ ಕೌಲಂದೆ ಮತ್ತು ಹಿರೇಬೇಗೂರು ಸಮೀಪ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಬೇಗೂರು ಪೊಲೀಸ್ ಠಾಣಾ ಅಪರಾಧ ವಿಭಾಗದ ಲೋಕೇಶ್, ನವೀನ್ ಸೇರಿದಂತೆ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಚಾ.ನಗರದಲ್ಲಿ ವಿಕಸಿತ ಭಾರತ ಜಿ ರಾಮ್ ಜಿ ಸಮಾವೇಶ

ಯೋಜನೆಯಿಂದ ಗ್ರಾಮೀಣರಿಗೆ ಅನುಕೂಲ: ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್



ಸಮಾವೇಶದಲ್ಲಿ ಬಿಜೆಪಿ ರಾಜ್ಯ ವಕ್ತಾರ ಅಶ್ವಥ್‌ನಾರಾಯಣ್ ಮಾತನಾಡಿದರು.

ಚಾಮರಾಜನಗರ, ಜ.22– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲರಿಂದ 'ನನ್ನ ಸರ್ಕಾರ' ಎಂದು ಹೇಳಿಸುವ ಮೂಲಕ ಕೇಂದ್ರ ಸರ್ಕಾರವನ್ನು ಟೀಕಿಸಲು ಹೊರಟಿದ್ದಾರೆ ಎಂದು ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್ ಆರೋಪಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ವಿಕಸಿತ ಭಾರತ ಜಿ ರಾಮ್ ಜಿ ಜಿಲ್ಲಾ ಸಮಾವೇಶದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ವಿಶೇಷ ಜಂಟಿ ಅಧಿವೇಶನ ಕರೆದಿದ್ದಾರೆ. ವಿಧಾನಸಭೆ, ವಿಧಾನ ಪರಿಷತ್ ಅಧಿವೇಶನ ಪ್ರಾರಂಭವಾಗುವ ಸಂದರ್ಭ ರಾಜ್ಯಪಾಲರು ಜಂಟಿ ಅಧಿವೇಶನ ಕುರಿತು ಭಾಷಣ ಮಾಡುವುದು ಸಂಪ್ರದಾಯ. ಆದರೆ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನ ಕರೆದು ವಿಶೇಷವಾಗಿ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹೆಸರನ್ನು ಕೇಂದ್ರ ಸರ್ಕಾರ ಬದಲಾಯಿಸಿ ಹಣವನ್ನು ಕಡಿತ ಮಾಡಿದ್ದಾರೆ. ಉದ್ಯೋಗ ಕಡಿತ ಮಾಡಿದ್ದಾರೆ. ಬಡವರ ಉದ್ಯೋಗ ಕಸಿದು ಗ್ರಾಮೀಣ ಜನರ ವಿರೋಧಿಯಾಗಿದೆ ಎಂದು ಇದರ ಬಗ್ಗೆ ಚರ್ಚೆ ಮಾಡಲು ಅಧಿವೇಶನ ಕರೆದಿದ್ದಾರೆ.

ಅಧಿವೇಶನದಲ್ಲಿ ಒಂದು ಪದ್ಧತಿ, ನಿಯಮಾವಳಿ ಇದೆ. ವಿಧಾನಸಭೆ, ವಿಧಾನಪರಿಷತ್ ಸದಸ್ಯರು ಸಭೆಯಲ್ಲಿದ್ದು, ರಾಜ್ಯಪಾಲರು ಭಾಷಣ ಮಾಡುತ್ತಾರೆ. ಯಾವುದೇ ಸರ್ಕಾರ ಇದ್ದರೂ ಓದಬೇಕಾದವರು ನನ್ನ ಸರ್ಕಾರ ಎಂದು ಪ್ರಾರಂಭಿಸುತ್ತಾರೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಯಾವುದೇ ಸರ್ಕಾರ ಇರಲಿ. ನನ್ನ ಸರ್ಕಾರದ ಅವಧಿಯಲ್ಲಿ ಇಂತಹ ಯೋಜನೆಗಳನ್ನು ತಂದಿದೆ ಎಂದು ಭಾಷಣ ಮಾಡುತ್ತಾರೆ. ಆದರೆ ರಾಷ್ಟ್ರಪತಿಗಳು ಅಂಕಿತ ಹಾಕಿರುವ ಯೋಜನೆಗಳನ್ನು ಯಾವುದೇ ಸರ್ಕಾರಗಳು ಟೀಕಿಸಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಅಧಿವೇಶನ ಕರೆದು ರಾಜ್ಯಪಾಲರಿಂದ ನನ್ನ ಸರ್ಕಾರ ಎಂದು ಹೇಳಿಸುವ ಮೂಲಕ ಕೇಂದ್ರ ಸರ್ಕಾರವನ್ನು ಟೀಕಿಸಲು ಹೊರಟಿದ್ದಾರೆ ಎಂದು ದೂರಿದರು.

ಸತ್ಯಾಸತ್ಯತೆ ಹೇಳಬೇಕು. ಸಿದ್ದರಾಮಯ್ಯನವರು ರಾಜ್ಯಪಾಲರಿಂದ ಸರ್ಕಾರದ ಸಾಧನೆಗಳನ್ನು ಹೇಳಿಸಬೇಕಾಗಿದ್ದರೆ ನನ್ನ ಸರ್ಕಾರ ವಾಲ್ಮೀಕಿ ನಿಗಮದಲ್ಲಿ 150 ಕೋಟಿ ತಿಂದಿದೆ. ನನ್ನ ಸರ್ಕಾರ ಎಸ್‌ಸಿ, ಎಸ್‌ಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ. ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ದ್ರೋಹ ಮಾಡಿದ್ದೇವೆ ಎಂದು ರಾಜ್ಯಪಾಲರಿಂದ ಹೇಳಿಸಬೇಕಿತ್ತು. ರಾಜ್ಯಪಾಲರಿಂದ ನನ್ನ ಸರ್ಕಾರ ಎಂದು ಹೇಳಿಸುವ ಮೂಲಕ ಕೇಂದ್ರ ಸರ್ಕಾರವನ್ನು ಟೀಕೆ ಮಾಡಲು ಹೊರಟಿದ್ದಾರೆ ಎಂದು ಸಿದ್ದರಾಮಯ್ಯ ವಿರುದ್ಧ ಗುಡುಗಿದರು.

ಮಹಾತ್ಮಗಾಂಧಿ ಅವರಿಗೆ ಯಾವುದೇ ಅಗೌರವಾಗುವ ಕೆಲಸವನ್ನು ಬಿಜೆಪಿ ಮಾಡಿಲ್ಲ. ವಿಕಸಿತ ಭಾರತ ಜಿ ರಾಮ್ ಜಿ ಯೋಜನೆ ಮಾಡಿ 100 ದಿನಗಳನ್ನು 125 ದಿನಗಳಿಗೆ ಹೆಚ್ಚಿಸುವ ಮೂಲಕ ಗ್ರಾಮೀಣ ಜನತೆಗೆ ಅನುಕೂಲ ಮಾಡಿಕೊಟ್ಟಿದೆ. ಭ್ರಷ್ಟಾಚಾರವನ್ನು ತಡೆಯುವ ಕೆಲಸ ಮಾಡಿದೆ ಇದೊಂದು ಒಳ್ಳೆಯ ಯೋಜನೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿದರು. ಸಭೆಯಲ್ಲಿ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಎಸ್.ಬಾಲರಾಜು, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷರಾದ ಬಾಲಸುಬ್ರಹ್ಮಣ್ಯಂ, ಕುಲಗಾಣ ಶಾಂತಮೂರ್ತಿ, ಮಾಜಿ ಅಧ್ಯಕ್ಷ ಆರ್.ಸುಂದರ್, ನಗರಸಭಾ ಮಾಜಿ ಉಪಾಧ್ಯಕ್ಷೆ ಮಮತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಮಹದೇವಸ್ವಾಮಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಕುಮಾರ್ ಇತರರಿದ್ದರು.

■ ಸತ್ಯಮೂರ್ತಿ ತೋಳಹುಣಸೆ

ಕನ್ನಡದಲ್ಲೂ ಛಾಪು ಮೂಡಿಸುತ್ತಿರುವ ತೆಲುಗು ಸಂಗೀತ ನಿರ್ದೇಶಕ ಅನೂಪ್ ರೂಬೆನ್ಸ್



ತೆಲುಗಿನ ಸಂಗೀತ ನಿರ್ದೇಶಕ ಹಾಗೂ ಗಾಯಕ ಅನೂಪ್ ರೂಬೆನ್ಸ್, ತಮ್ಮ ಸುಮಧುರ ಸಂಗೀತದ ಮೂಲಕ ದಕ್ಷಿಣ ಭಾರತದಾದ್ಯಂತ ಜನಪ್ರಿಯತೆ ಗಳಿಸಿದ್ದಾರೆ. 80ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ಸಂಯೋಜಿಸಿರುವ ಇವರು, ಇದೀಗ ಕನ್ನಡದಲ್ಲೂ ತಮ್ಮ ವಿಶಿಷ್ಟ ಛಾಪನ್ನು ಮೂಡಿಸುತ್ತಿದ್ದಾರೆ.

ಅನೂಪ್ ರೂಬೆನ್ಸ್ ಭಾವನಾತ್ಮಕ ಮತ್ತು ಮಧುರ ರಾಗಗಳಿಗೆ ಹೆಸರಾದವರು. ಇವರ ಸಂಗೀತದಲ್ಲಿ ಮೂಡಿಬಂದ 'ಇಷ್ಕ್', 'ಪ್ರೇಮಂ ಕಾವಲಿ', 'ಗುಂಡೆಜಾರಿ ಗಲ್ಲಂತಯ್ಯಿಂದೆ', 'ಮನಂ', 'ಗೋಪಾಲ ಗೋಪಾಲ', ಚಿತ್ರಗಳ ಹಾಡುಗಳು ಇಂದಿಗೂ ಸಂಗೀತಪ್ರಿಯರ ಮನದಲ್ಲಿವೆ.

ಇದೀಗ ಕನ್ನಡದಲ್ಲೂ ಅನೂಪ್ ಹಿಟ್ ಹಾಡುಗಳನ್ನು ನೀಡುತ್ತಾ ಬಂದಿದ್ದಾರೆ. ಗೋಲ್ಡನ್‌ಸ್ಟಾರ್ ಗಣೇಶ್ ನಟನೆಯ, 'ಖುಷಿ ಖುಷಿಯಾಗಿ' ಚಿತ್ರದ 'ಅರೆಅರೆ ಮತ್ತೆ ಹೃದಯ ಹಾಡಿತು' ದೊಡ್ಡಮಟ್ಟದಲ್ಲಿ ಹಿಟ್ ಆಗಿತ್ತು.

ನಂತರ ನಿಖಿಲ್ ಕುಮಾರಸ್ವಾಮಿ ನಟನೆಯ 'ಸೀತಾರಾಮ ಕಲ್ಯಾಣ' ಚಿತ್ರದ 'ನಿನ್ನ ರಾಜ ನಾನು, ನನ್ನ ರಾಣಿ ನೀನು...' ಹಾಡಂತೂ ಕರ್ನಾಟಕದಾದ್ಯಂತ ಸಂಗೀತ ಪ್ರಿಯರನ್ನು ರಂಜಿಸಿತ್ತು. ಹಳ್ಳಿ-ಹಳ್ಳಿಗಳಲ್ಲೂ ಈ ಹಾಡು ಜನರ ಮೆಚ್ಚುಗೆಗೆ ಪಾತ್ರವಾಗಿತ್ತು. ಅದೇ ರೀತಿ ಗೀತಾ ಚಿತ್ರದ ಮೂಲಕವೂ ಅನೂಪ್ ತಮ್ಮ ಸಂಗೀತದ ವೈವಿಧ್ಯತೆಯನ್ನು ಸಾಬೀತುಪಡಿಸಿದ್ದರು.

ಇದೀಗ ಅರ್ಜುನ್ ಸರ್ಜಾ ಅವರ ನಿರ್ದೇಶನದ ಬಹುನಿರೀಕ್ಷಿತ 'ಸೀತಾ ಪಯಣ' ಚಿತ್ರಕ್ಕೂ ಅನೂಪ್ ರೂಬೆನ್ಸ್ ಸಂಗೀತ ನೀಡಿದ್ದಾರೆ, ಈಗಾಗಲೇ ಸೀತಾಪಯಣದ ಹಾಡುಗಳು ಕನ್ನಡ ಸಿನಿಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿವೆ.



ಚಿತ್ರಕ್ಕೆ ಅರ್ಜುನನೇ ಸ್ಫೂರ್ತಿ

ಈ ಹಿಂದೆ ಬರಿ ಟೆನ್ ಪರ್ಸೆಂಟ್ ಬಡ್ಡಿ ಚಿತ್ರ ನಿರ್ಮಿಸಿದ್ದ ಲಕ್ಷ್ಮೀಪತಿ ಬಾಲಾಜಿ ಇದೀಗ ಮತ್ತೊಂದು ಸಿನಿಮಾ ನಿರ್ಮಿಸಿ ತೆರೆಗೆ ತರುತ್ತಿದ್ದಾರೆ. ಬಹುತೇಕ ಕಾಡಿನ ಕಥಾಹಂದರ ಒಳಗೊಂಡ ಮಾವುತ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ನಡೆಯಿತು. ಶಂಕರ್ ಬಿ.ಡಿ.ಸಿ.ಪಿ (ದೆಹಲಿ), ಬಿ.ಜೆ.ಪಿ. ಮುಖಂಡರಾದ ಕವಿತಾಸಿಂಗ್, ನಿವೃತ್ತ ಪೊಲೀಸ್ ಅಧಿಕಾರಿ ನಂಜುಂಡಸ್ವಾಮಿ, ಸಮಾಜ ಸೇವಕರಾದ ಭಜರಂಗಿ ಉಮೇಶ್ ಮುಖ್ಯ ಅತಿಥಿಗಳಾಗಿದ್ದರು.

ಕಾಡಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳನ್ನು ಕಂಡುಹಿಡಿದು ಕಾಡಿನ ಸಂಪತ್ತನ್ನು ಉಳಿಸಿಕೊಳ್ಳುವ 'ಮಾವುತ' ಹಾಗೂ ಆನೆಯ ಕಥೆಯನ್ನು ಈ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇವೆ. ಲಕ್ಷ್ಮೀಪತಿ ಬಾಲಾಜಿ ಅವರು ಈ ಚಿತ್ರವನ್ನು ನಿರ್ಮಿಸುವುದರ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಸಾಗರ್ ಎಂಬ ಆನೆ ಚಿತ್ರದ ಪ್ರಮುಖಪಾತ್ರದಲ್ಲಿ ನಟಿಸಿದೆ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುವ ತಯಾರಿ ನಡೆದಿದೆ ಎಂದು ನಿರ್ದೇಶಕ ರವಿಶಂಕರ್‌ನಾಗ್ ತಿಳಿಸಿದರು.

ಚಿತ್ರದ ನಾಯಕ ಹಾಗೂ ನಿರ್ಮಾಪಕ ಲಕ್ಷ್ಮೀಪತಿ ಬಾಲಾಜಿ ಮಾತನಾಡಿ, "ಮಾವುತ" ನಮ್ಮ ಸಂಸ್ಥೆಯ ಎರಡನೇ ಚಿತ್ರ. ಕಾಡಿನ ಸುತ್ತಮುತ್ತ ನಡೆಯುವ ಕಥಾಹಂದರ ಸಿನಿಮಾದ ಪ್ರಮುಖ ಭಾಗ. ಕಾಡಿನಲ್ಲೇ ಬಹುತೇಕ ಚಿತ್ರೀಕರಣ ನಡೆದಿರುವ ಚಿತ್ರವೂ ಹೌದು. ಒಬ್ಬ ಮಾವುತ ಹಾಗೂ ಆನೆಯ ನಡುವಿನ ಭಾವನಾತ್ಮಕ ಬಾಂಧವ್ಯದ ಸನ್ನಿವೇಶಗಳೇ ಮಾವುತ ಚಿತ್ರದ ಹೈಲೈಟ್. ನಮ್ಮ ಚಿತ್ರದಲ್ಲಿ ಆನೆ ತುಂಬಾ ಚೆನ್ನಾಗಿ ಅಭಿನಯಿಸಿದೆ. ಬಹಳ ದಿನಗಳ ನಂತರ ಆನೆಯೊಂದು ಪೂರ್ಣ ಪ್ರಮಾಣದಲ್ಲಿ ನಟಿಸಿರುವ ಚಿತ್ರವಿದು. ನಾವು ಈ ಸಿನಿಮಾ ಮಾಡಲು ನಮಗೆ ಅನೇಕ ಬಾರಿ ಅಂಬಾರಿ ಹೊತ್ತು, ಈಗ ನಮ್ಮನ್ನೆಲ್ಲ ಅಗಲಿರುವ ಅರ್ಜುನನೇ ಸ್ಫೂರ್ತಿ. ನಮ್ಮ ಚಿತ್ರ ಅರ್ಜುನನಿಗೆ ಅರ್ಪಣೆ. ಈಗಾಗಲೇ ಅನಿಮಲ್ ಬೋರ್ಡ್‌ನಿಂದ ಅನುಮತಿ ಪಡೆದಿದ್ದೇವೆ ಎಂದು ಹೇಳಿದರು.

ಚಿತ್ರದ ಸಾಹಸ ಸಂಯೋಜಕ ಥ್ರಿಲ್ಲರ್ ಮಂಜು ಮಾತನಾಡುತ್ತ ಮಾವುತ ಚಿತ್ರದಲ್ಲಿ ಐದು ವಿಭಿನ್ನ ಶೈಲಿಯ ಸಾಹಸ ಸನ್ನಿವೇಶಗಳಿದ್ದು, ನಾನು ಸಾಹಸ ಸಂಯೋಜನೆಯ ಜೊತೆಗೆ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದೇನೆ ಎಂದು ಹೇಳಿದರು. ನಾಯಕಿಯರಾದ ಮಹಾಲಕ್ಷ್ಮಿ ದಿವ್ಯಶ್ರೀ, ನಟರಾದ ಲಯ ಕೋಕಿಲಾ, ಕೈಲಾಶ್ ಕುಟ್ಟಪ್ಪ ಹಿನ್ನೆಲೆ ಸಂಗೀತ ನೀಡಿರುವ ರವಿವರ್ಮ ಹಾಗೂ ಇತರರು ಮಾವುತ ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿದರು.





ಕಪಾಲಿಗೆ ಹೈಟೆಕ್ ಸ್ಪರ್ಶ

ಬೆಂಗಳೂರಿನ ಪ್ರತಿಷ್ಠಿತ ಕಪಾಲಿ ಚಿತ್ರಮಂದಿರಕ್ಕೆ ಬಹು ದೊಡ್ಡ ಇತಿಹಾಸವೇ ಇದೆ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್‌ರಂಥ ಮಹಾನ್ ಕಲಾವಿದರು ಅಭಿನಯದ ಹಲವಾರು ಯಶಸ್ವೀ ಚಿತ್ರಗಳು ಇಲ್ಲೇ ಪ್ರದರ್ಶನಗೊಂಡಿವೆ. ಈ ಚಿತ್ರಮಂದಿರ ಇದೀಗ ಕಪಾಲಿ ಮಾಲ್ ಆಗಿ ಬದಲಾಗಿದೆ, ಇಲ್ಲಿ 9 ಸ್ಕ್ರೀನ್‌ಗಳುಳ್ಳ ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆಯೊಂದಿಗೆ ಎಎಂಬಿ ಸಿನಿಮಾಸ್ ಬಂದಿದೆ. ದಕ್ಷಿಣ ಭಾರತದಲ್ಲಿ ಎರಡನೇ ಡಾಲ್ಬಿ ಥಿಯೇಟರ್ ಇದರಲ್ಲಿದ್ದು, ಪ್ರೇಕ್ಷಕರಿಗೆ ಅತ್ಯುತ್ತಮ ಸೌಂಡ್ ಅನುಭವ ನೀಡಲಿದೆ. ಮೊದಲ ಡಾಲ್ಬಿ ಥಿಯೇಟರ್ ಪುಣೆಯಲ್ಲಿದೆ. ಸದ್ಯದಲ್ಲೇ ರಾಯಚೂರು, ಹುಬ್ಬಳ್ಳಿಯಲ್ಲೂ ಎಎಂಬಿ ಸಿನಿಮಾಸ್ ಪ್ರಾರಂಭಿಸುವ ಪ್ರಯತ್ನ ನಡೆಯುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಎಎಂಬಿ ಸಿನಿಮಾಸ್‌ನ ಜಾಹ್ನವಿ ನಾರಂಗ್ ಮಾಹಿತಿ ನೀಡಿದ್ದಾರೆ.



ಹೆಸರು ತಿಕ್ಲು ರಾಮ...! ಹೃದಯದಲ್ಲಿ ಶ್ರೀರಾಮ...!!




ರಾಜವೀರ್ ಕಥೆ ಬರೆದು ನಾಯಕನಾಗಿ ನಟಿಸಿರುವ ಚಿತ್ರ 'ತಿಕ್ಲು ರಾಮ'. ಮಂಜುಕವಿ ಅವರ ನಿರ್ದೇಶನವಿರುವ ಈ ಚಿತ್ರದ ಟೈಟಲ್ ಟೀಸರ್ ಮತ್ತು ಪೋಸ್ಟರನ್ನು ಆ ದಿನಗಳು ಖ್ಯಾತಿಯ ಚೇತನ್ ಬಿಡುಗಡೆ ಮಾಡಿದರು. ಕರಿಶ್ಮಾ ಕಂಬೈನ್ಸ್ ಮತ್ತು ಶ್ರಾವ್ಯ ಕಂಬೈನ್ಸ್ ಅಡಿಯಲ್ಲಿ ಶೃತಿ.ಜಿ.ಬಿ. ಹಾಗೂ ಕೋಮಲ ನಟರಾಜು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ನಿರ್ದೇಶಕ ಮಂಜುಕವಿ ಮಾತನಾಡುತ್ತ ಡಾ.ರಾಜ್‌ವೀರ್ ಅವರು ಕಾಡಿನ ಪ್ರಾಣಿಗಳು ಹಾಗೂ ಪರಿಸರದ ಬಗ್ಗೆ ಜಾಗೃತಿ ಮೂಡಿಸುವಂಥ ಅದ್ಭುತವಾದ ಕಥೆಯನ್ನು ಬರೆದಿದ್ದಾರೆ. 'ತಿಕ್ಲು ರಾಮ' ಚಿತ್ರದ ಮೊದಲ ಭಾಗದಲ್ಲಿ ಹಳ್ಳಿಯ ಸೊಗಡು ಇರಲಿದ್ದು, ದ್ವಿತೀಯಾರ್ಧವು ನೋಡುಗರನ್ನು ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತದೆ. ಎಲ್ಲೆಲ್ಲಿ ಪ್ರಾಣಿಗಳ ಅವಶ್ಯಕತೆ ಇದೆಯೋ, ಅಲ್ಲೆಲ್ಲ ಎಐ ತಂತ್ರಜ್ಞಾನ ಬಳಸಿಕೊಂಡು, ನಿಜವಾದ ಪ್ರಾಣಿಗಳೇ ಎನ್ನುವಂತೆ ದೃಶ್ಯಗಳನ್ನು ಕಟ್ಟಿಕೊಡಲಾಗುತ್ತದೆ. ಹೆಸರು ತಿಕ್ಲು ರಾಮ ಆದರೂ ಆತ ಹೃದಯದಲ್ಲಿ ಶ್ರೀರಾಮ. ಮುಂದೆ ಆತ ತಿಕ್ಲುರಾಮ ಆಗುವುದಕ್ಕೆ ಕಾರಣವೇನು ಎಂಬುದಕ್ಕೆ ಉತ್ತರ ಚಿತ್ರದಲ್ಲಿರುತ್ತದೆ. ಹಾಸನದ ಸುತ್ತಮುತ್ತಲಿನ ಫಲವತ್ತಾದ ಹಸಿರು ಪರಿಸರ ಇರುವ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ. ಇತಿಹಾಸದಲ್ಲೇ ಮೊದಲ ಬಾರಿಗೆ 'ತಿಕ್ಲು ರಾಮ' ಚಿತ್ರದ ಮೂಲಕ ಪ್ರಾಣಿಗಳ ಜತೆ ಮನುಷ್ಯನಿಗಿರುವ ಒಡನಾಟವನ್ನು ತೋರಿಸಲಾಗುತ್ತಿದೆ. ಮಕ್ಕಳಿಂದ ವೃದ್ಧರವರೆಗೂ ನೋಡುವಂಥ ಕೌಟುಂಬಿಕ ಕಥಾಹಂದರ ಈ ಚಿತ್ರದಲ್ಲಿರಲಿದೆ ಎಂದರು.

ಬಾಲ್ಯದಲ್ಲಿ ಬುದ್ಧನನ್ನು, ಸ್ವಾಮಿ ವಿವೇಕಾನಂದರನ್ನು ಟೀಕಿಸುವವರಿದ್ದರು. ಮುಂದೆ ಅವರು ಇಡೀ ದೇಶಕ್ಕೇ ಮಾದರಿಯಾದರು. ಇವರ ಸ್ಫೂರ್ತಿಯಿಂದಲೇ ನಮ್ಮ ಚಿತ್ರಕ್ಕೆ ಈ ಹೆಸರನ್ನಿಡಲಾಗಿದೆ. ಚಿತ್ರದಲ್ಲಿ ಪರಿಸರ, ಸಾಮಾಜಿಕ ಕಳಕಳಿ, ಸಂಸಾರ ನಡೆಸುವ ಹೆಣ್ಣುಮಕ್ಕಳಿಗೆ ಒಂದಾಗಿ ಬಾಳುವಂತಹ ಸನ್ನಿವೇಶಗಳಿವೆ. ಸೈಲೆಂಟ್ ಆಗಿದ್ದರೆ ರಾಮ, ಕೊಡಲಿ ಹಿಡಿದರೆ ತಿಕ್ಲು ರಾಮ. ಹಾಗಂತ ರಕ್ತಪಾತವನ್ನು ವೈಭವೀಕರಿಸಲ್ಲ. ಪ್ರಸಕ್ತ ಎಷ್ಟೋ ಜನ ವಿದ್ಯಾವಂತರಾಗಿದ್ದರೂ, ಅವಿದ್ಯಾವಂತರಂತೆ ವರ್ತಿಸುತ್ತಿದ್ದಾರೆ. ಇಂತಹ ವಿಷಯಗಳನ್ನು ಅರ್ಥಪೂರ್ಣ ದೃಶ್ಯಗಳೊಂದಿಗೆ ತೋರಿಸುವ ಪ್ರಯತ್ನ ಮಾಡಲಾಗುತ್ತಿದೆ. ನಾನು ಕೇಳಿದಂತ, ನೋಡಿದಂಥ ಘಟನೆಗಳನ್ನು ಕಥೆಯಲ್ಲಿ ದಾಖಲಿಸಿದ್ದೇನೆ ಎಂದು ನಾಯಕ ಡಾ.ರಾಜ್‌ವೀರ್ ಹೇಳಿದರು. ವಿನುಮನಸು ಅವರ ಹಿನ್ನಲೆ ಸಂಗೀತ, ರಾಜ್ ಕಡೂರು-ನಾಗರಾಜಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

'ರಾಮ್ ರಹೀಮ್' ಶೋ ರೀಲ್ ಬಿಡುಗಡೆ



ಒಳಿತುಮಾಡು ಮನುಸಾ ಖ್ಯಾತಿಯ ನಮ್‌ಋಷಿ ನಿರ್ದೇಶನದ 'ರಾಮ್ ರಹೀಮ್' ಚಿತ್ರದ ಚಿತ್ರೀಕರಣ ಮುಗಿದು ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರದ ಶೋರೀಲ್(ತುಣುಕುಗಳು) ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ನಮ್ ಋಷಿ ಈ ಶೋ ರೀಲ್‌ನಲ್ಲಿ ಯಾರೂ ಸಿನಿಮಾ ನೋಡಬೇಡಿ ಎಂದು ಹೇಳಿದ್ದೇನೆ. ಅದಕ್ಕೆ ಕಾರಣವೂ ಇದೆ. ಇದು ಯಾವುದೇ ಗಿಮಿಕ್ ಅಲ್ಲ. ಅದಕ್ಕೆ ಕಾರಣವನ್ನು ಬಿಡುಗಡೆಯ ದಿನ ನಾನೇ ತಿಳಿಸುತ್ತೇನೆ ಎಂದಿದ್ದಾರೆ. ನಿರ್ದೇಶಕ ನಮ್ ಋಷಿ, ಈಗ ಸಿನಿಮಾ ಮಾಡುವುದೇ ಕಷ್ಟ, ಹೇಗೋ ನಿರ್ಮಾಣ ಮಾಡಿದರೂ, ಅದನ್ನು ತೆರೆಗೆ ತರುವುದು ಇನ್ನೂ ಕಷ್ಟ. ಹಾಗಾಗಿ ಈ ಚಿತ್ರವನ್ನು ಸುಮಾರು ಅರವತ್ತು ಲಕ್ಷ ರೂ. ಖರ್ಚು ಮಾಡಿ ನಾನೇ ವಿತರಣೆ ಮಾಡುತ್ತೇನೆ. ಯಾರ ಬಳಿಯೂ ವಿತರಣೆ ಮಾಡಿ ಅಂತಾ ಕೇಳುವುದಿಲ್ಲ. ಸಾಮಾನ್ಯವಾಗಿ ಎಲ್ಲರೂ ಚಿತ್ರದ ಟೀಸರ್, ಟ್ರೇಲರ್ ಅಂತಾ ಬಿಡುಗಡೆ ಮಾಡುತ್ತಾರೆ. ಆದರೆ ನಾನು 11 ನಿಮಿಷ 22 ಸೆಕೆಂಡ್ ಅವಧಿಯ ಶೋರೀಲನ್ನೇ ರಿಲೀಸ್ ಮಾಡಿದ್ದೇನೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ಒಂದು ಚಿತ್ರದ ಶೋರೀಲ್ ಬಿಡುಗಡೆ ಮಾಡಿರುವುದು. ಇದರಲ್ಲಿ ಚಿತ್ರದ ಕೆಲವು ಪ್ರಮುಖ ಸಂಗತಿಗಳನ್ನು ಹೇಳಿದ್ದೇನೆ. ಬಳಸಿರುವ ಭಾಷೆ, ಹೇಳಿರುವ ರೀತಿ ಕೆಲವರಿಗೆ ಇಷ್ಟವಾಗಬಹುದು. ಕೆಲವರಿಗೆ ಇಷ್ಟ ಆಗದೆಯೂ ಇರಬಹುದು. ರಾಮ್ ರಹೀಮ್, ಹಿಂದೂ ಹುಡುಗ, ಮುಸ್ಲಿಂ ಹುಡುಗ ಹಾಗೂ ಹಿಂದೂ ಹುಡುಗಿ ಈ ಮೂವರ ನಡುವೆ ನಡೆಯುವ ತ್ರಿಕೋನ ಪ್ರೇಮಕಥೆ. ಆದರೂ ನಾನು ಈ ಚಿತ್ರವನ್ನು ನೋಡಬೇಡಿ ಎಂದು ಶೋರೀಲ್‌ನಲ್ಲಿ ಹೇಳಿದ್ದೇನೆ. ನಾನು ಯಾಕೆ ಹಾಗೆ ಹೇಳಿದ್ದೀನಿ ಅಂತ ಸಿನಿಮಾ ನೋಡಿದವರಿಗೆ ತಿಳಿಯುತ್ತದೆ. ಚಿತ್ರದ ಬಿಡುಗಡೆಯ ದಿನವೇ ನಾನು ಯಾಕೆ ಹೀಗೆ ಹೇಳಿದೆ ಎನ್ನುವುದಕ್ಕೆ ಕಾರಣವನ್ನೂ ಹೇಳುತ್ತೇನೆ ಎಂದು ಹೇಳಿದರು.

'ರಾಮ್ ರಹೀಮ್' ಚಿತ್ರದಲ್ಲಿ ಅರುಣ್ ಕ್ಯಾದಿಗೆರ, ಕಿರಣ್ ಈಡಿಗ, ರಾಜೇಶ್ವರಿ, ಅಮರೇಶ್ ಮಲ್ಲಾಪುರ, ಎಸ್. ಟಿ. ಸೋಮಶೇಖರ್, ಬಂಡೇಶ್ ನಾಯಕ್ ಅಭಿನಯಿಸಿದ್ದಾರೆ.

'ಗೌರಿಕಲ್ಯಾಣ'ದಲ್ಲಿ ಎಂ.ಎನ್. ಲಕ್ಷ್ಮಿದೇವಿ ಮೊಮ್ಮಗಳು ದಿವ್ಯಾ




ಸೀರಿಯಲ್‌ಗಳಲ್ಲಿ ನಟಿಸಿ ಮಿಂಚಿ, ಬಳಿಕ ಬೆಳ್ಳಿತೆರೆಗೆ ಎಂಟ್ರಿ ಕೊಡುವುದು ಸಾಮಾನ್ಯ. ಆದರೆ, ಸಿನಿಮಾದಲ್ಲಿ ಹೆಸರು ಮಾಡಿದ ಸಾಕಷ್ಟು ಕಲಾವಿದರು ಕಿರುತೆರೆಗೆ ಬರುತ್ತಿದ್ದಾರೆ. 27ರಿಂದ ಪ್ರಾರಂಭವಾಗುತ್ತಿರುವ 'ಗೌರಿಕಲ್ಯಾಣ' ಸೀರಿಯಲ್‌ನಲ್ಲಿ ಹಿರಿಯ ಸಾಹಿತಿ ಚಿ.ಉದಯಶಂಕರ್ ಪುತ್ರ ಚಿ.ಗುರುದತ್ ರಿಚ್ ಫ್ಯಾಮಿಲಿ ಯಜಮಾನನಾಗಿ ಹಾಗೂ ಹಿರಿಯನಟಿ ಎಂ.ಎನ್.ಲಕ್ಷ್ಮಿದೇವಿ ಪುತ್ರಿ ದಿವ್ಯಾ ಮೂವರು ಹೆಣ್ಣುಮಕ್ಕಳ ತಾಯಿಯಾಗಿ ನಟಿಸಿದ್ದಾರೆ. ರಾಮ್‌ಜಿ ಅವರ ನಿರ್ಮಾಣದ ಈ ಧಾರಾವಾಹಿಗೆ ಭರತ್ ಆಕ್ಷನ್‌ಕಟ್ ಹೇಳುತ್ತಿದ್ದಾರೆ. ಶಿಲ್ಪಾಕಾಮತ್, ಮೋನಿಕಾ, ನಿಹಾರಿಕಾ ಶೆಟ್ಟಿ ಮಕ್ಕಳಾಗಿ ನಟಿಸಿದ್ದಾರೆ. ನಿರ್ಮಾಪಕ ರಾಮ್‌ಜಿ ಮಾತನಾಡಿ, ಬದುಕು ಅನಿವಾರ್ಯವಾದಾಗ ಭಾವನೆಗಳಿಗೆ ಬೆಲೆ ಇರಲ್ಲ. ನಮ್ಮ ಜೀವನದಲ್ಲಿ ಬದುಕಾ, ಮೌಲ್ಯಗಳಾ ಅಂತಾ ಬಂದಾಗ ಬದುಕನ್ನೇ ಹೆಚ್ಚಿನವರು ಆಯ್ಕೆ ಮಾಡಿಕೊಳ್ತಾರೆ. ಹೀಗೆ ಮಾನವನ ಜೀವನದ ಕಟು ಸತ್ಯಗಳನ್ನು ಬಿಚ್ಚಿಡುವ ಪ್ರಯತ್ನವನ್ನು 'ಗೌರಿಕಲ್ಯಾಣ'ದಲ್ಲಿ ಮಾಡಿದ್ದೇವೆ ಎಂದರು. ಉತ್ತಮ್‌ಮಧು ಅವರ ನಿರ್ಮಾಣ ಹಾಗೂ ನಿರ್ದೇಶನದ 'ಪವಿತ್ರ ಬಂಧನ' ಸೀರಿಯಲ್ ಕೂಡ ದಿ.27ರ ಮಂಗಳವಾರದಿಂದ ಪ್ರಸಾರ ಆರಂಭಿಸಲಿದೆ. ದೇವ ಸೂರತ್, ಅಮೂಲ್ಯ, ಯಶಸ್, ಅನುಷ್ಕಾರಾವ್, ಅಶೋಕ್ ಹೆಗಡೆ, ರುಹಾನಿ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಈ ಎರಡೂ ಸೀರಿಯಲ್‌ಗಳು ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರ ಆಗಲಿವೆ.

ಸಿನಿಪದಬಂಧ-611



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. 'ಭಾವವೆಂಬ ಹೂವು ಅರಳಿ ಗಾನವೆಂಬ ಗಂಧ ಚೆಲ್ಲಿ...', ಗೀತೆಯ ಚಿತ್ರವಿದು 4
4. ಸಂಗೀತಾಕ್ಷರಗಳನ್ನು ಇರಿಸಿಕೊಂಡಿರುವ ಹಾಸ್ಯನಟ 6
8. ಆತ್ರಿಯ ಮಗ ನೆನಪಾದರೆ ಈ ಪೋಷಕ ನಟ ಪ್ರತ್ಯಕ್ಷ ! 4
9. ಜಯಶ್ರೀ ದೇವಿಯ ಗೆಳೆತನದ ಜಗತ್ತು 4
11. ರವಿಚಂದ್ರನ್, ಬಾಲಾಜಿ ನಿಖಿತಾ ಅಭಿನಯದ 'ಅರಸ' 5
14. ಮುರಳಿ - ಭವ್ಯ ಅಭಿನಯದ ಪ್ರೀತಿಯ ಹಬ್ಬ 4
15. ಅಂಬರೀಷ್ ಸಾಂಸ್ಕೃತಿಕ ನಗರಿಯ ಬುದ್ದಿವಂತ 5
16. ಶಿವಣ್ಣನ ಚಿತ್ರವೊಂದು ಇಲ್ಲಿ ತಿರುಗಿದೆ 2
17. ಕಾಶೀನಾಥ್ ನೀಡಿದ ಪ್ರೀತಿಯ ತರಬೇತಿ 5
18. ಈಕೆ 70-80 ರ ದಶಕದ ಕ್ಯಾಬರೆ ತಾರೆ 2

ಮೇಲಿನಿಂದ ಕೆಳಕ್ಕೆ

1. ಎರಡು ದಿಕ್ಕುಗಳಿಗೆ ಕಲ್ಪನಾ ಅಭಿನಯವಿದೆ 6
2. ಸಖನೊಂದಿಗೆ ಬಂದವಳು 2
3. ಶಂಕರ್ ನಾಗ್ ನ ಕಪ್ಪನೆಯ ಹಾವು 4
5. ಎಡಕಲ್ಲು ಗುಡ್ಡದ ಮೇಲೆ ಜಯಂತಿಗೆ ಕಾಡಿದ ಅಗಲಿಕೆಯ ವೇದನೆ 10
6 ವಿಷ್ಣುವರ್ಧನ್ ವಕೀಲನಾಗಿ ಮಿಂಚಿದ ಚಿತ್ರಕ್ಕೆ ರಾಜ್ಯ ಪ್ರಶಸ್ತಿಯು ಲಭಿಸಿದೆ 9
7. ಬನದ 'ದೇವತೆ' 3
10. ಕಮಲ್ ಹಾಸನ್ ತನ್ನ ಪ್ರಿಯತಮೆ ಶ್ರೀಪ್ರಿಯಳನ್ನು ಕರೆದ ಬಗೆ ! 7
12 ರವಿಚಂದ್ರನ್ - ರಂಭಾ ಅಭಿನಯದ ಚಿತ್ರ 4
13. ನೆನಪಿರಲಿ ಪ್ರೇಮ್ ಒಳ್ಳೆಯ ನಡತೆಯುಳ್ಳವನು 4

ಸಿನಿ ಪದಬಂಧ 610ರ ಉತ್ತರ

ಅ	ಮೃ	ತ	ಬಿಂ	ದು		ರ				ಬಾ
ಮೃ				ರ್ಗ		ಕ್ತ		ಜ		ಳ
ತ		ಆ	ನಂ	ದ	ಜ್ಯೋ	ತಿ		ಗ		ನೌ
ಘ				ಹು		ಲ	ಗ್ನ	ಪ	ತ್ರಿ	ಕೆ
ಳಿ		ಪ್ರೇ		ಲಿ		ಕ		ತಿ		
ಗೆ	ದ್ದ	ಮ	ಗ				ಐ	ರಾ	ವ	ತ
		ಕ್ಕೆ		ಹಾ		ಕಾ		ವ್		ವ
ಪ್ರೇ	ಮ	ಪ	ಲ್ಲ	ವಿ		ಡಿ				ರಿ
ಮಾ		ರ್ಮಿ		ನ	ಯ	ನ	ತಾ	ರಾ		ನ
ಚಾ		ಟ್		ಹೆ		ಬೆಂ				ಸಿ
ರಿ				ಡೆ		ಕಿ	ಲ್ಲ	ರ್	ಡೈ	ರಿ

ವಿಜೇತರು: ಕಮಲಾಕ್ಷಿ, W/O ಮಹದೇವ, ಹೊಂಗನೂರು ಗ್ರಾಮ & ಅಂಚೆ, ಚಾಮರಾಜನಗರ ತಾಲೂಕು ಮತ್ತು ಜಿಲ್ಲೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ
ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ಮೈಸೂರು ಮಿತ್ರ

ಕಾಂಗ್ರೆಸ್ ತೊರೆದು ಸಾ.ರಾ.ಮಹೇಶ್ ಸಮ್ಮುಖದಲ್ಲಿ ಜೆಡಿಎಸ್ ಸೇರಿದ ಕುರುಬ ಸಮಾಜದ ಮುಖಂಡರು

ಸಾಲಿಗ್ರಾಮದಲ್ಲಿ ಆಡಳಿತ ಕುಸಿದಿದೆ, ಶಾಸಕರು ನಮಗೆ ಸ್ಪಂದಿಸುತ್ತಿಲ್ಲ: ಪಕ್ಷ ತೊರೆದವರ ಆರೋಪ

ಭೇರ್ಯ: ಸಾಲಿಗ್ರಾಮ ತಾಲೂಕಿನಲ್ಲಿ ಆಡಳಿತ ವ್ಯವಸ್ಥೆ ಕುಸಿದಿದೆ, ಅಧಿಕಾರಿಗಳು ಜನ ಸಾಮಾನ್ಯರಿಗೆ ಸ್ಪಂದಿಸುತ್ತಿಲ್ಲ, ಸಮಸ್ಯೆಗಳನ್ನು ಕೇಳುತ್ತಿಲ್ಲ. ಈ ಬಗ್ಗೆ ಶಾಸಕರ ಗಮನಕ್ಕೆ ತಂದರೂ ಪ್ರಯೋಜನವಿಲ್ಲ ಎಂದು ಆರೋಪಿಸಿ ಸಾಲಿಗ್ರಾಮ ತಾಲೂಕಿನ ಕುರುಬ ಹಳ್ಳಿ ಗ್ರಾಮದ ಕೆಲ ಮುಖಂಡರು, ಯುವಕರು ಕಾಂಗ್ರೆಸ್ ಪಕ್ಷದಿಂದ ಬೇಸತ್ತು ಮಾಜಿ ಸಚಿವ ಸಾ.ರಾ.ಮಹೇಶ್ ಸಮ್ಮುಖದಲ್ಲಿ ಜೆಡಿಎಸ್ ಸೇರಿ ಶಾಸಕ.ಡಿ.ರವಿಶಂಕರ್ ವಿರುದ್ಧ ಹರಿಹಾಯ್ದರು.

ಕುರುಬಹಳ್ಳಿ ಗ್ರಾಮದ ಕುರುಬ ಸಮುದಾಯದ 35ಕ್ಕೂ ಹೆಚ್ಚು ಮುಖಂಡರು, ಯುವಕರು ಕಾಂಗ್ರೆಸ್ ತೊರೆದು ಇಂದು ಅಧಿಕೃತವಾಗಿ ಜೆಡಿಎಸ್ ಸೇರ್ಪಡೆ ಗೊಂಡರು. ಈ ವೇಳೆ ಮಾತನಾಡಿದ ಮುಖಂಡರು ಸಾಲಿಗ್ರಾಮ ತಾಲೂಕು ಕೇಂದ್ರವಾಗಿದೆ. ಆಸ್ಪತ್ರೆಯಲ್ಲಿ ವೈದ್ಯರಿಲ್ಲ. ಸರಿಯಾಗಿ ಚಿಕಿತ್ಸೆ ದೊರೆಯುತ್ತಿಲ್ಲ. ಆಸ್ಪತ್ರೆ ಬಗ್ಗೆ ಶಾಸಕರಿಗೆ ಕರೆ ಮಾಡಿದರೆ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಾರೆ. ನಾವು ಓಟ್ ಹಾಕಿದ್ದೇವೆ. ಸಮಸ್ಯೆಗಳ ಬಗ್ಗೆ ಪ್ರಶ್ನೆ ಮಾಡುವ ಹಕ್ಕಿದೆ ಆದರೂ ಸರಿಯಾಗಿ ಸ್ಪಂದಿಸದ ಕಾರಣದಿಂದಾಗಿ ನಾವೆಲ್ಲ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುತ್ತಿದ್ದೇವೆ ಎಂದು ಗ್ರಾಮದ ನಾಗೇಶ್, ಚಂದ್ರು, ತಿಮ್ಮೇಗೌಡ ತಿಳಿಸಿದರು.

ಒಳ್ಳೆಯ ಶಾಸಕರೆಂದು ನಂಬಿದ್ದಾಗಿದೆ, ಕುರುಬ ಹಳ್ಳಿ ಗ್ರಾಮಕ್ಕೆ ಮೂರು ವರ್ಷಗಳ ಅವಧಿಯಲ್ಲಿ ಹಬ್ಬದ ಕಾರ್ಯಕ್ರಮಕ್ಕೆ ಬಂದಿದ್ದು ಬಿಟ್ಟರೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ರಸ್ತೆ, ಚರಂಡಿ ಯಾವೊಂದು ಅಭಿವೃದ್ಧಿ ಕಾಮಗಾರಿ ಮಾಡಿಲ್ಲ. ಮಾಜಿ ಸಚಿವ ಸಾ.ರಾ.ಮಹೇಶ್ ಅಣ್ಣ ಅವರು ಶಾಸಕರಾಗಿದ್ದ ವೇಳೆ ಹದಿನೈದು ವರ್ಷಗಳಲ್ಲಿ ಅಧಿಕಾರಿಗಳು ಈ ರೀತಿ ನಡೆದು ಕೊಂಡಿಲ್ಲ, ಅಧಿಕಾರಿಗಳು ಮಹೇಶಣ್ಣ ಅವರಿಗೆ ಹೆದರುತ್ತಿದ್ದರು. ಈಗ ಅಧಿಕಾರಿಗಳಿಗೆ ಯಾವ ಹೆದರಿಕೆ ಇಲ್ಲದಂತಾಗಿದೆ ಎಂದು ದೂರಿದರು.

ಒಂದು ಚಿಕ್ಕ ಮಗುವಿನ ಆಧಾರ್ ಕಾರ್ಡ್ ಮಾಡಿಸಲು ಬೆಳಗ್ಗೆಯಿಂದ ಸಂಜೆವರೆಗೂ ಕಾದರೂ ಪ್ರಯೋಜವಾಗುತ್ತಿಲ್ಲ, ಇನ್ನೂ ತಾಲೂಕು ಕಚೇರಿಯಲ್ಲಿ ಮರಣ ಪ್ರಮಾಣ ಪತ್ರ ಪಡೆಯಲು ಅಲೆದಾಟ ತಪ್ಪಿಲ್ಲ, ಇನ್ನೂ ಕೆಇಬಿ ಕಚೇರಿಯಲ್ಲಿ ಹಣ ನೀಡಿದರೆ ಮಾತ್ರ ಕೆಟ್ಟು ಹೋದ ವಿದ್ಯುತ್ ಪರಿವರ್ತಕಗಳನ್ನು ರಿಪೇರಿ ಮಾಡಿಸುತ್ತಾರೆ. ಇದು ಸಾಲಿಗ್ರಾಮ ತಾಲೂಕಿನ ವ್ಯವಸ್ಥೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಎಳೆ ಎಳೆಯಾಗಿ ತಿಳಿಸಿದರು.

ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಕೊನೆ ಹಂತದಲ್ಲಿರುವ ರೈತರ ಜಮೀನುಗಳಿಗೆ ನಾಲೆ ನೀರು ತಲುಪದ ಕಾರಣದಿಂದ ಎಲ್ಲಾ ನಾಲೆಗಳಿಗೂ ಸಿಮೆಂಟ್ ಕಾಂಕ್ರೀಟ್ ಮೂಲಕ ಲೈನಿಂಗ್ ಕಾಮಗಾರಿ ಮಾಡಿಸಿದ್ದರಿಂದ ಎಲ್ಲ ರೈತರು ಯಾವುದೇ ಗಲಾಟೆ, ಘರ್ಷಣೆ ಇಲ್ಲದೆ ಬೆಳೆ ಬೆಳೆಯುತ್ತಿದ್ದಾರೆ ಎಂದು ತಿಳಿಸಿದರು.

ಸೇರ್ಪಡೆಯಾದವರು: ಮಾಜಿ ಛೇರ್ಮನ್ ತಿಮ್ಮೇಗೌಡರ ಮಗ ಚಂದ್ರು, ಯಜಮಾನ್ ತಿಮ್ಮೇಗೌಡ, ಕೆ.ಬಿ.ಯೋಗೇಶ್, ನಾಗೇಶ್, ರಂಗನಾಥ್, ವರದರಾಜು, ರಾಮು, ಲೋಕೇಶ್, ಉದಯ್, ಶರತ್, ಸಚಿನ್, ಮನು, ರಾಮೇಗೌಡ, ಅಶೋಕ, ಮಹದೇವ, ಜಯಣ್ಣ, ರೇವಣ್ಣ, ಕೀರ್ತಿ, ಶಿವಣ್ಣ, ದರ್ಶನ್, ಧನು, ಪವನ್, ರಾಕೇಶ್, ಧನಂಜಯ, ದರ್ಶನ್, ಕಾಂತ, ಮಂಜ, ಶಂಭೂಗೌಡ, ರಂಗೇಗೌಡ, ರಮೇಶ್, ದೇವರಾಜು, ಕೆ.ಎಸ್.ಚಂದ್ರು, ಸ್ವಾಮೀಗೌಡ, ಕೆ.ಎಸ್. ಯೋಗೇಶ್ ಕಾಂಗ್ರೆಸ್ ತೊರೆದು ಇಂದು ಅಧಿಕೃತವಾಗಿ ಜೆಡಿಎಸ್ ಸೇರ್ಪಡೆಯಾದರು.

ಕಾರ್ಯಕ್ರಮದಲ್ಲಿ ತಾ.ಪಂ ಮಾಜಿ ಅಧ್ಯಕ್ಷ ತಂದ್ರೆ ರವಿ, ಗ್ರಾ.ಪಂ. ಸದಸ್ಯರಾದ ಕೆ.ವಿ.ಕುಮಾರ್, ಗೌತಮ್ ಮೇಲೂರು, ಮಾಜಿ ಸದಸ್ಯರಾದ ಗೋವಿಂದೇಗೌಡ, ಕಳ್ಳಿಮುದ್ದನಹಳ್ಳಿ ಅಮಿತ್,ಅಂಕನಹಳ್ಳಿ ಗ್ರಾ.ಪಂ.ಅಧ್ಯಕ್ಷ ತಮ್ಮಣ್ಣೇಗೌಡ, ಅಂಕನಹಳ್ಳಿ ಡೈರಿ ಅಧ್ಯಕ್ಷ ಜನಾರ್ಧನ್, ಕುರುಬಹಳ್ಳಿ ನಿಂಗಪ್ಪಶೆಟ್ಟಿ,, ಜೆಡಿಎಸ್ ಮುಖಂಡರಾದ ಡಿ.ವಿ.ಗುಡಿ ಪೂರ್ಣಿಮಾ ಪ್ರಸನ್ನ, ಮಿರ್ಲೆ ಎಂ.ಆರ್.ನಾಗೇಶ್, ಬಾಲೂರು ಕೃಷ್ಣೇಗೌಡ ಮೊದಲಾದವರು ಇದ್ದರು.



ತಮ್ಮನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರ ನೀಡಿ ಅಭಿನಂದಿಸಿದರು.

> ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಕುರುಬ ಸಮುದಾಯದ ಮೂವತ್ತೈದು ಮುಖಂಡರು, ಯುವಕರಿಗೆ ಶಾಲು ಹೊದಿಸಿ ಹಾರಹಾಕಿ ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿ ಹಾರಂಗಿ ನಾಲೆಯ ನೀರು ಬೂದನೂರು ಹಳ್ಳದವರೆಗೆ ಮಾತ್ರ ಹರಿಯುತ್ತಿತ್ತು. ನಾನು ಶಾಸಕನಾದ ಮೇಲೆ ಮುಕ್ಕನಹಳ್ಳಿ ಕೆರೆಯಿಂದ ಏತ ನೀರಾವರಿ ಮೂಲಕ ಹಾರಂಗಿ ನಾಲೆ ಮೂಲಕ ಮೇಲೂರು, ಬಾಚಹಳ್ಳಿ, ಕೊಡಿಯಾಲ ಮೂಲಕ ಕೊನೆ ಹಂತ ಬಟಿಗನಹಳ್ಳಿ ಗ್ರಾಮದವರೆವಿಗೂ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಲಾಗುತ್ತಿತ್ತು. ನಾಲೆಯ ನೀರು ಹರಿಯುವಾಗ ಕೆಲವರು ಭತ್ತ, ತರಕಾರಿ ಬೆಳೆಯುತ್ತಾರೆ ಎಂದರು.

ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಯ ವಾರ್ಷಿಕೋತ್ಸವ

ತಿ.ನರಸೀಪುರದಲ್ಲಿ ಶ್ರೀ ರಾಮನ ಆರಾಧನೆ, ಸಂಭ್ರಮಾಚರಣೆ



ತಿ.ನರಸೀಪುರ,ಜ.22–ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಯ 2ನೇ ವಾರ್ಷಿಕೋತ್ಸವದ ಅಂಗವಾಗಿ ಪಟ್ಟಣದಲ್ಲಿ ವಿಶೇಷ ಪೂಜಾ ಕಾರ್ಯಕ್ರಮದೊಂದಿಗೆ ಶ್ರೀರಾಮನನ್ನು ಆರಾಧಿಸಲಾಯಿತು.

ಪಟ್ಟಣದ ಚಿಕ್ಕ ಅಂಗಡಿ ಬೀದಿಯ ಶಿವ ಶಾಮಿಯಾನ ಬಳಿ ಶ್ರೀರಾಮ ಸ್ನೇಹ ಬಳಗದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀರಾಮ ಬಳಗದ ಸ್ನೇಹಿತರೆಲ್ಲರೂ ಸೇರಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಹಾಗೂ ಶ್ರೀರಾಮದೇವರ ಪ್ರತಿಷ್ಠಾಪನೆಯಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶ್ರೀರಾಮನ ಫೋಟೋಗೆ ಪುಷ್ಪಾರ್ಚನೆ ಹಾಗು ಮಂಗಳಾರತಿ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಸಾರ್ವಜನಿಕರಿಗೆ ಪಾನಕ ಮಜ್ಜಿಗೆ ಹಾಗು ರೈಸ್ ಬಾತ್ ವಿತರಿಸಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಯಜಮಾನ ಪ್ರಕಾಶ್ ಅಯೋಧ್ಯೆಯಲ್ಲಿ ಶ್ರೀರಾಮದೇವರ ಪ್ರತಿಷ್ಠಾಪನೆಯಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸಂಭ್ರಮಾಚಿರಿಸಬೇಕೆಂಬ ಉದ್ದೇಶದೊಂದಿಗೆ ಸ್ನೇಹಿತರೆಲ್ಲರೂ ಸೇರಿ ಸ್ನೇಹ ಬಳಗದ ಮೂಲಕ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಯಾವುದೇ ಜಾತಿ ಭೇದಗಳಿಲ್ಲದೇ ಎಲ್ಲ ಸಮುದಾಯದವರೂ ಒಗ್ಗೂಡಿ ಕಳೆದ ವರ್ಷದಿಂದ ಪೂಜಾ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದೇವೆ. ಆರಾಧನೆ ಮತ್ತು ಪೂಜಾ ಕಾರ್ಯಕ್ರಮಗಳಿಂದ ಸರ್ವರಿಗೂ ಒಳ್ಳೆಯದಾಗಲಿ, ಎಲ್ಲರೂ ಸುಖ ಶಾಂತಿ ಆರೋಗ್ಯದಿಂದ ಬದುಕು ಸಾಗಿಸಲಿ ಎಂಬುದು ಸ್ನೇಹಬಳಗದ ಆಶಯವಾಗಿದ್ದು, ಶ್ರೀರಾಮ ಎಲ್ಲರಿಗೂ ಒಳಿತನ್ನು ಮಾಡುವಂತಾಗಲಿ ಎಂದು ಆಶಿಸಿದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಟಿಎಸ್ ಶಾಂತರಾಜು(ಜಿಪ್ಪಿ) ಶಾಮಿಯಾನ ಶಿವರಾಜು, ಪುರಸಭಾ ಮಾಜಿ ಸದಸ್ಯರಾದ ನೈಸ್ ಮಹದೇವಸ್ವಾಮಿ, ಪ್ರಕಾಶ್, ಗಾಣಿಗರ ಸಂಘದ ಅಧ್ಯಕ್ಷ ಆಲಗೋಡು ರಾಮಚಂದ್ರು, ಕುಂಬಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಕೇತಹಳ್ಳಿ ರಾಜಣ್ಣ, ರುದ್ರಣ್ಣ, ನಾಗರಾಜು, ನಿವೃತ್ತ ಶಿಕ್ಷಕ ಪ್ರಕಾಶ್, ಸೋಸಲೆ ಶಂಕರ್, ಸ್ವಾಮಿ, ಬಸವಣ್ಣ, ಹೋಟೆಲ್ ನಾಗರಾಜು, ರಮೇಶ್, ಮೀನಿನ ನಾಗಣ್ಣ, ಮೆಕ್ಯಾನಿಕ್ ರಂಗಸ್ವಾಮಿ, ಸುಂದರ್, ಟೈಲರ್ ರಾಮು, ಪುಟ್ಟಣ್ಣ ಹಾಜರಿದ್ದರು.

ಇಂದು ರೇಣುಕಾ ಯಲ್ಲಮ್ಮ ತಾಯಿ ದೇವಸ್ಥಾನದ ವಾರ್ಷಿಕೋತ್ಸವ



ಹೆಚ್.ಡಿ.ಕೋಟೆ: ಪಟ್ಟಣದಲ್ಲಿರುವ ರೇಣುಕಾ ಯಲ್ಲಮ್ಮ ತಾಯಿ ದೇವಸ್ಥಾನದ 19ನೇ ವರ್ಷದ ವಾರ್ಷಿಕೋತ್ಸವ, ತಂಪು ಪೂಜೆ ಹಾಗೂ ವಿಶೇಷ ಪೂಜಾ ಮಹೋತ್ಸವವನ್ನು ಜ.23 ರಂದು ಆಚರಿಸಲಾಗುವುದು ಎಂದು ರೇಣುಕ ಯಲ್ಲಮ್ಮ ತಾಯಿ ದೇವಸ್ಥಾನ ಸಮಿತಿ ಟೌನ್ ಅಧ್ಯಕ್ಷ ಅನಿಲ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಬೆಳಿಗ್ಗೆ 7ಕ್ಕೆ ಪಟ್ಟಣದಲ್ಲಿ ಹರಿಯುವ ತಾರಕ ಜಲಾಶಯಕ್ಕೆ ಹೊಂದಿಕೊಂಡಂತಿರುವ ರಾಮಲಿಂಗೇಶ್ವರ ದೇವಾಲಯದ ಅಶ್ವಥ್ ಕಟ್ಟೆಯ ಬಳಿಯಿಂದ ತಂಪಿನ ಪೂಜೆಯ ಮೆರವಣಿಗೆ ಹೊರಟು ಯಲ್ಲಮ್ಮ ತಾಯಿ ದೇವಾಲಯ ತಲುಪಲಿದೆ. ಮೆರವಣಿಗೆಯಲ್ಲಿ ಮಂಗಳವಾದ್ಯ, ವೀರಗಾಸೆ ಮೆರಗು ತುಂಬಲಿವೆ. ಬೆಳಿಗ್ಗೆಯಿಂದಲೇ ಗಣಪತಿ ಹೋಮ, ಪುಣ್ಯಾಹ, ಪಂಚಗವ್ಯ, ನವಗ್ರಹ ಪೂಜೆ, ಪ್ರಧಾನ ಹೋಮ, ಪೂರ್ಣಾಹುತಿ, ಅಭಿಷೇಕ, ವಿಶೇಷ ಅಲಂಕಾರ ಜರುಗಲಿದ್ದು ಮಧ್ಯಾಹ್ನ12 ಕ್ಕೆ ಮಹಾ ಮಂಗಳಾರತಿ ಜರುಗಲಿದೆ ಎಂದರು.

ಆ ಬಳಿಕ 4 ಸಾವಿರ ಭಕ್ತರಿಗೆ ಪ್ರಸಾದ ವಿನಿಯೋಗವಿರಲಿದೆ ಎಂದರು. ಆರ್ಯ ಈಡಿಗ ಸಮಾಜ ಮತ್ತು ದೇವಾಲಯ ಸಮಿತಿಯ ವತಿಯಿಂದ ಈ ಎಲ್ಲಾ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಬಿ.ರಾಜು, ಖಜಾಂಚಿ, ಬಿ. ಶಂಕರ್, ಕಾರ್ಯದರ್ಶಿ ಸಂತೋಷ್, ನಿರ್ದೇಶಕರಾದ ಮಧುಸೂದನ್, ಜಿ.ಸುರೇಶ್, ಮಂಜು ಇದ್ದರು.

ತಕ್ಷಣ ಜನರ ಕೆಲಸ ಮಾಡಿಕೊಡಿ, ಕಚೇರಿಗೆ ಅಲೆದಾಡಿಸಬೇಡಿ

ಜನಸ್ಪಂದನಾ ಸಭೆಯಲ್ಲಿ ಸಂಸದ ಸುನಿಲ್ ಬೋಸ್ ಸೂಚನೆ



ನಂಜನಗೂಡು: ಜನಸ್ಪಂದನಾ ಸಭೆಯಲ್ಲಿ ಸಾರ್ವಜನಿಕರು ನೀಡಿದ ಅರ್ಜಿಗಳನ್ನು ಶೀಘ್ರದಲ್ಲಿ ವಿಲೇವಾರಿ ಮಾಡಿ ಅವರ ಸಮಸ್ಯೆ ಬಗೆಹರಿಸಿ. ಬಡವರು, ರೈತರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಬಂದಾಗ ಅವರ ಕೆಲಸ ಮಾಡಿಕೊಡಿ, ಸಲ್ಲದ ಸಬೂಬು ಹೇಳಿ ಕಚೇರಿಗೆ ಅಲೆಯುವಂತೆ ಮಾಡಬೇಡಿ ಎಂದು ಸಂಸದ ಸುನೀಲ್ ಬೋಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಗುರುವಾರ ನಡೆದ ಜನ ಸ್ಪಂದನ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಮ್ಮಾವು ಹುಂಡಿ ಬಳಿಯ ಸಾಬರ ಹುಂಡಿ ಗ್ರಾಮಸ್ಥೆ ಆಯಿಷಾ ಸಬ್ಬೀರ್ ಮಾತನಾಡಿ ಇಮ್ಮಾವು ಕೈಗಾರಿಕಾ ಪ್ರದೇಶ ವ್ಯಾಪ್ತಿಯ 56 ಎಕರೆ ಪ್ರದೇಶದಲ್ಲಿ 1969 ರಿಂದ 30ಕ್ಕೂ ಹೆಚ್ಚು ಕುಟುಂಬಗಳ 80 ಕ್ಕೂ ಹೆಚ್ಚು ಮಂದಿ ಭೂಸ್ವಾದೀನದಲ್ಲಿದ್ದು, ಉಳುಮೆ ಮಾಡಿ ಜೀವನ ನಡೆಸುತ್ತಿದ್ದೇವೆ, ಚಿತ್ರನಗರಿ ನಿರ್ಮಿಸಲು ಕೆಐಡಿಬಿಯವರು ನಮ್ಮ 56 ಎಕರೆ ಜಮೀನನ್ನು ಭೂಸ್ವಾದೀನ ಪಡಿಸಿಕೊಂಡು ನಮಗೆ ಪರಿಹಾರ ಅಥವಾ ಬದಲಿ ಜಮೀನು ನೀಡಿಲ್ಲ, ಚಿತ್ರನಗರಿ ನಿರ್ಮಾಣಕ್ಕಾಗಿ ತೋಟದಲ್ಲಿ ಬೆಳೆದಿದ್ದ ಫಸಲನ್ನು ನಾಶ ಮಾಡಿದ್ದಾರೆ, ನಮ್ಮನ್ನು ಒಕ್ಕಲೆಬ್ಬಿಸುತ್ತಿದ್ದಾರೆ, ಜಮೀನು ಕಳೆದುಕೊಂಡು ಸಂತ್ರಸ್ತರಾಗಿರುವ ನಮಗೆ ಬದಲಿ ಜಮೀನು ಕೊಡಿಸಿ ಎಂದು ಮನವಿ ಮಾಡಿದರು.

ಕಂದಾಯ ಅಧಿಕಾರಿ ಸರ್ವೇಶ್ ಮಾತನಾಡಿ ಜಮೀನು ಸರ್ಕಾರಕ್ಕೆ ಸೇರಿದ್ದು, ಇವರ ಬಳಿ ಸ್ವತ್ತಿನ ದಾಖಲೆಗಳಿಲ್ಲ, ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದೆ, ಕಾಲಾವಕಾಶ ನೀಡಿದರೆ ಸಂತ್ರಸ್ತ ಕುಟುಂಬಗಳ ವಾಸಕ್ಕಾಗಿ ಏಷ್ಯನ್ ಪೇಂಟ್ ಬಳಿ ಬಿ ಖರಬ್ ಜಾಗ ಗುರ್ತಿಸಿಕೊಡಲಾಗುವುದು ಎಂದು ಹೇಳಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ ಪ್ರಕರಣ ಗೊಂದಲಮಯವಾಗಿದೆ, ಪರಿಶೀಲಿಸಿ, ಸಂತ್ರಸ್ತ ಕುಟುಂಬಗಳಿಗೆ ವಾಸ ಮಾಡಲು ಜಾಗ ಗುರ್ತಿಸಿ ವರದಿ ನೀಡುವಂತೆ ಕಂದಾಯ ಅಧಿಕಾರಿಗೆ ತಿಳಿಸಿದರು.

ಕತ್ವಾಡಿಪುರ ಶಿವಣ್ಣ ಮಾತನಾಡಿ ಹುಲ್ಲಹಳ್ಳಿ ನಾಲೆಯಲ್ಲಿ ಹೂಳು ತುಂಬಿಕೊಂಡಿದ್ದು, ಕಲ್ಲಹಳ್ಳಿ–ಕತ್ವಾಡಿಪುರ ಗ್ರಾಮಗಳ 40 ಎಕರೆ ಪ್ರದೇಶಕ್ಕೆ ನಾಲೆಯ ನೀರು ತಲುಪುತ್ತಿಲ್ಲ, ಅನುದಾನ ಬಿಡುಗಡೆ ಮಾಡಿ ನಾಲೆಯ ಹೂಳು ತೆಗೆಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಕಾವೇರಿ ನೀರಾವರಿ ನಿಗಮ ಸಹಾಯಕ ಅಭಿಯಂತರ ಗುರುಪ್ರಸಾದ್ ಮಾತನಾಡಿ ಅನುದಾನ ಬಿಡುಗಡೆಯಾಗಿದೆ, ಟೆಂಡರ್ ಕರೆಯಲಾಗಿದೆ, ಒಂದು ವಾರದೊಳಗೆ ಹುಲ್ಲಹಳ್ಳಿ ನಾಲೆ ಹೂಳು ತೆಗೆಯುವ ಕಾರ್ಯ ನಡೆಸಲಾಗುತ್ತದೆ ಎಂದು ಹೇಳಿದರು.

ಗ್ರಾಮಾಂತರ ಪ್ರದೇಶದ ಜನ ತಮ್ಮ ದಿನದ ಕೂಲಿ ಬಿಟ್ಟು ತಮ್ಮ ಜಮೀನಿಗೆ ಸಂಬಂದಿಸಿದ ಸಮಸ್ಯೆ ಬಗೆಹರಿಸಿಕೊಳ್ಳಲು ಬಂದಿರುತ್ತಾರೆ, ಸರ್ಕಾರಿ ಅಧಿಕಾರಿಗಳು ಯಾರ ಶಿಫಾರಸ್ಸಿನಿಂದಾದರೂ ಬಂದಿರಲಿ ಜನರ ಕೆಲಸ ಮಾಡಬೇಕು, ಅಧಿಕಾರಿಗಳು ಸಮಸ್ಯೆಯನ್ನು ಬಗೆಹರಿಸುವ ಬದಲು ಸಮಸ್ಯೆ ಸೃಷ್ಟಿಸುತ್ತಿದ್ದಾರೆ, ಅಧಿಕಾರಿಗಳು ರಾಜಕೀಯ ಮಾಡುತ್ತಿದ್ದಾರೆ. ರಾಜಕೀಯ ಮಾಡಲು ನಾವಿದ್ದೇವೆ, ಒಂದು ವೇಳೆ ರಾಜಕೀಯ ಮಾಡುವುದಾದರೆ ಕೆಲಸಕ್ಕೆ ರಾಜಿನಾಮೆ ಕೊಟ್ಟು ರಾಜಕೀಯ ಪ್ರವೇಶ ಮಾಡಿ,ರಾಜಕೀಯ ಮಾಡಿ, ಜನರ ಸಮಸ್ಯೆಗೆ ಸ್ಪಂದಿಸದ ಅಧಿಕಾರಿಗಳಿಗೆ ಕ್ಷಮೆ ಇಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಯಕ ಸಮಾಜಗಳ ಮುಖಂಡ ಎನ್.ವಿ.ಗಿರೀಶ್ ತಾಲೂಕಿನಲ್ಲಿ ಹಿಂದೂಳಿದ ಕಾಯಕ ಸಮಾಜಗಳಾದ ಈಡಿಗ, ಕುಂಬಾರ, ಮಡಿವಾಳ, ವಿಶ್ವಕರ್ಮ, ಸವಿತ,ಬಾವಸಾರ್, ಗಾಣಿಗ, ಗೆಜ್ಜಗಾರ, 24 ಮನೆ ತೆಲುಗಿ ಶೆಟ್ಟಿ ಸಮಾಜಗಳ ಸಮುದಾಯ ಭವನ ನಿರ್ಮಾಣಕ್ಕಾಗಿ ಅನುದಾನ ನೀಡುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಸ್ಮಿತಾ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ತಾ.ಪಂ. ಇಒ ಜೆರಾಲ್ಡ್ ರಾಜೇಶ್, ಕುರಹಟ್ಟಿ ಮಹೇಶ್, ಇಂದನ್ ಬಾಬು, ಶ್ರೀಕಂಠಸ್ವಾಮಿ ಇದ್ದರು.

ತಿ.ನರಸೀಪುರದಲ್ಲಿ ಅನ್ನ ಸಂತರ್ಪಣೆ



ತಿ.ನರಸೀಪುರ ಪಟ್ಟಣದ ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ಶಿವಾನಂದ ಶರ್ಮರ 115ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಜ.22– ನಾಡಿಗೆ ಜ್ಞಾನ ಹಾಗೂ ಶಿಕ್ಷಣ ದಾಸೋಹದ ಮಹತ್ವ ಸಾರಿದ ಮಹಾನ್ ವ್ಯಕ್ತಿಗಳಲ್ಲಿ ಶಿವಾನಂದ ಶರ್ಮ ಅವರ ಕೊಡುಗೆ ಅಪಾರ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ತಿಳಿಸಿದರು.

ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದಲ್ಲಿ ಭಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಿ ಬಡಿಸುವ ಮೂಲಕ ಅವರ ಶಿವಾನಂದ ಶರ್ಮರ 115ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿ ಮಾತನಾಡಿದರು.

ಸಮಾಜಕ್ಕಾಗಿ ಜೀವ ಸವೆಸಿದ ಮಹಾನ್ ಪುರುಷರು. ಶಿಕ್ಷಣ ಕೆಲವರ ಸ್ವತ್ತಲ್ಲ ಹಲವರ ಸ್ವತ್ತು ಎಂಬುದನ್ನು ಸಾಬೀತು ಪಡಿಸಲು ಗ್ರಾಮೀಣ ಭಾಗದಲ್ಲೂ ಶಿಕ್ಷಣ ಮತ್ತು ದಾಸೋಹಕ್ಕೆ ಒತ್ತು ಕೊಟ್ಟವರು ಶಿವಾನಂದ ಶರ್ಮರು ಎಂದರು. ಮದ್ಯ ವರ್ತಕರ ಸಂಘದ ಕೆ ವಾಸುದೇವ್, ರಿಯಲ್ ಎಸ್ಟೇಟ್ ರಾಜೇಂದ್ರ ಪ್ರಸಾದ್, ರಂಗನಾಥ ಬಾರ್ ಮಾಲೀಕ ರಾಜು, ಖಾಸಗಿ ಬಸ್ ಏಜೆಂಟ್ ಸಂಘದ ಕಾರ್ಯದರ್ಶಿ ರಾಜಣ್ಣ, ಕುಮಾರ, ಚೌವಳ್ಳಿ ಅಡಿಗೆ ರಾಜು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಹುಣಸೂರಿನಲ್ಲಿ ಉಚಿತ ಕಣ್ಣಿನ ತಪಾಸಣೆ, ಮಧುಮೇಹ ಶಿಬಿರದಲ್ಲಿ 161 ಮಂದಿಗೆ ಚಿಕಿತ್ಸೆ



ಹುಣಸೂರು, ಜ.22– ಮೈಸೂರು ಜಿಲ್ಲಾ ಅಂದತ್ವ ನಿಯಂತ್ರಣ ಸಂಸ್ಥೆ, ಹುಣಸೂರಿನ ಸದೃಢ ಚಾರಿಟಬಲ್ ಟ್ರಸ್ಟ್ ಹಾಗೂ ಹುಣಸೂರು ಕ್ಲಬ್ ಸಹಯೋಗದಲ್ಲಿ ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆಯವರು ಹುಣಸೂರು ಕ್ಲಬ್‌ನಲ್ಲಿ ಉಚಿತ ಕಣ್ಣಿನ ತಪಾಸಣೆ, ಮಧುಮೇಹ ಹಾಗೂ ರಕ್ತದ ಒತ್ತಡ ಪರೀಕ್ಷೆಗಳನ್ನು ನಡೆಸಿದರು.

ಹುಣಸೂರು ಕ್ಲಬ್‌ನ ಅಧ್ಯಕ್ಷ ಹಾಗೂ ಹಿರಿಯ ವಕಿಲರಾದ ಎಂ.ಬಿ.ಚರಮಣ್ಣ ಅವರು ಫಲಾನುಭವಿಯೊಬ್ಬರಿಗೆ ಕನ್ನಡಕ ತೊಡಿಸುವ ಮೂಲಕ ಕಣ್ಣಿನ ಉಚಿತ ತಪಾಸಣ ಶಿಬಿರಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ಮನುಷ್ಯನಿಗೆ ಅತಿ ಮುಖ್ಯವಾದ ಅಂಗ ಕಣ್ಣು, ಇಡಿ ಜಗತ್ತನ್ನೆ ನೋಡುವ ಕಣ್ಣು ಮನುಷ್ಯನಿಗೆ ಅತೀ ಮುಖ್ಯವಾದ ಅಂಗವಾಗಿದ್ದು ಇದನ್ನು ಎಲ್ಲರು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು ಅಲ್ಲದೆ ನಲವತ್ತು ವರ್ಷಗಳ ನಂತರ ಕಣ್ಣಿನ ದೃಷ್ಟಿ ಸ್ವಲ್ಪ ಸ್ವಲ್ಪವಾಗಿ ಕ್ಷೀಣಿಸುತ್ತ ಬರುತ್ತದೆ, ಅದಕ್ಕಾಗಿ ವೈದ್ಯರ ಸಲಹೆಗಳನ್ನು ಪಡೆದು ಜೋಪಾನವಾಗಿ ಕಾಪಾಡಿಕೊಂಡರೆ ಮತ್ತಷ್ಟು ವರ್ಷಗಳ ಕಾಲ ದೃಷ್ಟಿಯನ್ನು ಕಾಪಾಡಿಕೊಳ್ಳಬಹುದು. ಅದಕ್ಕಾಗಿ ನಮ್ಮ ಕ್ಲಬ್‌ನಲ್ಲಿ ಪ್ರತಿ ತಿಂಗಳು ಕಣ್ಣಿನ ಉಚಿತ ತಪಾಸಣ ಶಿಬಿರವನ್ನು ನಡೆಸುತ್ತಿದ್ದೇವೆ. ತಾವುಗಳು ಮತ್ತು ತಮ್ಮ ನೆರೆಹೊರೆಯವರನ್ನು ಕರೆತಂದು ಈ ಶಿಬಿರದ ಉಪಯೋಗವನ್ನು ಪಡೆದುಕೊಳ್ಳಿ ಎಂದರು. ಈ ಹಿಂದೆ ನಡೆದ ಶಿಬಿರದಲ್ಲಿ 161 ಜನ ಫಲಾನುಭವಿಗಳು ಉಚಿತ ತಪಾಸಣೆಯಲ್ಲಿ ಪಾಲ್ಗೊಂಡಿದ್ದು, 103 ಜನ ಶಸ್ತ್ರಚಿಕಿತ್ಸೆಗೆ ಅಯ್ಕೆಯಾಗಿದ್ದು, ಇಂದು 70 ಜನರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ ಉಳಿದ 33 ಜನರನ್ನು ನಾಳೆ ಕರೆದುಕೊಂಡು ಹೋಗಲಿದ್ದಾರೆ ಎಂದು ಕ್ಲಬ್ಬಿನ ಪ್ರಧಾನ ಕಾರ್ಯದರ್ಶಿ ಎಸ್. ಜಯರಾಂ ತಿಳಿಸಿದರು.

ಅಲ್ಲದೆ ಕಳೆದ ತಿಂಗಳು 5 ಮತ್ತು 16 ರಂದು ನಡೆದ ಶಿಬಿರಗಳಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ 140 ಜನ ಫಲಾನುಭವಿಗಳಿಗೆ ಇಂದು ಕನ್ನಡಕವನ್ನು ವಿತರಿಸಲಾಯಿತು. ಇಂದಿನ ಶಿಬಿರದಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಕ್ಲಬ್ ವತಿಯಿಂದ ಉಪಹಾರವನ್ನು ಏರ್ಪಡಿಸಲಾಗಿತ್ತು ಎಂದರು. ಶಿಬಿರದಲ್ಲಿ ಬಂಗಾರುವೆಂಕಟೇಶ್, ಚಂದ್ರಶೇಖರ್, ನಾಗರಾಜು, ಮಲ್ಲೇಶ್, ಸ್ವಾಮಿಗೌಡ, ಆಶೋಕ ಇತರರಿದ್ದರು.

ಇಂದಿನಿಂದ ಬಾಚಳ್ಳಿಯಲ್ಲಿ ಆಂಜನೇಯ ಸ್ವಾಮಿ ಜಾತ್ರೆ

ಹುಣಸೂರು, ಜ.22– ಹುಣಸೂರಿಗೆ ಸಮೀಪದ ಬಾಚಳ್ಳಿ ಗ್ರಾಮದಲ್ಲಿ ಜ.23 ರಿಂದ 26ರವರೆಗೆ ನಾಲ್ಕು ದಿನಗಳ ಕಾಲ ಶ್ರೀಆಂಜನೆಯ ಸ್ವಾಮಿಯ 74ನೇ ವರ್ಷದ ಜಾತ್ರಾ ಮಹೋತ್ಸವ ಮತ್ತು ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ. ಶ್ರೀಅಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಅಯೋಜಿಸಿರುವ 74ನೇ ವರ್ಷದ ಜಾತ್ರಾ ಮಹೋತ್ಸವವು ಜ.23 ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಗಣಪತಿ ಹೋಮ ಮತ್ತು ಸ್ವಾಮಿಗೆ ವಿಶೇಷ ಪೂಜೆ ನಡೆಯಲಿದೆ. ಜ.24 ರಂದು ಸ್ವಾಮಿಗೆ ವಿಶೇಷ ಪೂಜೆ ಹಾಗೂ ಸಂಜೆ 7ಕ್ಕೆ ಮಂಟಪೋತ್ಸವ ನಡೆಯಲಿದೆ.

ಮಹದೇಶ್ವರ ಸ್ವಾಮಿ ಜಾತ್ರೆಗೆ ಸೌದೆ ಸಂಗ್ರಹ



ಜಯಪುರ, ಜ.22– ಮೈಸೂರು ತಾಲ್ಲೂಕು ಜಯಪುರ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ.ಜೇಡಿಕಟ್ಟೆ ಮಹದೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆ ಕೊಂಡೋತ್ಸವಕ್ಕೆ ಬರಡನಪುರ ಮತ್ತು ಮಾವಿನಹಳ್ಳಿ ಗ್ರಾಮಸ್ಥರು ಐದು ಎತ್ತಿನ ಗಾಡಿಗಳಲ್ಲಿ ಖಗ್ಗಲಿ ಸೌದೆಯ ರಾಶಿಯನ್ನು ದೇವಾಲಯ ಆವರಣಕ್ಕೆ ತಂದು ಜೋಡಿಸಿದರು.

ಫೆಬ್ರವರಿ 23 ಮತ್ತು 24 ರಂದು ಎರಡು ದಿನಗಳ ಕಾಲ ಜಾತ್ರೆ ನಡೆಯಲಿದ್ದು, ಕೊಂಡೋತ್ಸವಕ್ಕೆ ಒಂದು ತಿಂಗಳು ಮುಂದಾಗಿಯೇ ಖಗ್ಗಲಿ ಸೌದೆಯನ್ನು ತಂದು ಶೇಖರಿಸುವುದು ವಾಡಿಕೆ. ಬರಡನಪುರ ಗ್ರಾಮದಿಂದ 3 ಎತ್ತಿನ ಗಾಡಿ, ಮಾವಿನಹಳ್ಳಿ ಗ್ರಾಮದಿಂದ 2 ಎತ್ತಿನ ಗಾಡಿಗಳಲ್ಲಿ ಸೌಧೆ ತುಂಬಿಕೊಂಡು ದಾರಿಯುದ್ದಕ್ಕೂ ಉಘೇ ಮಾದಪ್ಪ,, ಉಘೇ ಮಾದಪ್ಪ ಎಂಬ ಜಯಘೋಷಗಳನ್ನು ಕೂಗಿಕೊಂಡು ದೇವಾಲಯ ಆವರಣಕ್ಕೆ ಬಂದರು.

ಮಹದೇಶ್ವರ ಸ್ವಾಮಿಗೆ ಮಹಾ ಮಂಗಳಾರತಿ ನೆರವೇರಿಸಿದ ನಂತರ ದೇವಾಲಯಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ತುಪ್ಪದ ಕಜ್ಜಾಯ ಸಿಹಿ ಊಟ ಅನ್ನ ಸಂತರ್ಪಣೆ ಮಾಡಿದರು. ಜಯಪುರ ಪೊಲೀಸ್ ಠಾಣೆ ಪಿಸಿಐ ಕಾಳೇಗೌಡ ಅವರು ದೇವಾಲಯಕ್ಕೆ ಭೇಟಿ ನೀಡಿ ಜಾತ್ರೋತ್ಸವ ಸಿದ್ಧತೆ ಕುರಿತು ದೇವಾಲಯ ಸಮಿತಿಯಿಂದ ಮಾಹಿತಿ ಪಡೆದುಕೊಂಡರು.

ಜಾತ್ರಾ ದಿನ 10 ಸಾವಿರ ಜನರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಫೆ.23ರ ಸೋಮವಾರ ರಾತ್ರಿ ಜಾನಪದ ಕಲಾವಿದರಾದ ಮೈಸೂರು ಗುರುರಾಜು ಮತ್ತು ತಂಡದವರಿಂದ ಮಹದೇಶ್ವರ ಕಥೆ ಏರ್ಪಡಿಸಲಾಗಿದೆ. ಹುಲಿ ವಾಹನೋತ್ಸವ, ಹಾಲರವಿ ಉತ್ಸವ, ಕೊಂಡೋತ್ಸವ ಸೇರಿ, ವಿಶೇಷ ವಿದ್ಯುತ್ ದೀಪಾಲಂಕಾರ, ಶುದ್ಧ ಕುಡಿಯುವ ನೀರು ವ್ಯವಸ್ಥೆ ಸೇರಿ, ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಸಮಿತಿ ಅಧ್ಯಕ್ಷರಾದ ಮಾವಿನಹಳ್ಳಿ ಎಸ್.ಸಿದ್ದೇಗೌಡ ರವರು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳು ಅರ್ಹರಿಗೆ ತಲುಪಲಿ

ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷರಿಂದ ತಾಕೀತು



ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಮಿತಿಯ ಅಧ್ಯಕ್ಷ ಎಸ್.ಅರುಣ್ ಕುಮಾರ್ ಮಾತನಾಡಿದರು.

ತಿ.ನರಸೀಪುರ, ಜ.22– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಬಡ ಜನರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಪ್ರತಿ ಹಂತದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಪ್ರಾಮಾಣಿಕತೆಯಿಂದ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕೆಂದು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಮೈಸೂರು ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯತಿಯ ಸಭಾಂಗಣದಲ್ಲಿ ಗುರುವಾರ ತಿ.ನರಸೀಪುರ ಹಾಗು ವರುಣ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ನಡೆದ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಡವರಿಗೆ ಗ್ಯಾರಂಟಿ ಯೋಜನೆಗಳ ಸೌಲಭ್ಯ ತಲುಪಿಸುವಲ್ಲಿ ವಿಳಂಬವಾಗಬಾರದು. ಸೌಲಭ್ಯಗಳನ್ನು ನಿಗದಿತ ಅವಧಿಯಲ್ಲಿಯೇ ತಲುಪಿಸುವಂತಾಗಬೇಕು. ಅರ್ಹರಿಗೆ ಅನುಕೂಲವಾಗುವಂತೆ ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನವು ಶೇಕಡ ನೂರರಷ್ಟು ಪ್ರಗತಿಯಾಗಬೇಕು. ಗ್ಯಾರಂಟಿ ಯೋಜನೆಯ ಅನುಷ್ಠಾನದಲ್ಲಿ ಪ್ರಾಮಾಣಿಕತೆ ಇರಬೇಕು. ಅನರ್ಹರನ್ನು ದೂರ ಇಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅನುಷ್ಠಾನದ ಉಪಾಧ್ಯಕ್ಷ ಪ್ರೊ.ಕೆ.ಸಿ. ಶಿವಕುಮಾರ್ ಮಾತನಾಡಿ ಗ್ಯಾರಂಟಿ ಯೋಜನೆಗಳು ಬಡ ಜನರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಈ ಕಾರ್ಯಕ್ರಮಗಳನ್ನು ಪ್ರತಿ ಹಂತದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಸರ್ಕಾರದ ಯೋಜನೆಗಳನ್ನು ತಲುಪಿಸಬೇಕು


ಅನುಷ್ಠಾನ ಪ್ರಾಧಿಕಾರದ ಮತ್ತೊಬ್ಬ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ ಅಸಹಾಯಕ ಮತ್ತು ಬಡ ಕುಟುಂಬಗಳಿಗೆ ವರದಾನವಾಗಿರುವ ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಮೈಸೂರು ಜಿಲ್ಲೆ ಉತ್ತಮ ಸ್ಥಾನದಲ್ಲಿದೆ. ರಾಜ್ಯ ಸರ್ಕಾರ ಸಮಾಜದ ಹಿಂದುಳಿದ ವರ್ಗದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಅವರ ಜೀವನ ಮಟ್ಟ ಸುಧಾರಿಸಲು ಹಲವಾರು ಜನಪರ ಯೋಜನೆಗಳನ್ನು ಜಾರಿ ಮಾಡಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಶ್ರಮಿಸುತ್ತಿದೆ. ಈ ಕಾರ್ಯಕ್ಕೆ ಬೆಂಬಲವಾಗಿ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆಗಳು ಸಹಕಾರಿಯಾಗಿವೆ ಎಂದರು.

ಅಧಿಕಾರಿಗಳ ನಡೆಗೆ ಗರಂ: ಪಂಚಾಯ್ತಿ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಮರ್ಪಕ ಮಾಹಿತಿ ನೀಡಲು ವಿಫಲರಾದ ಅಧಿಕಾರಿಗಳ ಮೇಲೆ ಗರಂ ಆದ ಉಪಾಧ್ಯಕ್ಷರು ಸರಿಯಾದ ಮಾಹಿತಿ ಪಡೆಯದೇ ಸಭೆಗೆ ಯಾಕೆ ಬರುತ್ತೀರಾ. ಈ ಸಭೆಯ ಮಾಹಿತಿಗಳು ರಾಜ್ಯ ಮಟ್ಟಕ್ಕೆ ತಲುಪುತ್ತದೆ. ಹಾಗಾಗಿ ಸಮರ್ಪವಾದ ಸರಿಯಾದ ಅಂಕಿ ಅಂಶಗಳ ಮಾಹಿತಿ ನೀಡಬೇಕೆಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.ಯುವನಿಧಿಯಲ್ಲಿ ಎಷ್ಟು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಅವರಿಗೆ ಜಮೆಯಾಗಿರುವ ಹಣವೆಷ್ಟು ಎಂದು ಕೇಳಿದ ಪ್ರಶ್ನೆಗೆ ಶಿಕ್ಷಣ ಇಲಾಖೆಯ ದ್ವಿತೀಯ ದರ್ಜೆ ನೌಕರ ರಾಹುಲ್ ಉತ್ತರಿಸಲು ತಡ ಬಡಾಯಿಸಿದರು. ಇದರಿಂದ ಕೋಪಗೊಂಡ ಪ್ರೊ.ಕೆ.ಸಿ. ಶಿವಕುಮಾರ್ ಸರಿಯಾದ ಮಾಹಿತಿ ಇಲ್ಲದ ಮೇಲೆ ಮೇಲ್ಮಟ್ಟದ ಅಧಿಕಾರಿಗಳನ್ನು ಸಭೆಗೆ ಕಳುಹಿಸದೇ ನೀವ್ಯಾಕೆ ಸಭೆಗೆ ಬರುತ್ತೀರಾ ಎಂದು ಗರಂ ಆದರು.

ಚೆಸ್ಕಾಂ ಅಧಿಕಾರಿ ವೀರೇಶ್ ತಮ್ಮ ಇಲಾಖೆಯ ಪ್ರಗತಿ ವಿವರ ನೀಡಿ ತಾಲೂಕಿನಲ್ಲಿ ಗೃಹಜ್ಯೋತಿ ಯೋಜನೆಯಡಿ 79177 ಮಂದಿ ಗ್ರಾಹಕರು ಯೋಜನೆಗೆ ಅರ್ಹರಾಗಿದ್ದು, ಈ ವರೆಗೆ 78.81 ಕೋಟಿ ರೂ.ಗಳು ಯೋಜನೆಯಡಿ ಖರ್ಚಾಗಿದೆ ಎಂದು ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಯಾದ ಫಲಾನುಭವಿಗಳು ಮರಣ ಹೊಂದಿದ್ದರೆ ಆ ಬಗ್ಗೆ ಮಾಹಿತಿ ನೀಡಬೇಕು. ಪಂಚ ಯೋಜನೆಯನ್ನು ರಾಜ್ಯ ಸರ್ಕಾರ ಅರ್ಹರಿಗೆ ತಲುಪಿಸಲು ಸಿದ್ಧವಿದೆ. ಅಧಿಕಾರಿಗಳು ಯೋಜನೆಗಳಿಗೆ ಸೇರ್ಪಡೆಯಾಗದವರನ್ನು ಗುರುತಿಸಿ ಅವರಿಗೆ ಸೌಲಭ್ಯ ತಲುಪಿಸಬೇಕು ಎಂದು ಸೂಚನೆ ನೀಡಿದರು. ಈ ವೇಳೆ ಅನ್ನಭಾಗ್ಯ,ಶಕ್ತಿ ಯೋಜನೆಗೆ ಸಂಬಂಧಿಸಿದಂತೆ ಅಧಿಕಾರಿಗಳು ಪ್ರಗತಿಯ ವರದಿ ಮಂಡಿಸಿದರು. ಈ ವೇಳೆ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಮಹದೇವ ಪ್ರಭು, ಪ್ರಭಾರ ತಾಲೂಕು ಪಂಚಾಯತಿ ಕಾರ್ಯನಿರ್ವಾಧಿಕಾರಿ ಕೆ ರಂಗಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಕೇತಹಳ್ಳಿ ಸಿದ್ಧ ಶೆಟ್ಟಿ, ಮಹದೇವಸ್ವಾಮಿ, ಅಭಿ,ಕೃಷ್ಣ, ಸಲೀಂ ಮೊಹಮ್ಮದ್, ಹಾಗೂ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಶಾರದಮ್ಮ ನಿಧನ



ತಿ.ನರಸೀಪುರ, ಜ.22– ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮದ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಹಾಗೂ ಮರಳುಗುತ್ತಿಗೆದಾರ ಕೆ.ಅರುಣ್ ಕುಮಾರ್ ಅವರ ತಾಯಿ ಶಾರದಮ್ಮ(73) ಗುರುವಾರ ರಾತ್ರಿ ನಿಧನರಾಗಿದ್ದಾರೆ

ಮೃತರು ಪುತ್ರಿ ಸವಿತಾ ಹಾಗೂ ಅಪಾರ ಬಂಧು ಬಾಂಧವರನ್ನ ಅಗಲಿದ್ದು ಇವರ ಅಂತ್ಯಕ್ರಿಯೆಯನ್ನು ಶುಕ್ರವಾರ 12 ಗಂಟೆಗೆ ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನೆರವೇರಿಸಲಾಗುವುದೆಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಎಂಜಿಪಿಯಲ್ಲಿ ಸೈಬರ್ ಅಪರಾಧ ಕುರಿತು ಸಾರ್ವಜನಿಕ ಸಭೆ

'ಡಿಜಿಟಲ್ ಅರೆಸ್ಟ್' ಕಾನೂನು ಪ್ರಕ್ರಿಯೆ ಅಲ್ಲವೆಂಬುದನ್ನು ಜನತೆ ಅರಿಯಬೇಕು

ಮೈಸೂರು ನಗರ ಪೊಲೀಸ್ ಸೈಬರ್ ಅಪರಾಧ ವಿಭಾಗದ ಎಸಿಪಿ ಮನೋಜ್‌ಕುಮಾರ್



ಮೈಸೂರಿನ ಯಾದವಗಿರಿಯಲ್ಲಿರುವ ಎಂಜಿಪಿ ಕಚೇರಿಯಲ್ಲಿ ಗುರುವಾರ ಸೈಬರ್ ಅಪರಾಧ ಕುರಿತು ಸಾರ್ವಜನಿಕ ಸಭೆ ನಡೆಯಿತು.

ಮೈಸೂರು,ಜ.22(ಪಿಎಂ)– ಹೆಚ್ಚಾಗಿ ಹಿರಿಯ ನಾಗರಿಕರು, ನಿವೃತ್ತ ಅಧಿಕಾರಿಗಳು 'ಡಿಜಿಟಲ್ ಅರೆಸ್ಟ್' ಎಂಬ ಮೋಸದ ಜಾಲಕ್ಕೆ ಸಿಲುಕಿ ಹಣ ಕಳೆದುಕೊಳ್ಳುತ್ತಿದ್ದು, 'ಡಿಜಿಟಲ್ ಅರೆಸ್ಟ್' ಅಥವಾ 'ಹೌಸ್ ಅರೆಸ್ಟ್' ಎನ್ನುವ ಯಾವುದೇ ಕಾನೂನು ಜಾರಿಯಲ್ಲಿಲ್ಲ ಎಂಬುದನ್ನು ಸಾರ್ವಜನಿಕರು ಮನಗಾಣಬೇಕು ಎಂದು ಮೈಸೂರು ನಗರ ಪೊಲೀಸ್ ಸೈಬರ್ ಅಪರಾಧ ವಿಭಾಗದ ಎಸಿಪಿ ಮನೋಜ್‌ಕುಮಾರ್ ಹೇಳಿದರು.

ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸೈಬರ್ ಅಪರಾಧ ಕುರಿತ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ಸಭಿಕರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು.

ಡಿಜಿಟಲ್ ಅರೆಸ್ಟ್ ಎಂಬುದು ವಂಚಕರು ಸೃಷ್ಟಿಸಿರುವ ಕುತಂತ್ರದ ವಿಧಾನ. ಮೊನ್ನೆಯಷ್ಟೇ ಮೈಸೂರಿನ ಹಿರಿಯ ನಾಗರಿಕರೊಬ್ಬರು ಡಿಜಿಟಲ್ ಅರೆಸ್ಟ್ ಎಂಬ ಮೋಸದ ಜಾಲಕ್ಕೆ ಒಳಗಾಗಿ 45 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ. ಅವರನ್ನು ಸಂಪರ್ಕಿಸಿದ ವಂಚಕರು, ನೀವು ಮುಂಬೈನಲ್ಲಿ ಬುಕ್ ಮಾಡಿದ್ದ ರೂಮ್‌ನಲ್ಲಿ ಅಕ್ರಮ ಹಣ ವರ್ಗಾವಣೆ ನಡೆಸಲಾಗಿದೆ. ನಿಮ್ಮ ಬ್ಯಾಂಕ್ ಖಾತೆಯಲ್ಲಿ 79 ಕೋಟಿ ವಹಿವಾಟು ನಡೆದಿದ್ದು, ಇನ್ನು 3 ಕೋಟಿ ಖಾತೆಯಲ್ಲಿ ಉಳಿದಿದೆಯೆಂದು ಆಸೆ ಹುಟ್ಟಿಸಿದ್ದಾರೆ. ಬಳಿಕ ಅವರ ಖಾತೆಯಿಂದ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ವಿವರಿಸಿದರು.

ಇಂತಹ ಪ್ರಕರಣಗಳಲ್ಲಿ ನಕಲಿ ಕೋರ್ಟ್ ದೃಶ್ಯಾವಳಿಗಳನ್ನು ಆನ್‌ಲೈನ್ ಮೂಲಕ ವಂಚಕರು ತೋರಿಸುವುದೂ ಇದೆ. ನೀವು ಡಿಜಿಟಲ್ ಅರೆಸ್ಟ್ ಆಗಿದ್ದೀರಿ. ಮನೆಯಿಂದ ಹೊರ ಹೋಗುವಂತಿಲ್ಲವೆಂದು ಬೆದರಿಸುವ ಸೈಬಲ್ ವಂಚಕರು, ಆನಂತರದಲ್ಲಿ ನಿಮ್ಮ ಕೇಸ್ ರದ್ದುಪಡಿಸಲು ಇಂತಿಷ್ಟು ಹಣ ವರ್ಗಾಹಿಸಿ ಎನ್ನಲೂಬಹುದು. ಅಥವಾ ನಿಮ್ಮ ಖಾತೆ ಪರಿಶೀಲನೆ ಮಾಡಬೇಕೆಂದು ಹಣ ಹಾಕಿಸಿಕೊಳ್ಳಬಹುದು. ಇದೇ ರೀತಿಯಲ್ಲಿ ಆ ಹಿರಿಯ ನಾಗರಿಕರು 45 ಲಕ್ಷ ಕಳೆದುಕೊಂಡಿದ್ದಾರೆ ಎಂದರು.

ಕನ್ನಡದಲ್ಲಿ ಪ್ರತಿಕ್ರಿಯಿಸಿದವರಲ್ಲಿ ವಂಚನೆ ಒಳಗಾಗಿರುವುದು ಕಡಿಮೆ: ಸೈಬರ್ ವಂಚನೆ ಸಂಬಂಧ ವಂಚಕರೊಂದಿಗೆ ಕನ್ನಡದಲ್ಲಿ ಪ್ರತಿಕ್ರಿಯೆ ನೀಡಿದವರು ವಂಚನೆಗೆ ಒಳಗಾಗಿರುವುದು ಕಡಿಮೆ ಇದೆ. ತಮಿಳುನಾಡಿನಲ್ಲಿ ಮಾತೃಭಾಷೆಯಲ್ಲೇ ಪ್ರತಿಕ್ರಿಯೆ ನೀಡುವುದು ಹೆಚ್ಚಿರುವ ಕಾರಣ ಇಂತಹ ಪ್ರಕರಣಗಳು ಅಲ್ಲಿ ಕಡಿಮೆ ಇರುವುದನ್ನು ಅಂಕಿ ಅಂಶಗಳೇ ಹೇಳುತ್ತಿವೆ. ಸೈಬರ್ ಆರ್ಥಿಕ ವಂಚನೆಯ ಪ್ರಕರಣಗಳಲ್ಲಿ ಮೊದಲ ಹಂತದಲ್ಲಿ ವಂಚನೆ ಜಾಲ ರೂಪಿಸುವ ಕಿಂಗ್‌ಪಿನ್‌ಗಳು ಅತ್ಯಂತ ರಹಸ್ಯವಾಗಿ ಕಾರ್ಯಾಚರಣೆ ಮಾಡುತ್ತಾರೆ. ಹಾಗಾಗಿ ಅವರು ಸಿಕ್ಕಿ ಬೀಳುವುದು ತೀರ ವಿರಳ ಎಂದು ತಿಳಿಸಿದರು.

1930ಕ್ಕೆ ಕರೆ ಮಾಡಿ: ಸೈಬರ್ ಕ್ರೈಂ ಸಹಾಯವಾಣಿ 1930ಕ್ಕೆ ಕರೆ ಮಾಡಿ ಹಣ ವಂಚಿಸಿರುವ ಬಗ್ಗೆ ದೂರು ನೀಡಿದರೆ, ಸಂತ್ರಸ್ತರ ಹಣ ವರ್ಗಾವಣೆ ಟ್ರ್ಯಾಕ್ ಮಾಡಿ, ಹೋಲ್ಡ್ ಮಾಡಲಾಗುತ್ತದೆ. ಇದರಿಂದ ಖಾತೆಯಿಂದ ಖಾತೆಗೆ ಹಣ ವರ್ಗಾವಣೆ ತಡೆದು ಹೆಚ್ಚಿನ ನಷ್ಟದಿಂದ ಪಾರಾಗುವಂತೆ ಮಾಡಲಾಗುತ್ತದೆ. ಆದರೆ ವಂಚಕರು ಹಣವನ್ನು ವಿತ್‌ಡ್ರಾ ಮಾಡಿಕೊಂಡಲ್ಲಿ ಕಷ್ಟವಾಗಲಿದ್ದು, ಸಾಮಾನ್ಯವಾಗಿ ವಂಚಕರು ಆದಷ್ಟು ಬೇಗ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ ಎಂದು ಮಾಹಿತಿ ನೀಡಿದರು.

ತಾರ್ಕಿಕವಾಗಿ ಆಲೋಚಿಸಿ: ನಿವೃತ್ತ ಅಧಿಕಾರಿಗಳು, ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೈಬರ್ ವಂಚಕರ ಮೋಸದ ಜಾಲಕ್ಕೆ ಬಿದ್ದು ಹಣ ಕಳೆದುಕೊಳ್ಳುತ್ತಿದ್ದಾರೆ. ಷೇರು ಹೂಡಿಕೆಗೆ ಸಲಹೆ ಕೊಡುತ್ತೇವೆ, ತರಬೇತಿ ನೀಡುತ್ತೇವೆಯೆಂದು ಪ್ರಾರಂಭಿಸಿ, ದಿನ ಕಳೆದಂತೆ ಲಾಭದ ಆಸೆ ತೋರಿಸುತ್ತಾರೆ. ಉದಾಹರಣೆಗೆ ಲಕ್ಷ ಹೂಡಿಕೆ ಮಾಡಿದ್ದರೆ ಒಂದು ದಿನಕ್ಕೆ 8 ಸಾವಿರ ಲಾಭ ಬರಲಿದೆ ಎಂದು ಆಸೆ ಹುಟ್ಟಿಸುತ್ತಾರೆ. ಇದನ್ನು ನಂಬಿ ಒಂದು ಲಕ್ಷ ಹೂಡಿಕೆಯನ್ನು ಒಬ್ಬರು ಮಾಡುತ್ತಾರೆ ಎಂದಿಟ್ಟುಕೊಳ್ಳಿ. ಆಗ ವಂಚಕರು, ಅವರದ್ದೇ ಲಕ್ಷ ರೂ.ನಲ್ಲಿ 8 ಸಾವಿರ ಲಾಭ ನೀಡಿರುತ್ತಾರೆ. ಇದನ್ನು ನಂಬಿ ಅವರೊಂದಿಗೆ ವ್ಯವಹಾರ ಮುಂದುವರೆಸಿದರೆ, ವಂಚನೆಗೆ ಒಳಗಾಗಬೇಕಾಗುತ್ತದೆ ಎಂದರು.

ಈ ರೀತಿಯಲ್ಲಿ ಸಾಕಷ್ಟು ಮಂದಿ ಮೋಸ ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಯೋಚನೆ ಮಾಡಬೇಕು. ಯಾವುದೇ ಪ್ಲಾಟ್ ಫಾರ್ಮ್‌ನಲ್ಲಿ ಲಕ್ಷ ರೂ.ಗೆ ಒಂದೇ ದಿನಕ್ಕೆ 8 ಸಾವಿರ ರೂ. ಲಾಭ ನೀಡಲು ಸಾಧ್ಯವೇ ಎಂದು ಅವಲೋಕಿಸಿದರೆ ಇದು ವಂಚನೆಯ ಜಾಲವೆಂಬುದು ಮನವರಿಕೆಯಾಗುತ್ತದೆ. ಈ ರೀತಿಯಲ್ಲಿ ಇತ್ತೀಚೆಗೆ ಮೈಸೂರಿನ ಹಿರಿಯ ನಾಗರಿಕರೊಬ್ಬರು 1 ಕೋಟಿ 77 ಲಕ್ಷ ಕಳೆದುಕೊಂಡಿದ್ದಾರೆ. ತಾರ್ಕಿಕವಾಗಿ ಆಲೋಚನೆ ಮಾಡಿದರೆ ಈ ರೀತಿಯ ಲಾಭ ನೀಡಲು ಸಾಧ್ಯವಿಲ್ಲವೆಂಬುದು ಮನದಟ್ಟಾಗುತ್ತದೆ. ಅಪರಿಚಿತರ ವಾಟ್ಸಪ್ ವಾಯ್ಸ್ ಕಾಲ್ ಹಾಗೂ ವೀಡಿಯೊ ಕಾಲ್‌ಗಳಿಗೆ ಪ್ರತಿಕ್ರಿಯಿಸದಿದ್ದರೆ ಒಳ್ಳೆಯದು. ಏಕೆಂದರೆ ಇದರಿಂದ ಸೈಬರ್ ಅಪರಾಧಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಮೈಸೂರು ನಗರ ಸೈಬರ್ ಅಪರಾಧ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಂದೀಶ್ ಕುಮಾರ್, ಎಂಜಿಪಿ ಕಾರ್ಯಾಧ್ಯಕ್ಷ ಎಸ್.ಕೆ. ದಿನೇಶ್, ಅಧ್ಯಕ್ಷ ರಾಯ್ ಜೋಸೆಫ್, ಸಂಸ್ಥಾಪಕ ಸದಸ್ಯ ಡಾ.ಭಾಮಿ ವಿ.ಶೆಣೈ, ಸಂಚಾಲಕ ದಯಾನಂದ ಸಾಗರ್ ಸೇರಿದಂತೆ ಇನ್ನಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಜಾಕಿ (ತ) + ಹಾಟ್‌ಸ್ಪಾಟ್ (ತ)	2+2 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
---	---

ಶುಭಾಶಯ



ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಲ್ಲಿ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಅಶ್ವಿನ್‌ಕುಮಾರ್ ಇತರರು ಅಭಿನಂದಿಸಿ, ಶುಭಾಶಯ ಕೋರಿದರು

ಮುಡಾ ಹಗರಣದಲ್ಲಿ ಸಿಎಂಗೆ ಕ್ಲೀನ್‌ಚಿಟ್; ಜ.28ಕ್ಕೆ ಆದೇಶ ಮುಂದೂಡಿಕೆ



ಬೆಂಗಳೂರು, ಜ.22– ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಲೋಕಾಯುಕ್ತ ನೀಡಿರುವ ಕ್ಲೀನ್‌ಚಿಟ್ ಕುರಿತು ಇಂದು ಪ್ರಕಟವಾಗಬೇಕಿದ್ದ ಆದೇಶ ಜ.28ಕ್ಕೆ ಮುಂದೂಡಿಕೆಯಾಗಿದೆ. ಲೋಕಾಯುಕ್ತ ಪೊಲೀಸರು ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಬಿ ರಿಪೋರ್ಟ್ ಸಲ್ಲಿಸಿದ್ದರು. ಈ ಬಿ–ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಕೋರ್ಟ್ ಮೆಟ್ಟಿಲೇರಿದ್ದರು. ವಾದ ಆಲಿಸಿದ್ದ ಜನಪ್ರತಿನಿಧಿಗಳ ನ್ಯಾಯಾಲಯ ಇಂದಿಗೆ ಆದೇಶ ಕಾಯ್ದಿರಿಸಿತ್ತು. ಜ.28ರ ಆದೇಶದಲ್ಲಿ ನ್ಯಾಯಾಲಯ ಬಿ–ರಿಪೋರ್ಟ್ ಒಪ್ಪಿದರೆ ಸಿಎಂ ಕುಟುಂಬಕ್ಕೆ ಬಿಗ್ ರಿಲೀಫ್ ಸಿಗಲಿದೆ. ಒಪ್ಪದೇ ಇದ್ದರೆ ದೊಡ್ಡ ಸಂಕಷ್ಟ ಎದುರಾಗಲಿದೆ.

ವಿಧಾನಮಂಡಲದಲ್ಲಿ ರಾಜ್ಯಪಾಲರ ಭಾಷಣ ವಿಚಾರ

ಕಾಂಗ್ರೆಸ್ ಸದಸ್ಯರ ನಡೆ ಸಂವಿಧಾನ ವಿರೋಧಿ

ಕಾನೂನು ತಜ್ಞರೂ ಆದ ಹಿರಿಯ ವಕೀಲ ಓ.ಶ್ಯಾಮ್‌ಭಟ್ ಖಂಡನೆ




ಓ.ಶ್ಯಾಮ್‌ಭಟ್

ಮೈಸೂರು,ಜ.22(ಪಿಎಂ)– ರಾಜ್ಯ ವಿಧಾನಮಂಡಲ ಜಂಟಿ ಅಧಿವೇಶನದಲ್ಲಿನ ರಾಜ್ಯಪಾಲರ ಭಾಷಣ ಸಂಬಂಧ ಕಾಂಗ್ರೆಸ್ ಸದಸ್ಯರ ನಡೆಯು ಸಂವಿಧಾನ ವಿರೋಧಿಯಾಗಿದೆ ಎಂದು ಹಿರಿಯ ವಕೀಲ ಓ.ಶ್ಯಾಮ್‌ಭಟ್ ಖಂಡಿಸಿದ್ದಾರೆ.

ರಾಜ್ಯ ಸರ್ಕಾರ ಹೇಳಿದಂತೆ ಭಾಷಣ ಮಾಡಲು ರಾಜ್ಯಪಾಲರೇನು ಗಿಣಿಯಲ್ಲ. ಸಂವಿಧಾನದ ಆರ್ಟಿಕಲ್ 163ರಿಂದ 175ರವರೆಗೆ ರಾಜ್ಯಪಾಲರ ಸ್ಥಾನಮಾನ, ಅವರ ಅಧಿಕಾರಗಳನ್ನು ವಿವರಿಸಲಾಗಿದೆ. ವಿಧಿ 163ರ ಉಪವಿಧಿ 2ರಲ್ಲಿ ಸ್ಪಷ್ಟವಾಗಿ ರಾಜ್ಯಪಾಲರಿಗೆ ವಿವೇಚನಾ ಅಧಿಕಾರವಿದೆ ಎಂದು ಹೇಳಲಾಗಿದೆ.

ವಿಧಾನಸಭೆಯಲ್ಲಿ ರಾಜ್ಯಪಾಲರಿಗೆ ಮಂತ್ರಿಮಂಡಲ ಏನೇ ಹೇಳಿದ್ದರೂ ಅವರು ತಮ್ಮ ವಿವೇಚನೆಯಂತೆ ಯಾವುದನ್ನು ಹೇಳಬೇಕು, ಏನನ್ನು ಹೇಳಬಾರದು ಎಂದು ನಿರ್ಧರಿಸುವ ಸ್ವಾತಂತ್ರ್ಯವನ್ನು ಸಂವಿಧಾನ ಕಲ್ಪಿಸಿದೆ. ಕೇಂದ್ರ ಸರ್ಕಾರದಲ್ಲಿ ರಾಷ್ಟ್ರಾಧ್ಯಕ್ಷರು ಇದ್ದಂತೆ, ರಾಜ್ಯದಲ್ಲಿ ರಾಜ್ಯಪಾಲರು ಸ್ಥಾನಮಾನ ಹೊಂದಿರುತ್ತಾರೆ. ರಾಜ್ಯ ಸರ್ಕಾರದವರು ಹೇಳಿದಂತೆ ನಡೆದುಕೊಳ್ಳಲೇ ಬೇಕೆಂಬ ಕಟ್ಟುನಿಟ್ಟೇನಿಲ್ಲ. ಸಂವಿಧಾನದ ಆಶಯವಾದ ಏಕತೆ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಎತ್ತಿಹಿಡಿಯುವ ಜವಾಬ್ದಾರಿ ಸಹ ರಾಜ್ಯಪಾಲರಿಗೆ ಇದೆ. ಯಾವುದೇ ರಾಜ್ಯದ ಮಂತ್ರಿಮಂಡಲ ಕೇಂದ್ರದ ವಿರುದ್ಧವಾಗಿ ಏನಾದರೂ ಕುತಂತ್ರಕ್ಕೆ ಮುಂದಾದರೆ ಅದನ್ನು ನಿರ್ಬಂಧಿಸುವ ಸ್ವಾತಂತ್ರ್ಯವನ್ನು ರಾಜ್ಯಪಾಲರು ಹೊಂದಿರುತ್ತಾರೆ. ರಾಜ್ಯಪಾಲರ ಭಾಷಣ ಸಂಬಂಧ ಕಾಂಗ್ರೆಸ್ ಸದಸ್ಯರ ನಡವಳಿಕೆ ರಾಜ್ಯದ ವಿಚಾರದಲ್ಲಿ ತಪ್ಪು ಸಂದೇಶ ನೀಡಲಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನವದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಕರ್ನಾಟಕದ 'ಮಿಲ್ಲೆಟ್ ಟು ಮೈಕ್ರೋಚಿಪ್' ಸ್ತಬ್ಧಚಿತ್ರ



ಗಣರಾಜ್ಯೋತ್ಸವದಂದು ನವದೆಹಲಿಯಲ್ಲಿ ನಡೆಯಲಿರುವ 'ಪಥ ಸಂಚಲನ ಮತ್ತು ಭಾರತ ಪರ್ವದ ಪ್ರದರ್ಶನ'ದಲ್ಲಿ ಸಾಗಲಿರುವ ಕರ್ನಾಟಕದ 'ಮಿಲ್ಲೆಟ್ ಟು ಮೈಕ್ರೋಚಿಪ್' ಆಕರ್ಷಕ ಸ್ತಬ್ಧಚಿತ್ರದ ಮಾದರಿ.

ಬೆಂಗಳೂರು, ಜ.22– ನವದೆಹಲಿಯಲ್ಲಿ ಗಣರಾಜ್ಯೋತ್ಸವದಂದು ನಡೆಯಲಿರುವ 'ಪಥ ಸಂಚಲನ ಮತ್ತು ಭಾರತ ಪರ್ವದ ಪ್ರದರ್ಶನ'ದಲ್ಲಿ ಕರ್ನಾಟಕದ 'ಮಿಲ್ಲೆಟ್ ಟು ಮೈಕ್ರೋಚಿಪ್ (ಸಿರಿಧಾನ್ಯದಿಂದ ಮೈಕ್ರೋಚಿಪ್‌ವರೆಗೆ)' ವಿಶೇಷ ಸ್ತಬ್ಧಚಿತ್ರ ಸಾಗಲಿದೆ.

ಭಾರತವನ್ನು ಆತ್ಮನಿರ್ಭರ ರಾಷ್ಟ್ರವನ್ನಾಗಿಸುವ ದಿಶೆಯಲ್ಲಿ ಕರ್ನಾಟಕದಂತಹ ಸ್ವಾವಲಂಬಿ ರಾಜ್ಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹಾಗೆಯೇ ಕೃಷಿಯಿಂದ ಕೈಗಾರಿಕೆವರೆಗೆ ಆಧುನಿಕ ತಂತ್ರಜ್ಞಾನದ ಬಳಕೆಯಲ್ಲಿ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ ಎಂಬುದನ್ನು ಸಂಕೇತಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ವೈಶಿಷ್ಟ್ಯ ಪೂರ್ಣವಾದ ಈ ಸ್ತಬ್ಧಚಿತ್ರ ರೂಪಿಸಲಾಗಿದೆ.

ಸಿರಿಧಾನ್ಯಗಳ ಉತ್ಪಾದನೆ ಮತ್ತು ಪೌಷ್ಟಿಕ ಆಹಾರದ ಬಳಕೆಯನ್ನು ಉತ್ತೇಜಿಸುವಲ್ಲಿ ಕರ್ನಾಟಕವು ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಬೆಂಗಳೂರು ಜಾಗತಿಕವಾಗಿ ಗಮನ ಸೆಳೆದಿದೆ. ಮೈಕ್ರೋ ಚಿಪ್, ಎಲೆಕ್ಟ್ರಾನಿಕ್ಸ್ ಹಾಗೂ ಸೆಮಿಕಂಡಕ್ಟರ್ ವಲಯಗಳಲ್ಲಿನ ಆವಿಷ್ಕಾರಗಳು ಕರ್ನಾಟಕವನ್ನು ಶ್ರೇಷ್ಠ ತಂತ್ರಜ್ಞಾನ ಕೇಂದ್ರವಾಗಿಸಿವೆ. ಇವೆಲ್ಲವೂ ಈ ಬಾರಿ ಸ್ತಬ್ಧಚಿತ್ರದಲ್ಲಿ ಮೇಳೈಸಿವೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ತಿಳಿಸಿದ್ದಾರೆ.

ಸಂಶೋಧನೆ, ನವೀನತೆ ಮತ್ತು ಕೌಶಲ್ಯಾಭಿವೃದ್ಧಿಗೆ ನೀಡಲಾಗಿರುವ ವಿಶೇಷ ಆದ್ಯತೆಯ ಮೂಲಕ ಯುವಶಕ್ತಿಗೆ ಉದ್ಯಮಶೀಲ ಅವಕಾಶಗಳನ್ನು ಒದಗಿಸಿ, ಭವಿಷ್ಯದ ಆರ್ಥಿಕತೆಗೆ ಭದ್ರ ಬುನಾದಿಯನ್ನು ಕರ್ನಾಟಕ ನಿರ್ಮಿಸುತ್ತಿದೆ ಹೂಡಿಕೆ ಸ್ನೇಹಿ ನೀತಿಗಳ ಮೂಲಕ ಉತ್ಪಾದನಾ ವಲಯದಲ್ಲಿ ಗರಿಷ್ಠ ಬೆಳವಣಿಗೆಯನ್ನು ಸಾಧಿಸಿರುವ ರಾಜ್ಯವು, ಕೈಗಾರಿಕಾ ಅಭಿವೃದ್ಧಿಯಲ್ಲಿಯೂ ಮುಂಚೂಣಿಯಲ್ಲಿದೆ. ಜೊತೆಗೆ, ಸ್ಟಾರ್ಟ್ ಅಪ್ ಕ್ಯಾಪಿಟಲ್ ಆಫ್ ಇಂಡಿಯಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜ್ಯವು ನವದೆಹಲಿಯಲ್ಲಿ ಪ್ರದರ್ಶಿಸುತ್ತಿರುವ ಈ ಸ್ತಬ್ಧ ಚಿತ್ರವು ಎಲ್ಲರ ಮನಸೂರೆಗೊಳ್ಳಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂದು ಚಾಲಕರ ದಿನ

ಮೈಸೂರು, ಜ.22(ಎಂಕೆ)– ಸೈಕಲ್ ಪ್ಯೂರ್ ಅಗರಬತ್ತಿ ಮತ್ತು ವಿಆರ್‌ಎಲ್ ಲಾಜಿಸ್ಟಿಕ್ ಲಿಮಿಟೆಡ್ ವತಿಯಿಂದ ನಾಳೆ(ಜ.23) ಬೆಳಗ್ಗೆ 11 ಗಂಟೆಗೆ ಚಾಲಕರ ಸೇವೆ ಮತ್ತು ಬದ್ಧತೆಯನ್ನು ಗೌರವಿಸುವ ಸಲುವಾಗಿ 'ಚಾಲಕರ ದಿನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಸಿದ್ದಲಿಂಗಪುರದಲ್ಲಿರುವ ವಿಆರ್‌ಎಲ್ ಲಾಜಿಸ್ಟಿಕ್ ಲಿಮಿಟೆಡ್ ಕಚೇರಿ ಆವರಣದಲ್ಲಿ ಚಾಲಕರ ದಿನ ಕಾರ್ಯಕ್ರಮ ನಡೆಯಲಿದ್ದು, ಈ ವೇಳೆ ಚಾಲಕರಿಗೆ ಪವರ್ ಬ್ಯಾಗ್ ಮತ್ತು ಏರ್ ಫ್ರೆಶ್ನರ್ ವಿತರಣೆ ಮಾಡಲಾಗುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಾಲ್ಮೀಕಿ ನಿಗಮ ಹಗರಣ

ಮುಂಬೈ ಮಹಿಳೆ ನಾಗೇಂದ್ರ ಪತ್ನಿ; ಹೈಕೋರ್ಟ್‌ಗೆ ಸಿಬಿಐ ಮಾಹಿತಿ



ನಾಗೇಂದ್ರ

ಬೆಂಗಳೂರು, ಜ.22– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಾಗ ಅಕ್ರಮ ಹಣ ವರ್ಗಾವಣೆಯ ಇನ್ನೆರಡು ಹಗರಣ ಬೆಳಕಿಗೆ ಬಂದಿದ್ದು ಅವುಗಳಲ್ಲಿ ಮುಂಬೈನ ಒಬ್ಬ ಮಹಿಳೆ ತನ್ನ ಗಂಡನ ಹೆಸರು ಬಿ.ನಾಗೇಂದ್ರ ಎಂದು ದಾಖಲೆಗಳಲ್ಲಿ ನಮೂದಿಸಿಕೊಂಡಿದ್ದಾರೆ ಎಂದು ಸಿಬಿಐ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್‌ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಾದ ಮಂಡಿಸಿದ ಪಿ.ಪ್ರಸನ್ನಕುಮಾರ್, ವಾಲ್ಮೀಕಿ ಹಗರಣದ ತನಿಖೆ ನಡೆಸುವಾಗ ಮತ್ತೆರಡು ಹಗರಣ ಬೆಳಕಿಗೆ ಬಂದಿದ್ದು ಇವುಗಳನ್ನೂ ತನಿಖೆ ನಡೆಸಲು ಇದೇ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅನುಮತಿ ನೀಡಿದೆ. ಈ ಹಿನ್ನೆಲೆಯಲ್ಲಿ ತನಿಖೆ ಮುಂದುವರಿಸಿದಾಗ ಮುಂಬೈನ ಇಬ್ಬರು ಮಹಿಳೆಯರಿಗೆ ಹಣ ಅಕ್ರಮವಾಗಿ ತಲುಪಿರುವುದು ಪತ್ತೆಯಾಗಿದೆ ಎಂದರು.

ಪರಿಶಿಷ್ಟ ಜಾತಿ ಕಲ್ಯಾಣ ಇಲಾಖೆ ಖಾತೆಯಿಂದ ನೆಕ್ಕಂಟಿ ನಾಗರಾಜ್ ಆಪ್ತರಿಗೆ ಒಟ್ಟು 2.17 ಕೋಟಿ ಸಂದಾಯವಾಗಿದೆ ಮತ್ತು ಕರ್ನಾಟಕ ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನ ಕೇಂದ್ರದಿಂದ ನೆಕ್ಕಂಟಿ ಅವರಿಗೆ 95 ಲಕ್ಷ ಪಾವತಿಯಾಗಿದೆ. ಈ ಹಣ ಮುಂಬೈ ಮಹಿಳೆಯರಿಗೆ ತಲುಪಿದ್ದು ಇಬ್ಬರೂ ಒಟ್ಟು 95 ಲಕ್ಷ ಮೊತ್ತದ ಬಂಗಾರ ಖರೀದಿಸಿದ್ದಾರೆ. ಅವರಲ್ಲಿನ ಒಬ್ಬ ಮಹಿಳೆ ತನ್ನ ಮನೆಯ ಬಾಡಿಗೆ ಕರಾರು ಪತ್ರದಲ್ಲಿ, ತಾನು ಬಿ.ನಾಗೇಂದ್ರ ಅವರ ಪತ್ನಿ ಎಂದು ಕಾಣಿಸಿಕೊಂಡಿದ್ದಾರೆ ಎಂದು ವಿವರಿಸಿದರು.

ಪ್ರತಿವಾದಿ ನಾಗೇಂದ್ರ ಮಾಜಿ ಸಚಿವರಾಗಿದ್ದು ಸರ್ಕಾರದ ಬೊಕ್ಕಸದ ಹಣವನ್ನು ಈ ರೀತಿಯಲ್ಲಿ ದುರ್ಬಳಕೆ ಮಾಡಿ ಕೊಂಡಿರುವುದು ನಿಜಕ್ಕೂ ದುರದೃಷ್ಟಕರ. ಗಮನಾರ್ಹ ಅಂಶವೆಂದರೆ ಈ ಪ್ರಕರಣ ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಯಬೇಕು ಎಂದು ಆದೇಶವಿದೆ. ಹೀಗಾಗಿ, ನೆಕ್ಕಂಟಿ ನಾಗರಾಜ್ ಅವರ ಕಸ್ಟೋಡಿಯಲ್ ವಿಚಾರಣೆ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಅಂತೆಯೇ, ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ಆದೇಶವನ್ನು ರದ್ದುಗೊಳಿಸಬೇಕು ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, ನಾಗೇಂದ್ರ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಪೌರಕಾರ್ಮಿಕರೊಂದಿಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ರಘು ಸಂವಾದ

ಹೋಟೆಲ್‌ಗಳಲ್ಲಿ ಪೌರ ಕಾರ್ಮಿಕರಿಗೆ ಶೌಚಾಲಯ ಬಳಕೆಗೆ ಅಡ್ಡಿಪಡಿಸದಂತೆ ಎಚ್ಚರಿಕೆ

- ಪೌರಕಾರ್ಮಿಕರಿಗೆ ಕಳಪೆ ಗುಣಮಟ್ಟದ ಆಹಾರ ವಿತರಣೆ
- ಹೊರ ಗುತ್ತಿಗೆಯ ಪೌರಕಾರ್ಮಿಕ ಮೃತನಾದರೆ ಸೌಲಭ್ಯವಿಲ್ಲ
- ಸಮಾನ ಕೆಲಸಕ್ಕೆ ಸಮಾನ ವೇತನವಂತೂ ದೂರದ ಮಾತು
- ದಸರಾ ವೇಳೆ ಸಮವಸ್ತ್ರ, ಅಡ್ವಾನ್ಸ್ ನೀಡುತ್ತಿಲ್ಲ



ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಅವರು ಪೌರ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ಮೈಸೂರು, ಜ.22(ಬಿಎಲ್‌ಯು)– ಪ್ರತಿಯೊಂದು ಹೋಟೆಲ್‌ಗಳಲ್ಲಿ ಪೌರ ಕಾರ್ಮಿಕರಿಗೆ ಶೌಚಾಲಯ ಬಳಸಲು ಮುಕ್ತ ಅವಕಾಶವಿದ್ದು, ಇದಕ್ಕೆ ಹೋಟೆಲ್ ಮಾಲೀಕರು ಅಡ್ಡಿಪಡಿಸುವಂತಿಲ್ಲ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಎಚ್ಚರಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಇಂದು ಮೈಸೂರು ನಗರ, ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರೊಂದಿಗೆ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಪೌರ ಕಾರ್ಮಿಕರನ್ನು ಎಲ್ಲೂ ಕೀಳು ಅಥವಾ ಅಗೌರವದಿಂದ ಕಾಣಬಾರದು ಎಂದು ತಾಕೀತು ಮಾಡಿದರು.

ಕೆಲವೆಡೆ ಪೌರ ಕಾರ್ಮಿಕರಿಗೆ ಕಳಪೆ ಗುಣಮಟ್ಟದ ಆಹಾರ ನೀಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹಾರ ಮಾಡಲಾಗುವುದು ಎಂದು ರಘು ಎಚ್ಚರಿಸಿದರು.

ಮುಂಜಾನೆ ಎಲ್ಲರಿಗಿಂತ ಮೊದಲು ಎದ್ದು ಪೌರಕಾರ್ಮಿಕರು ನಗರವನ್ನು ಸ್ವಚ್ಛ ಮಾಡುವುದರ ಜೊತೆಗೆ ಸಮಾಜವನ್ನು ಸ್ವಚ್ಛ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿರುವ ಇಂತಹ ಪೌರಕಾರ್ಮಿಕರು ತಮ್ಮ ಸಮಸ್ಯೆ ಹೇಳಿಕೊಳ್ಳಬೇಕು. ನಿಮ್ಮ ಮನೆ ಬಳಿಗೆ ಬಂದಿರುವ ಆಯೋಗಕ್ಕೆ ಮಾಹಿತಿ ನೀಡಿ, ಈ ಮೂಲಕ ತಮ್ಮ ಕಷ್ಟ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪೌರ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಡ ಪೌರ ಕಾರ್ಮಿಕರನ್ನಾಗಿ ಮಾಡುವ ಆಲೋಚನೆಯನ್ನು ಮೊದಲು ಬಿಡಬೇಕು. ಮೊರಾರ್ಜಿ ದೇಸಾಯಿ ವಸತಿ ಶಾಲೆ, ಇಂದಿರಾಗಾಂಧಿ ವಸತಿ ಶಾಲೆ ಹಾಗೂ ನವೋದಯ ಶಾಲೆಗಳಿಗೆ ತಮ್ಮ ಮಕ್ಕಳನ್ನು ದಾಖಲಿಸಿ, ಅವರಿಗೆ ಉನ್ನತ ಶಿಕ್ಷಣ ನೀಡಬೇಕು. ಈ ಮೂಲಕ ಸರ್ಕಾರದ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ತಮ್ಮ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಬಾರದು ಎಂದು ಕಿವಿಮಾತು ಹೇಳಿದರು.

ನಗರದ ಸ್ವಚ್ಛತೆ ಸೇರಿದಂತೆ ಇತರೆ ಕೆಲಸಗಳಿಗೆ ಈಗ ಆಧುನಿಕ ಯಂತ್ರೋಪಕರಣಗಳು ಬರುತ್ತಿದ್ದು ಅದನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪೌರ ಕಾರ್ಮಿಕರೊಂದಿಗೆ ಸಂವಾದ: ಇದೇ ವೇಳೆ ನಡೆದ ಸಂವಾದದಲ್ಲಿ ಬಹಳಷ್ಟು ಪೌರ ಕಾರ್ಮಿಕರು ತಮ್ಮ ನಾನಾ ಸಮಸ್ಯೆಗಳನ್ನು ಆಯೋಗದ ಅಧ್ಯಕ್ಷ ರಘು ಅವರ ಗಮನಕ್ಕೆ ತಂದರು.

ನಗರ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಆದರೆ, ಅವರು ಅಕಾಲಿಕ ಮರಣಕ್ಕೀಡಾದರೆ ಅವರಿಗೆ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ. ದುಡಿಮೆ ಮಾಡುವ ಮನೆಯ ಯಜಮಾನ ಅಥವಾ ಯಜಮಾನಿ ಮೃತಪಟ್ಟಾಗ ಅವರ ಕುಟುಂಬ ಆರ್ಥಿಕ ಸಂಕಷ್ಟಕ್ಕೊಳಗಾಗುತ್ತಿದೆ ಎಂದು ಪರಿಸ್ಥಿತಿಯನ್ನು ಮನದಟ್ಟು ಮಾಡಿದರು.

ನೇಮಕಾತಿಯಲ್ಲಿ ತಾರತಮ್ಯ ಮಾಡಲಾಗುತ್ತಿದ್ದು, ಇದನ್ನು ಪರಿಹರಿಸಬೇಕು. ಬೆಳಿಗ್ಗೆ ಕಳಪೆ ಗುಣಮಟ್ಟದ ಆಹಾರ ನೀಡುತ್ತಿದ್ದು, ಇದರಿಂದ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನಮಗೆ ಪ್ರತಿ ತಿಂಗಳು 5ನೇ ತಾರೀಖಿನಂದು ವೇತನ ದೊರೆಯುತ್ತಿಲ್ಲ, ಇದರಿಂದ ತೊಂದರೆ ಆಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನವಂತೂ ದೂರದ ಮಾತಾಗಿದೆ. ಈ ಸಮಸ್ಯೆ ಪರಿಹಾರಕ್ಕೆ ಮೊದಲ ಆದ್ಯತೆ ನೀಡಬೇಕು, ಅರ್ಹ ಪೌರ ಕಾರ್ಮಿಕರಿಗೆ ಆಶ್ರಯ ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ದಸರಾ ಸಮಯದಲ್ಲಿ ಪ್ರತಿ ವರ್ಷ ನೀಡುತ್ತಿದ್ದ ಸಮವಸ್ತ್ರ ಹಾಗೂ ಅಡ್ವಾನ್ಸ್ ನೀಡುತ್ತಿಲ್ಲ. ಆರೋಗ್ಯ ತಪಾಸಣೆ ಕೆಲವು ಆಸ್ಪತ್ರೆಗಳಿಗೆ ಮಾತ್ರ ಸೀಮಿತವಾಗಿದ್ದು, ಮೈಸೂರು ನಗರ ಹಾಗೂ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲೂ ಈ ಸೌಲಭ್ಯ ಕಲ್ಪಿಸಬೇಕು ಎಂದು ಕೋರಿದರು.

ನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರ ಕಾರ್ಮಿಕ ಹುದ್ದೆಗಳಿಗೆ ನೇಮಕಾತಿ ಮಾಡಬೇಕು, ಹೊರ ಗುತ್ತಿಗೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಟೆಂಡರ್‌ದಾರ 50 ರೂಪಾಯಿ ನೀಡಿ ವಿಮೆ ಮಾಡಿಸಬೇಕು. ಈ ಮೂಲಕ ಕಾರ್ಮಿಕ ಇಲಾಖೆಯಿಂದ ಹಲವು ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಬೇಕು. ಈ ಹಿನ್ನೆಲೆಯಲ್ಲಿ ಟೆಂಡರ್‌ದಾರನಿಗೆ ಸರ್ಕಾರದಿಂದ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಪ್ರಿಯದರ್ಶಿನಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ಉತ್ತಮ ಸ್ಥಾನ



ಮೈಸೂರು,ಜ.22– ಭಾರತ ಸರ್ಕಾರದ ರಕ್ಷಣಾ ಸಚಿವಾಲಯವು ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ರಾಷ್ಟ್ರಮಟ್ಟದ 'ವಂದೇಮಾತರಂ' ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯಲ್ಲಿ ಮೈಸೂರಿನ ವಿಜಯನಗರ 4ನೇ ಹಂತದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 6ನೇ ತರಗತಿ ವಿದ್ಯಾರ್ಥಿನಿ ಅನಘಾ ಹೆಚ್.ಪ್ರಸಾದ್, ರಾಷ್ಟ್ರ ಮಟ್ಟದಲ್ಲಿ 58ನೇ ಮತ್ತು ರಾಜ್ಯ ಮಟ್ಟದಲ್ಲಿ 7ನೇ ಸ್ಥಾನ ಗಳಿಸಿದ್ದಾಳೆ. ಈಕೆಯನ್ನು ಜ.26ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆಯುವ ಗಣರಾಜ್ಯೋತ್ಸವ ಪಥಸಂಚಲನ ವೀಕ್ಷಿಸಲು ಆಹ್ವಾನಿಸಲಾಗಿದೆ.

'ರಂಗಣ್ಣನ ರಾದ್ಧಾಂತ' ನಾಟಕ ಪ್ರದರ್ಶನ



'ರಂಗಣ್ಣನ ರಾದ್ಧಾಂತ' ನಾಟಕದ ಅಭ್ಯಾಸದಲ್ಲಿ ನಿರತರಾಗಿರುವ ಕಲಾವಿದರು.

ಮೈಸೂರು, ಜ.22(ವಿವಿಹೆಚ್)– ಬಿದಿರು ಥಿಯೇಟರ್ ಮೈಸೂರು ರಂಗತಂಡದ ವತಿಯಿಂದ ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಇದೇ ಜ.24ರ ಶನಿವಾರದಂದು ಸಂಜೆ 7 ಗಂಟೆಗೆ 'ರಂಗಣ್ಣನ ರಾದ್ಧಾಂತ' ನಾಟಕ ಪ್ರದರ್ಶನಗೊಳ್ಳಲಿದೆ.

ಸ್ಮಶಾನ ಕುರುಕ್ಷೇತ್ರ ಹಾಗೂ ಮಕ್ಕಳ ನಾಟಕಗಳನ್ನು ನಿರ್ದೇಶಿಸಿ ಯಶಸ್ವಿಯಾಗಿದ್ದ ಯುವ ನಿರ್ದೇಶಕ ಮಂಜುನಾಥ್ ಬ್ಯಾಟಿ 'ರಂಗಣ್ಣ ರಾದ್ಧಾಂತ' ನಾಟಕವನ್ನು ನಿರ್ದೇಶಿಸಿದ್ದಾರೆ. ಬೇಲೂರು ಕೃಷ್ಣಮೂರ್ತಿ ಅವರ ರಚನೆಯಲ್ಲಿ ಮೂಡಿಬಂದಿರುವ ಈ ನಾಟಕಕ್ಕೆ, ರಾಕೇಶ್ ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಘವೇಂದ್ರ ಅಚ್ಚಪ್ಪ ಹಾಕೋಡಿ ಬೆಳಕು ವಿನ್ಯಾಸ, ಚೈತನ್ಯ ಶಿವರಾಜ ವಸ್ತ್ರ ವಿನ್ಯಾಸದ ಜವಾಬ್ದಾರಿ ಹೊರಲಿದ್ದಾರೆ.

ವಿನೋದ್ ಕುಮಾರ್, ಚೈತನ್ಯ, ರಾಮ್, ಶಶಿರಾಮ್, ಶಶಿಕಾಂತ್, ಪ್ರವೀಣ್, ಧನುಷ್, ವಿನೋದ್ ಮತ್ತಿತರ ಕಲಾವಿದರು ತಂಡದಲ್ಲಿದ್ದಾರೆ. ಈ ನಾಟಕ ಪ್ರದರ್ಶನಕ್ಕೆ 100 ರೂ. ಪ್ರವೇಶ ದರ ಇರಲಿದೆ.

THE BEST QUALITY WATER PROOF **Plywood**

₹69/- PER SQFT. 15 YEARS CERTIFIED WARRANTY

Neem BOND PLATINUM · Neem AKSHAYAGOLD

9148991267 | 9901291267

SK Properties

Layout Developer

Plots Near Kadakola Railway Station & TVS Factory

80% Bank Loan · CC Roads

Contact · CONSTRUCTION READY

9448047200

SITE FOR SALE

PRIME RESIDENTIAL SITE

40x60

SOUTH FACE

40ft., Road, near Bramaramba Choultry, Srirampura.

Contact :

97397 03467 / 96868 95205

COMMERCIAL BUILDING FOR SALE

@ Nanjumalige

30x35. Contact:

Mob: 94809-88340

ಮಾರಾಟಕ್ಕಿದೆ

30x40

ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕ್ಕಿದೆ. ಖರೀದಿದಾರರು ಸಂಪರ್ಕಿಸಿ

9686714571

ಪೆಟ್ರೋಲ್ ಬಂಕ್‌ಗೆ ಪಂಪ್ ಕ್ಯಾಶಿಯರ್ ಬೇಕಾಗಿದ್ದಾರೆ

ವಿಜಯನಗರ 1ನೇ ಹಂತ, ಮೈಸೂರು-1

ಡ್ಯೂಟಿ: ಬೆ.8 ರಿಂದ ಸಂಜೆ 5ರವರೆಗೆ

ವೇತನ ಮಾರ್ಕೆಟ್‌ಗೆ ಅನುಗುಣವಾಗಿ

ಮೊ.96863 10789

(ಬೆ. 10ರಿಂದ ಸಂಜೆ 5ರೊಳಗೆ ಸಂಪರ್ಕಿಸಿ)

17ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 17 ವರ್ಷ ಆದರೂ ನಿಮ್ಮ ನೆನಪಿನಲ್ಲಿ ಇರುವ

ದುಃಖತಪ್ತರು ನಿಮ್ಮ ಮಗಳು, ಲಕ್ಷ್ಮಿ ದೇವಿ, ಮೊಮ್ಮಕ್ಕಳು, ಮರಿ ಮಕ್ಕಳು

ಶ್ರೀಮತಿ ದೇವಮ್ಮ

ಕೆ.ಜಿ.ಕೊಪ್ಪಲ್

NOT GETTING YOUR

STAR OF MYSORE & ಮೈಸೂರು ಮಿತ್ರ

Call:

98452-96447

99003-82840

ಮೊದಲನೇ ವರ್ಷದ ಪುಣ್ಯಸ್ಮರಣೆ



D.S ಯೋಗಾನಂದ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ನಿನ್ನ ಮಗ, ಸೊಸೆ, ಮಗಳು, ಅಳಿಯ ಹಾಗೂ ಕುಟುಂಬವರ್ಗದವರು

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಶಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ

ಹೈಲ್ಯಾಂಡ್ ಪ್ರಾಪರ್ಟೀಸ್

ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

88840 71010

90713 86615

MUDA LIMITS · ಕೇವಲ ₹749/ ಪ್ರತಿ ಚದರ ಅಡಿ

ಬುಕಿಂಗ್ ಪ್ರಾರಂಭವಾಗಿದೆ

30x40 | 30x50

40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಸುಲಭ 4 ಕಂತುಗಳ ಸೌಲಭ್ಯವಿದೆ

Loans

1. **Housing Loan** (Construction/ Purchase of House and Flats, Repairs and Renovation)
2. **Balance Transfer** / Takeover from other Banks / Financial institutions
3. **Composite Loan** (Land + Construction)
4. **Plot Loans**
5. **Mortgage Loan**
6. **Loans for Commercial Properties** (We provide Loans for All type of Khatha)

Address and Contact details

SHRI SAI FINANCIAL SERVICES

No.2780, Railway Gate Road, K G Koppal, Mysore-570009.

8884447314, 8884447318

0821-3554197



ದಿನಾಂಕ 22-01-2026 ರಿಂದ ಮಾರಾಟವನ್ನು ಪ್ರಾರಂಭಿಸಲಾಗಿದೆ

ನಮ್ಮ ಪ್ರಖ್ಯಾತ ಫ್ಲೋರಲ್ ಫ್ಯಾಬ್ರಿಕ್ಸ್ ಮತ್ತೆ ನಿಮ್ಮ ಮನ ಅರಳಿಸಲಿ

₹395 ರಿಂದ ಪ್ರಾರಂಭವಾಗುವ ಸೀರೆಗಳು | ₹74/m ನಿಂದ ಪ್ರಾರಂಭವಾಗುವ ಡ್ರೆಸ್ ಮಟೀರಿಯಲ್ | ₹790ಕ್ಕೆ ಯಾವುದೇ 2 ಸೀರೆಗಳನ್ನು ಖರೀದಿಸಿ, ನಮ್ಮ ವಿಶೇಷ ಕೌಂಟರ್‌ನಿಂದ

ಸಲ್ವಾರ್ ಸೂಟ್ ಪೀಸ್‌ಗಳ ಪ್ರತ್ಯೇಕ ಶ್ರೇಣಿ

ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ್ ಭವನ ಕಾಂಪೌಂಡ್) ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬೆಂಗಳೂರು ನೀಲಗಿರಿ ರಸ್ತೆ, ಮೈಸೂರು-570001.

ಸಮಯ : ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ (ಸೋಮವಾರದಿಂದ ಭಾನುವಾರ)

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ತಿಬ್ಬಾದೇವಿ ಪಿ. ಸ್ವಾಮಿರವರು

ಇವರು ದಿನಾಂಕ: 22-01-2026ರಂದು ನಿಧನಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯು ದಿನಾಂಕ: 23-01-2026 ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ಮೈಸೂರಿನ ಎನ್.ಆರ್.ಮೊಹಲ್ಲಾದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಮೃತರ ಪತ್ನಿ, ಪುತ್ರ, ಪುತ್ರಿಯರು ಹಾಗೂ ಅಳಿಯ ಮತ್ತು ಬಂಧು-ಮಿತ್ರರು

8ನೇ ವರ್ಷದ ಪುಣ್ಯಸ್ಮರಣೆ



ಮಾನಸ ಎಸ್.ಜಿ.

ಪೊಲೀಸ್ ಇಲಾಖೆ

ಜನನ: 24.7.1990

ನಿಧನ: 23.1.2018

ದಿನ ಕಳೆದರು ಮಾಸ ಕಳೆದರು ವರ್ಷಗಳೆ ಕಳೆದರು ಸದಾ ನಿಮ್ಮ ನೆನಪಿನಲ್ಲಿ ಇರುವ ನಿಮ್ಮ ಪ್ರೀತಿಪಾತ್ರರು ತಾಯಿ ಶ್ರೀಮತಿ ರಾಜೇಶ್ವರಿ ಮತ್ತು ತಂದೆ ಗಣೇಶ.ಎಸ್.ಎಂ & ತಮ್ಮ ಮದನ್ ಕುಮಾರ್.S.G, ತಂಗಿಯರು ಮೇಘನ.S.G, ಇಂಚನ.S.G, ಮೌನ.S.G ಮತ್ತು ಬಂಧು ಮಿತ್ರರು ಸಿಂಧುವಳ್ಳಿ ಗ್ರಾಮ, ನಂಜನಗೂಡು ತಾ॥

12ನೇ ವರ್ಷದ ಸವಿನೆನಪು



ಎಸ್.ಶಿವಕುಮಾರ್

ಮಾಲೀಕರು

ಎಸ್.ಇ.ಎಲ್ ಡ್ರೈ ಕ್ಲೀನರ್ಸ್, ಕೆ.ಆರ್. ಸರ್ಕಲ್, ಮೈಸೂರು.

ನೀವು ನಮ್ಮನ್ನಗಲಿ 12 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ನೆಲೆಸಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ.

ಪತ್ನಿ: ಗೌರಮ್ಮ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು

Aquaguard & Kent Water Purifier

Sales & Service

9901200444

#319, Near Mega Medical Store, Kuvempunagar

46 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

G9 projects — Designing your Dreams · Vee2 Developers

POORVA SHELTERS PHASE - I , II & III

Go easy on your pockets

INVESTMENT FRIENDLY PLOTS

20×30 | 30×40 & 20×40 | 30×50

Near to Marvel PU College

Lalithadripura Ring road Mysuru

8088-707-707

NOT GETTING YOUR

STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

ಸಿಬ್ಬಂದಿ ಬೇಕಾಗಿದ್ದಾರೆ

- SSLC / PUC ಪಾಸ್ / ವೈಫಲ್ಯ – 40 ಪೋಸ್ಟ್‌ಗಳು
- ITI EM (ಪುರುಷರು ಮಾತ್ರ) – 10 ಪೋಸ್ಟ್‌ಗಳು
- 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಆರಂಭಿಕ ವೇತನ ರೂ 17,250

ಅಂಕಪಟ್ಟಿಗಳು, ಆಧಾರ್‌ನೊಂದಿಗೆ ಸಂದರ್ಶನಕ್ಕೆ ಬನ್ನಿ

ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ

ಎಕ್ಸೆಲ್-ಫಾರ್ ಇಲೆಕ್ಟ್ರಾನಿಕ್ಸ್ ಪ್ರೈವೆಟ್ ಲಿಮಿಟೆಡ್

292/ಬಿ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು

ಫೋನ್: 9844157111, 9900557929

GENIUS PU COLLEGE in Collaboration with **THIMMARAJU COACHING CENTRE(TCC)**

No-18, Block No-26, SBM Colony, High-Tension Line Road, Srirampura II Stage, Mysuru-570023

WALK-IN INTERVIEW

On **Sunday 25/1/2026** at the above said Premises between 11:00 AM to 2:00PM for the following posts

Sl. No.	Post	No. of Posts
1	STUDENT COUNSELLOR (PRO)-Male candidate	1
2	TELE CALLERS (Female Candidate)	2

Qualification for Tele caller: PUC / Degree with Good communication skills in English & Kannada. Experience in education sector preferred.

Candidates may send their resumes to **WhatsApp 81234 91212 OR mail to** svmtrust2025@gamil.com

Admission Open 2026-27

for **I&II PUC** (SCIENCE & COMMERCE)

Integrated With

KCET /IIT-JEE/ NEET/CA/CMA/NDA

For Details Contact: Ph-81234 71212 / 81234 81212

Chamarajangara Dist. Co-Operative Milk Union Ltd.,

Kuderu Village & Post, Santhemarahalli Hobali, Chamarajanagara - 571 316

Phone No. :08226-234848, E-mail: enggc1amul@gmail.com

No: CHAMUL/ENGG/M(E)/Architects Empanelment/2025-26 Date:22.01.2026

TENDER NOTIFICATION FOR EMPANELMENT OF ARCHITECTS FOR A PERIOD OF 2 YEARS (THROUGH KPP PORTAL)

- Chamarajanagar Co-operative Milk Union Ltd.(CHAMUL) Chamarajanagar, is contemplating to build Civil Structures for the establishment of Ice - cream plant, Camp offices, ETP, roads and pavements and other developmental works in next 2 years. The Union intends to hire the services of reputed competent 'Architects' for planning, economical designing, and regular/periodical inspection of the proposed projects.
- In the event of exigencies CHAMUL reserves its right to obtain Architect services from any Architect other than the architects who will not be a part of the panel of architects also. CHAMUL reserves the right to accept or reject the applications without assigning any reason thereof.
- Interested reputed 'Architects' who have handled at least three Dairy plants/LMP with products plants/ice cream plant's, Civil works of an outlay of (Minimum) Rs. 20.00 Crores each in the past ten years and Architects having registered office in the vicinity of 200 kms from Kuderu may participate in the tender through KPP Portal under the existing system (Technical & Financial). Interested Architects may submit their tender through web site **https://kppp.karnataka.gov.in**

1. Tender schedules may be downloaded from : **27.01.2026**
2. Last date and time for Tender submission : **13.02.2026 up to 4:00 PM**
3. Tender [Part 1] to be opened on : **16.02.2026 at 10:00 AM**

For More information Please Contact Manager(Engg), **Mob No.8867915047** During Working Hours.

For Chamarajanagar Dist. Co-operative Milk Producers Societies Union Ltd.,

Sd/- Managing Director

Myofficespace Job Opening

- Electrical Technician (ITI/DIP)
- AC Technician (ITI/DIP)
- IT/Network Assistant (ITI/DIP)
- Interior Project Assistant (ITI/DIP)
- Electrical Engineer
- HVAC Engineer
- STP Operator (ITI/DIP)
- Operations Manager

Qualification: ITI / PU / Engineering / Diploma with minimum 1-2 years of experience.

Walk -in interview on Saturday, 24-1-2026

Contact HR Manager-Neha: 9980457450

Location: **Myofficespace**

2nd Floor, BM Habitat Mall, Jayalakshmipuram, Mysore.

ಸೈಟ್ ಮಾರಾಟಕ್ಕೆ

ಜ್ಞಾನಸರೋವರಕ್ಕೆ ಹೊಂದಿಕೊಂಡಿರುವ, ದೆಹಲಿ ಪಬ್ಲಿಕ್ ಶಾಲೆಯ ಸಮೀಪ 60x40 ಅಡಿ ಅಳತೆಯ ದಕ್ಷಿಣ-ಪಶ್ಚಿಮ ಕಾರ್ನರ್ ಸೈಟ್ ಮಾರಾಟಕ್ಕಿದೆ. ಬನ್ನೂರು ರಸ್ತೆ, ಮೈಸೂರು

ಸಂಪರ್ಕಿಸಿ: 9731749500



ಹಸಿರು ನಮ್ಮ ಉಸಿರು

FOR SALE

40x60 North facing Site for Sale in Gokulam 3rd Stage, behind Doctor's Corner, Price : 15,000/- Sqft

9731316229

NAYANA KUMAR'S MULTI-SPECIALITY HOSPITAL

Near Nethaji Circle, Dattagalli, Mysuru - 570022

NOW HIRING MEDICAL CONSULTANTS

We are inviting qualified and dedicated consultants to join our growing healthcare team.

- **Obstetrics & Gynecologist – 1** — Qualification: MS
- **General Surgeon – 1** — Qualification: MS with Laparoscopic Surgery
- **Radiologist – 1** — Qualification: DMRD / DNB / MD
- **ICU Intensivist – 2** — Qualification: Graduate in Emergency Medicine
- **Anesthetist – 2** — Qualification: DNB / MD
- **Medical Superintendent – 2** — 4–5 Years Experience
- **HR Manager –** 2–4 Years Experience
- **Staff Nurse (B.Sc / GNM) –** 5 Years Experience
- **Pharmacists –** Experience / Fresher
- **Lab Technician –** Experience / Fresher

DIRECT WALK-IN INTERVIEW

Saturday, 24th & 26th January 2026

10:30 AM to 1:00 PM

Salary: As per industry standards

For more Details Contact:

Dr. Raghu Kumar: 8217258575 · Dr. Poornima: 9980134828 · Dr. Thejas: 9742714758 · Gopala Nayak: 9513310255


30/40 ನಿವೇಶನಗಳು ಮಾರಾಟಕ್ಕಿವೆ

ಸಾನ್ವಿ ಎನ್‌ಕ್ಲೇವ್

ಜಯಪುರ ಬಸ್ ನಿಲ್ದಾಣದ ಹಿಂದೆ (ಎಚ್.ಡಿ.ಕೋಟೆ, ರಾಷ್ಟ್ರೀಯ ಹೆದ್ದಾರಿ)

ರೆಡಿ ಟು ರಿಜಿಸ್ಟರ್ (A ಖಾತ)

ಬ್ಯಾಂಕ್ ಸಾಲ ಸೌಲಭ್ಯವಿದೆ



9972602543

www.arkaproperties.in

ARKA PROPERTIES Let's Grow Together

RERA REGISTERED: PRM/KA/RERA/1268/378/AG/190125/001254

STAR OF MYSORE

SPECIAL ISSUE

Star of Mysore is completing **48** years of service on **16th February 2026** and entering **49th** year of publication. As in the past, this year too we will be publishing a Special Issue.

We request our advertisers & patrons to release their advertisements before **5th February** to facilitate printing as per schedule.

HEAD OFFICE

0821-2496520 (5-LINES) Ad Dept. - 0821-2496522 / 23

Email : ad@starofmysore.com

Maria G. Fernandes - Advt. Manager: 80730-30835

Joy Anthony Dove - Sr. Executive-Ad Sales - 89516-68960

Prema - Sr. Executive Advertising - 98805-49879

• K.R. Circle Office : 0821-2431774 • D.D. Urs Road Office : 0821-2428695
• Kodagu Office : 97314-69871 • Mandya Office : 87629-60325
• Chamarajanagar : 92422-65657 • T.N. Pura : 94483-05750
• Nanjangud : 98805-09200 • Bengaluru : 98440-46761